# ಯುಗರಶ್ಮಿ

★ ಧರ್ಮವೂ ಲೋಕಶಾಂತಿಯೂ
★ ಯೇಸುಕ್ರಿಸ್ತರು ಕಾಶ್ಮೀರದಲ್ಲಿ ನಿಧನರಾಗಿರುವರೋ ?
★ ಇಮಾಂ ಮಹ್‌ದಿಯ ಸೂಚಕ ಕಾರ್ಯ: ಸೂರ್ಯ-ಚಂದ್ರ ಗ್ರಹಣಗಳು
★ ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ
★ ಮುಸ್ಲಿಂ ಮಹಿಳಾ ಸಂರಕ್ಷಣೆ ಮಸೂದೆ
★ ಅಹ್ಮದಿಯರು ಅಕ್ರಮಿಗಳಲ್ಲ


ತ್ರೈಮಾಸಿಕ

ಒಕ್ಟೋಬರ್ 1986

ಬೆಲೆ: ರೂ. 1-00


ನೀವು ತಿಳಿದೂ ಸತ್ಯವನ್ನು ಅಸತ್ಯದೊಂದಿಗೆ ಬೆರಸಬೇಡಿರಿ; ಸತ್ಯವನ್ನು ಮರೆಮಾಚಲೂ ಬಾರದು.

—ಪವಿತ್ರ ಖುರ್‌ಆನ್ (2:43)

# ಯುಗರಶ್ಮಿ ತ್ರೈಮಾಸಿಕ

10–23–1008, ಅನ್ಸಾರಿ ರೋಡ್, ಬಂದರ್, ಮಂಗಳೂರು—575001

ಬಿಡಿಪ್ರತಿ: ರೂ 1–00

ವಾರ್ಷಿಕ ಚಂದಾ: ರೂ. 4–00

ಅಂಚೆ ಮೂಲಕ: ರೂ. 5–00


ವಿಷಯ ಸೂಚಿಕೆ :


| | ಪುಟ |
|---|---|
| ★ ಯುಗರಶ್ಮಿಗೆ ಹನ್ನೆರಡನೆಯ ಹರೆಯ ... | 1 |
| ★ ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ... | 2 |
| ★ ಶತ್ರುಗಳು ಪರಾಜಯಗೊಳ್ಳುವರು ... | 2 |
| ★ ಧರ್ಮವೂ ಲೋಕಶಾಂತಿಯೂ ... | 3 |
| ★ ಯೇಸುಕ್ರಿಸ್ತರು ಕಾಶ್ಮೀರದಲ್ಲಿ ನಿಧನರಾಗಿರುವರೋ ? ... | 11 |
| ★ ಇಮಾಂ ಮಹ್‌ದಿಯ ಸೂಚಕ ಕಾರ್ಯ: ಸೂರ್ಯ–ಚಂದ್ರ ಗ್ರಹಣಗಳು ... | 16 |
| ★ ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ –3 ... | 21 |
| ★ ಪಾಕಿಸ್ತಾನದ ಸಿಂಧ್ ಪ್ರಾಂತ್ಯದ ಗವರ್ನರರಿಗೆ ಒಂದು ಪತ್ರ ... | 29 |
| ★ ಮುಸ್ಲಿಂ ಮಹಿಳಾ ಸಂರಕ್ಷಣೆ ಮಸೂದೆ ... | 31 |
| ★ ಅಹ್ಮದಿಯರು ಅಕ್ರಮಿಗಳಲ್ಲ ... | 32 |
| ★ ಅಹ್ಮದಿಯಾ ವಾರ್ತೆಗಳು ... | 33 |



## AHMADIYYA URDU LITERATURE

1. Ahmadiyyath Ka Paigham
2. Aqaide Ahmadiyyath
3. Zuhoore Iman Mahdi
4. Nuzoolul Masih
5. Kya Hazrath Masih Nasree Zinda Hein ?
6. Masih Hindustan Mein
7. Hazrath Masih Mashriq Mein
8. Sadaqathe Hazrath Masih Mauwood
9. Khatme Nubuwwath Ki Haqeeqath
10. Khathamunnabiyyeen Aur Buzurgane ummath

—: *WILL BE SENT FREE* :—

Apply with 30 paise stamp for each book to :

**The Book Secretary,**
**Ahmadiyya Muslim Mission,**
10–23–1008 Ansari Road,
Bunder, Mangalore–575001.

Muhammad Yusuf B.COM
MANJESHWAR

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

| ಸಂಪುಟ: 12 | ಆಗಸ್ಟ್–ಒಕ್ಟೋಬರ್ 1986 / ಝುಹೂರ್–ಇಖಾ 1365 | ಸಂಚಿಕೆ: 1 |
|---|---|---|

## ಯುಗರಶ್ಮಿಗೆ ಹನ್ನೆರಡನೆಯ ಹರೆಯ

ಈ ಸಂಚಿಕೆಯೊಂದಿಗೆ ಯುಗರಶ್ಮಿ ಹನ್ನೆರಡನೆಯ ಹರೆಯಕ್ಕೆ ಪದಾರ್ಪಣ ಮಾಡಿರುತ್ತದೆ. ಈ ಶುಭ ಸಂದರ್ಭದಲ್ಲಿ ನಾವು ಅಲ್ಲಾಹನಿಗೆ ಅಪಾರ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ ಹಾಗೂ ನಮ್ಮ ಓದುಗರಿಗೂ ಹಿತೈಷಿಗಳಿಗೂ ಶುಭವನ್ನು ಕೋರುತ್ತೇವೆ.

ಇತ್ತೀಚೆಗಿನ ದಿನಗಳಲ್ಲಿ ಅಹ್ಮದಿಯರ ಬಗ್ಗೆ ನವೀನ ಅಪಪ್ರಚಾರಗಳು ನಡೆಯುತ್ತಿವೆ. ಅವರ ವಿರುದ್ಧ ಹಲವಿಧ ಗೂಢಾಲೋಚನೆಗಳು ರೂಪುಗೊಳ್ಳುತ್ತಿವೆ.

ಪಾಕ್ ಸರಕಾರ ಇಸ್ಲಾಮಿನ ಹೆಸರು ಹೇಳಿ ಅಹ್ಮದಿಯರನ್ನು ಸದೆಬಡಿಯಲು ನಾನಾ ವಿಧದಲ್ಲಿ ಪ್ರಯತ್ನಿಸುತ್ತಿದೆ. ಇಸ್ಲಾಮಿನ ಗುತ್ತಿಗೆದಾರಿಕೆಯನ್ನು ಹೊಂದಿರುವಂತೆ ವರ್ತಿಸುವ, ಪಾಕಿಸ್ತಾನವನ್ನು 'ಇಸ್ಲಾಮೀ'ಕರಿಸಲು ಹೊರಟ ಅಧ್ಯಕ್ಷ ಝಿಯಾ ಹಾಗೂ ಅವರ ಸಿಬ್ಬಂದಿಗಳು ಹುಚ್ಚು ಮುಲ್ಲಾಗಳ ಜತೆಗೂಡಿ ಇಸ್ಲಾಮಿನ ಮೂಲಮಂತ್ರವಾದ لا اله الا الله محمد رسول الله "ಅಲ್ಲಾಹನು ಮಾತ್ರ ಆರಾಧನೆಗರ್ಹನು; ಮುಹಮ್ಮದ್ ಅವನ ಪ್ರವಾದಿ" ಎಂಬ "ಕಲಿಮ" ವಾಕ್ಯಕ್ಕೇ ಅವಮರ್ಯಾದೆ ಮಾಡುತ್ತಾರೆ. ಕಲಿಮ ಲಿಖಿತವನ್ನು ಅಹ್ಮದಿಯರ ಮಸೀದಿಯಿಂದ ಅಳಿಸಿಹಾಕುತ್ತಾರೆ. ಕಲಿಮವನ್ನು ಬರೆದ ಬ್ಯಾಡ್ಜನ್ನು ಅಹ್ಮದಿಯರ ಎದೆಯಿಂದ ಕಿತ್ತೆಸೆಯುತ್ತಾರೆ. ಕಲಿಮವನ್ನು ಎತ್ತಿಹಿಡಿದ ಅಪರಾಧಕ್ಕಾಗಿ ಅವರಿಗೆ ದಂಡವನ್ನು ಹೊರಿಸಲಾಗುತ್ತದೆ; ಜೈಲುವಾಸವನ್ನು ವಿಧಿಸಲಾಗುತ್ತದೆ. ಅವರ ಮಸೀದಿಗಳನ್ನು ಧ್ವಂಸಮಾಡಲಾಗುತ್ತದೆ.

1984 ಎಪ್ರಿಲ್ 26ರಂದು ಅಹ್ಮದಿಯರ ವಿರುದ್ಧವಾಗಿ ಹೊರಡಿಸಲಾದ ಅಧ್ಯಾದೇಶದ ನಂತರ ಪಾಕಿಸ್ತಾನದಲ್ಲಿ 15 ಮಂದಿ ಅಹ್ಮದಿಯರು ರಕ್ತಸಾಕ್ಷಿಯಾದರು. ಸುಮಾರು 20 ಅಹ್ಮದಿಯರನ್ನು ವಿವಿಧ ಕಡೆಗಳಲ್ಲಿ ಹತ್ಯೆ ಮಾಡಲು ವಿಫಲ ಪ್ರಯತ್ನಗಳನ್ನು ನಡೆಸಲಾಯಿತು. ಆದರೆ ಕೊಲೆಪಾತಕಿಗಳ ವಿರುದ್ಧವಾಗಲಿ, ಕೊಲೆಯತ್ನ ನಡೆಸಿದ ಅಪರಾಧಿಗಳ ಮೇಲೆಯಾಗಲಿ ಯಾವುದೇ ಮೊಕದ್ದಮೆಯನ್ನು ದಾಖಲುಮಾಡಲಾಗಿಲ್ಲ! ನಾಲ್ವರು ಅಹ್ಮದಿಯರ ಮೇಲೆ ಸುಳ್ಳು ಆರೋಪ ಹೊರಿಸಿ ಮರಣದಂಡನೆ ವಿಧಿಸಲಾಗಿದೆ! ಕಲಿಮ ಬ್ಯಾಡ್ಜ್ ಧರಿಸಿದ್ದಕ್ಕೆ 558 ಅಹ್ಮದಿಯ

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1. ವಿವಾಹ ನನ್ನ ಮಾರ್ಗವಾಗಿದೆ. ನನ್ನ ದಾರಿಯಿಂದ ಮುಖ ತಿರುಗಿಸುವವನು ನನ್ನ ಪೈಕಿಯವನಲ್ಲ.

2. ನಿಮಗೆ ಹೃದ್ಯವಾಗಿ ತೋರುವ, ವಿಶ್ವಾಸವೂ ನೈತಿಕ ನೆಲೆಯೂ ಇರುವ ಒಬ್ಬಾತ ವಿವಾಹಾಲೋಚನೆಗಾಗಿ ಬಂದರೆ ಅದನ್ನು ಸ್ವೀಕರಿಸಿರಿ.

3. ಸಂದಾಯ ಮಾಡಲು ಅಸಾಧ್ಯವಾಗುವಷ್ಟು ಹೆಚ್ಚಾದ ಮೊತ್ತವನ್ನು ಕನ್ಯಾಶುಲ್ಕವಾಗಿ ನಿಶ್ಚಯಿಸಬಾರದು.

4. ಸ್ತ್ರೀಗೆ ಸಂರಕ್ಷಣೆಯು ಅಗತ್ಯವಿದೆ. ಅವಳು ಅರಕ್ಷಿತಳಾಗಿರುವ ಸಂದರ್ಭದಲ್ಲಿ ಸೈತಾನ ಅವಳನ್ನು ಹಿಡಿಯುತ್ತಾನೆ.

5. ಸರಳವಾದ ವಸ್ತ್ರಧಾರಣೆ ಮಾಡಿದ ಸ್ತ್ರೀಯ ರೊಡನೆ ಅಲ್ಲಾಹನು ಕರುಣೆಯುಳ್ಳವನಾಗುವನು.

6. ಅಪರಿಚಿತ ಸ್ತ್ರೀಯೊಂದಿಗೆ ಒಬ್ಬಂಟಿಗನಾಗಿರುವುದರಿಂದ ಜಾಗರೂಕರಾಗಿರಿ. ಮದುವೆ ನಿಷೇಧಿಸಲ್ಪಟ್ಟ ವೃತ್ತದಿಂದ ಹೊರಗಿನ ಸ್ತ್ರೀಯೊಂದಿಗೆ ಒಬ್ಬಂಟಿಗನಾಗಿರುವವನು ಪರೀಕ್ಷೆಗೆ ಗುರಿಯಾಗುವನು.

7. ನಿಕಟ ಸಂಬಂಧಿಯೊಂದಿಗೆ ಹೊರತು ಮೂರು ದಿವಸ ಕಾಲ ನಿರಂತರ ಓರ್ವ ಸ್ತ್ರೀ ಯಾತ್ರೆ ಮಾಡಬಾರದು.

(ಸರ್ ಮುಹಮ್ಮದ್ ಝಫ್ರುಲ್ಲಾ ಖಾನ್ ಬರೆದ Wisdom of the Holy Prophetನಿಂದ ಉದ್ಧೃತ)

---

# ಶತ್ರುಗಳು ಪರಾಜಯಗೊಳ್ಳುವರು

ನಾನು ನಾಶಗೊಳ್ಳಬೇಕೆಂದೂ ನನ್ನ ಹೆಸರೂ ಕುರುಹೂ ಇಲ್ಲದಾಗುವಂತೆ ಅವರ ಕುತಂತ್ರ ನಡೆಯಬೇಕೆಂದೂ ಎದುರಾಳಿಗಳು ಆಶಿಸುತ್ತಾರೆ. ಆದರೆ ಅವರು ಈ ಇಚ್ಛೆಗಳಲ್ಲಿ ಪರಾಜಯಗೊಳ್ಳುವರು; ಪರಾಭವದೊಂದಿಗೆ ಮರಣವನ್ನು ಸಹ ಪಡೆಯುವರು. ಅವರಲ್ಲಿ ಅನೇಕರು ನಮ್ಮ ಕಣ್ಮುಂದೆ ಮೃತಿಹೊಂದಿದರು. ಗೋರಿಗಳಲ್ಲಿ ಅವರು ನಷ್ಟವನ್ನು ಸಹ ಕಂಡಾಯಿತು. ಅಲ್ಲಾಹನು ನನ್ನ ಎಲ್ಲಾ ಉದ್ದೇಶಗಳನ್ನು ಈಡೇರಿಸುವನು. ನಾನು ನನ್ನ ಇಷ್ಟಪ್ರಕಾರ ಬಂದವನಲ್ಲ. ಅಲ್ಲಾಹನ ಕಡೆಯಿಂದ ಈ ಸಮರದಲ್ಲಿ ಏರ್ಪಟ್ಟಿರುವಾಗ ಮತ್ತೆ ಹೇಗೆ ನಾನು ಸೋಲುವುದು ? ಯಾರು ನನಗೆ ನಷ್ಟವುಂಟುಮಾಡುವರು ? ಈ ವಸ್ತುಸ್ಥಿತಿಯನ್ನು ಅವಿವೇಕಿ ಜನರು ಮನಗಾಣುವುದಿಲ್ಲ.

(ಬರಾಹೀನೆ ಅಹ್ಮದಿಯಾ, ಭಾಗ 5, ಪುಟ 305)

—ಹಝ್ರತ್ ಅಹ್ಮದ್

ಅಹ್ಮದಿಯಾ ಜಮಾಅತಿನ ಸ್ಥಾಪಕರು.

---

ರನ್ನು ದಸ್ತಗಿರಿ ಮಾಡಿ ಮೊಕದ್ದಮೆ ಹೂಡಲಾಗಿದೆ. 130 ಮಸೀದಿಗಳಿಂದ ಕಲಿಮವನ್ನು ಅಳಿಸಲಾಗಿದೆ. 2 ಮಸೀದಿಗಳನ್ನು ನಾಶಪಡಿಸಲಾಗಿದೆ. 4 ಮಸೀದಿಗಳನ್ನು ಸರಕಾರ ವಶಪಡಿಸಿಕೊಂಡಿದೆ. 130 ಗ್ರಂಥಗಳಿಗೂ ಅನೇಕ ಪತ್ರಿಕೆಗಳಿಗೂ ನಿಯತಕಾಲಿಕಗಳಿಗೂ ಮುಟ್ಟುಗೋಲು ಹಾಕಲಾಗಿದೆ.

ಅಲ್ಲಾಹನು ಪಾಕಿಸ್ತಾನದಲ್ಲಿ ಅಹ್ಮದಿಯರ ತಾಳ್ಮೆಯನ್ನು ಪರೀಕ್ಷಿಸುತ್ತಿದ್ದಾನೆಯೇ ? ಸರ್ವಾಧಿನಾಥನಾದ ಅಲ್ಲಾಹನನ್ನು ನೆಚ್ಚಿಕೊಂಡಿರುವ ಅಹ್ಮದಿಯರು ಅವನಿಗೆ ಮಾತ್ರವೇ ಶರಣುಹೊಗುತ್ತಾರೆ.

ಯಾವುದೇ ಸಂದರ್ಭದಲ್ಲೂ ಸಂಯಮನ ಮತ್ತು ಸಹನೆಯನ್ನು ಕೈಬಿಡಬಾರದೆಂದೂ ನಮ್ಮ ಪ್ರತಿಭಟನೆಯನ್ನು ಪ್ರಲಾಪ ರೂಪದಲ್ಲಿ ನಮ್ಮ ಒಡೆಯನಾದ ಅಲ್ಲಾಹನ ಸನ್ನಿಧಿಯಲ್ಲಿ ಸಲ್ಲಿಸಬೇಕೆಂದೂ ಅಹ್ಮದಿಯಾ ಜಮಾಅತಿನ ಜಾಗತಿಕ ನೇತಾರರಾದ ಹಝ್ರತ್ ಖಲೀಫತುಲ್ ಮಸೀಹ್ IV ಪಾಕಿಸ್ತಾನದ ಅಹ್ಮದಿಯರಿಗೂ ಪ್ರಪಂಚದ ಎಲ್ಲ ಅಹ್ಮದಿಯರಿಗೂ ಆದೇಶಿಸಿರುತ್ತಾರೆ. ಪ್ರಾರ್ಥನೆ ಮಾತ್ರವೇ ಅಹ್ಮದಿಯರ ಆಯುಧ. ಇದರ ಶಕ್ತಿ ಶೌರ್ಯವನ್ನು ಲೋಕವು ಮತ್ತೊಮ್ಮೆ ಕಾಣಲಿದೆ. ಪಾಕಿಸ್ತಾನದ ಜನತೆಯನ್ನು ಅಲ್ಲಾಹನು ಸತ್ಪಥದಲ್ಲಿ ನಡೆಸಲಿ.

—ಸಂಪಾದಕ

# ಧರ್ಮವೂ ಲೋಕಶಾಂತಿಯೂ

★ ಮೌಲಾನ ಬಿ. ಅಬ್ದುಲ್ಲಾ ಎಚ್. ಎ.

ಜೀವಿತವನ್ನು ಸುಖಕರವನ್ನಾಗಿ ಮಾಡಲಿಕ್ಕೂ ಅದಕ್ಕೆ ಆವಶ್ಯಕವಾದ ಕಾರ್ಯಗಳನ್ನು ಗಳಿಸಲಿಕ್ಕೂ ಮನುಷ್ಯರಿಗೆ ಅತ್ಯಗತ್ಯವಾಗಿರುವುದು ಶಾಂತಿಕರವಾದ ಒಂದು ವಾತಾವರಣವಾಗಿದೆ. ಆದ್ದರಿಂದ, ತೃಪ್ತಿಕರವೂ ಉತ್ಕರ್ಷಕ್ಕೆ ಸಹಾಯಕವೂ ಆದ ಜೀವನ ನಡೆಸಲು ಮನುಷ್ಯನು ಸದಾ ಶಾಂತಿಯನ್ನು ಆಶಿಸುತ್ತಾನೆ. ಮನುಷ್ಯನ ಪರಿಸ್ಥಿತಿಯೂ ಅವನು ಜೀವಿಸುವ ಪರಿಸರವೂ ಅವನ ಹೃದಯದ ಸುಖಾಸುಖಗಳನ್ನು ಬಾಧಿಸುವುದರಿಂದ ತನ್ನ ಸುತ್ತಮುತ್ತಲೂ ಸಮಾಧಾನಕರ ಹಾಗೂ ಪ್ರಶಾಂತವಾದ ವಾತಾವರಣವಿದ್ದರೆ ಅವನ ಹೃದಯ ಸಂತೋಷಗೊಳ್ಳುತ್ತಲೂ ಸುತ್ತುಮುತ್ತಲಿನ ಸ್ಥಿತಿ ಪ್ರಕ್ಷುಬ್ಧವಾಗಿದ್ದರೆ ಅವನು ಅಸ್ವಾಸ್ಥ್ಯವನ್ನೂ ಅಸುಖವನ್ನೂ ಅನುಭವಿಸುತ್ತಲೂ ಇರುತ್ತಾನೆ. ಆದ್ದರಿಂದ, ಅವನ ಪುರೋಗಮನಕ್ಕೆ ಅವಶ್ಯವಾಗಿರುವಂಥ ಅಕ್ಷುಬ್ಧವಾದ ಪರಿಸರವನ್ನೂ ಶಾಂತಿ ಸಂವರ್ಧಕವಾದ ಸ್ಥಿತಿಯನ್ನೂ ಅವನು ಸದಾ ಇಚ್ಛಿಸುತ್ತಾನೆ. ಹೀಗೆ ಮನುಷ್ಯನು ತನ್ನ ಜೀವಿತದಲ್ಲಿ ಅತ್ಯಾವಶ್ಯಕವಾದ ಈ ನೆಮ್ಮದಿಯ ಯಥಾರ್ಥ ಬೆಲೆಯನ್ನೂ ಅದರ ಆವಶ್ಯಕತೆಯನ್ನೂ ಚೆನ್ನಾಗಿ ಮನಗಾಣುವುದು ಈ ಶಾಂತಸ್ಥಿತಿ ನಷ್ಟವಾಗಿ ಕ್ಷೋಭಕಲುಷಿತವಾದೊಂದು ವಾತಾವರಣ ಉಂಟಾಗುವ ಸಂದರ್ಭದಲ್ಲಾಗಿದೆ. ಮಳೆ ಮನುಷ್ಯನಿಗೆ ಬಹಳ ಆವಶ್ಯಕವಾದುದೂ ಅವನ ಜೀವನದಲ್ಲಿ ಅನಿವಾರ್ಯವಾದುದೂ ಆಗಿದೆ. ಆದರೆ ಉಷ್ಣವು ಅತಿ ಭಯಂಕರವಾಗಿ ವರ್ಧಿಸಿ, ಬಿಸಿಲಿನ ಕಾಠಿಣ್ಯದಿಂದ ಭೂಮಿ ಒಣಗಿ, ಮನುಷ್ಯರೂ ಇತರ ಜೀವಿಗಳೂ ನೀರಿಗಾಗಿ ಹಾತೊರೆದು ಮಳೆಯನ್ನು ತಾಳ್ಮೆಗೆಟ್ಟು ನಿರೀಕ್ಷಿಸುವಂಥ ಕಾಲದಲ್ಲಿ ಮಳೆಯ ಬೆಲೆಯೂ ಅದರ ಆವಶ್ಯಕತೆಯೂ ಅವನಿಗೆ ಸರಿಯಾದ ರೀತಿಯಲ್ಲಿ ಮನವರಿಕೆಯಾಗುತ್ತದೆ. ಇದೇ ಪ್ರಕಾರವೇ ಮನುಷ್ಯರೆಡೆಯಲ್ಲಿ ಸಮಾಧಾನ ಇಲ್ಲದೆ ಹೋಗಿ ಅವರು ಮೃಗಗಳೋಪಾದಿಯಲ್ಲಿ ಅನ್ಯೋನ್ಯ ಕಚ್ಚಾಡಿಕೊಂಡು ಜೀವಿತ ದುರ್ಭರವಾಗಿ ಭವಿಸುವಾಗ ಅವರಿಗೆ ಸಮಾಧಾನದ ಬೆಲೆಯೂ ಪ್ರಯೋಜನವೂ ಚೆನ್ನಾಗಿ ವಿಶದವಾಗುತ್ತದೆ. ಇಂದು ಜನರು ಜೀವಿಸುವುದು ಪ್ರಕ್ಷುಬ್ಧವೂ ಶಾಂತಿಶೂನ್ಯವೂ ಆದ ವಾತಾವರಣದಲ್ಲಾಗಿದೆ. ಲೋಕದಲ್ಲಿ ಎಲ್ಲಿ ನೋಡಿದರೂ ವಿವಿಧ ಜಾತಿಗಳಿಗೂ ಸಮುದಾಯಗಳಿಗೂ ಮಧ್ಯೆ ಪರಸ್ಪರ ವಿಶ್ವಾಸವೂ ಸೌಹಾರ್ದವೂ ನಷ್ಟವಿರುವುದಾಗಿ ಗೋಚರಿಸುತ್ತದೆ. ಬಲಶಾಲಿಗಳು ಬಲಹೀನರನ್ನು ದ್ರೋಹಿಸುವ, ಶಕ್ತರು ಬಡವರನ್ನು ಹೊಸಕಿಹಾಕುವ ಒಂದು ಅವಸ್ಥೆಯಲ್ಲಿ ಇಂದು ಮನುಷ್ಯಸಮುದಾಯ ಜೀವಿಸುತ್ತದೆ. ಈ ಸ್ಥಿತಿಯನ್ನು ಕಾಣುವಾಗ ಸಮಾಧಾನದ ಬೆಲೆಯನ್ನು ಮನಗಂಡು ಅದನ್ನು ಗಳಿಸಲಿಕ್ಕಾಗಿ ಎಲ್ಲರೂ ಬಯಸುತ್ತಾರೆ.

ಮನುಷ್ಯರೆಡೆಯಲ್ಲಿ ಅಶಾಂತಿಯನ್ನುಂಟುಮಾಡುವುದು ಧರ್ಮವೆಂದೂ ಆದ್ದರಿಂದ ಲೋಕ ಶಾಂತಿ ಹಾಗೂ ಸೌಹಾರ್ದಮಯ ಜೀವನಕ್ಕೋಸ್ಕರ ಧರ್ಮಗಳನ್ನೆಲ್ಲಾ ನಾಶಪಡಿಸಬೇಕೆಂದೂ ಹೇಳಿ ನಾಸ್ತಿಕರೂ ವಿಚಾರವಾದಿಗಳೂ ಸಾಮಾನ್ಯವಾಗಿ ಧರ್ಮದ ಕುರಿತು ಆಕ್ಷೇಪಿಸುತ್ತಾರೆ. ಜಗತ್ತಿನಲ್ಲಿ ಧರ್ಮವಿಶ್ವಾಸ ಪ್ರಚಾರಗೊಳ್ಳುವುದರ ಬದಲು ವಿದ್ಯಾಭ್ಯಾಸ, ಆಧುನಿಕ ನಾಗರಿಕತೆ ಮತ್ತು ವಿಜ್ಞಾನ ಪಸರಿಸಿ ಮನುಷ್ಯರು ನವೀನ ವಿದ್ಯಾಭ್ಯಾಸದಿಂದ ವಿಭೂಷಿತರಾಗುವ ಪಕ್ಷದಲ್ಲಿ ಅವರು ಅನ್ಯೋನ್ಯ ಸಹೋದರರಂತೆ ಜೀವಿಸುವಂತಾಗಿ, ಲೋಕದಲ್ಲಿ ಪ್ರಶಾಂತಸುಂದರವಾದ ವಾತಾವರಣವೇರ್ಪಡುತ್ತದೆಂದು ಧರ್ಮ ವಿರೋಧಿಗಳು ಘೋಷಿಸುತ್ತಾರೆ. ಆದರೆ ವಿಜ್ಞಾನಕ್ಕೂ ವಿದ್ಯಾಭ್ಯಾಸಕ್ಕೂ ನಾಗರಿಕತೆಗೂ ಅಭೂತಪೂರ್ವವಾದ ಪ್ರಚಾರ ಸಿದ್ಧಿಸಿ ಮನುಷ್ಯರು ಕ್ರಮೇಣ ದೈವವಿಶ್ವಾಸವನ್ನೂ ಧರ್ಮಾದರ್ಶಗಳನ್ನೂ ಕೈಬಿಟ್ಟು ಭೌತಿಕ ಪರಿಷ್ಕಾರಾಕಾಂಕ್ಷಿಗಳೂ ವಿಜ್ಞಾನ ಪ್ರೇಮಿಗಳೂ ಆಗಿಬಿಟ್ಟಿರುವ ಈ ಇಪ್ಪತ್ತನೆಯ ಶತಮಾನದ ಆರಂಭ

ದೊಂದಿಗೆ ಧರ್ಮದ್ವೇಷಿಗಳ, ಮೇಲೆ ಹೇಳಿದ ಆಕ್ಷೇಪ ಅರ್ಥಶೂನ್ಯವೆಂದೂ ಅದು ಅವರು ಅಜ್ಞತೆಯಿಂದಾಗಲಿ ಧರ್ಮವಿರಕ್ತಿಯಿಂದಾಗಲಿ ಮಾತ್ರ ಹೇಳುವುದಾಗಿದೆ ಯೆಂದೂ ಲೋಕಕ್ಕೆ ಅನುಭವವಾಗಲು ತೊಡಗಿತು. ಧರ್ಮಾನುಯಾಯಿಗಳು ಧರ್ಮದ ಹೆಸರಿನಲ್ಲಿ ಶಾಂತಿ ವಿಧ್ವಂಸಕವಾದ ಹಲವು ಅತ್ಯಾಚಾರಗಳನ್ನೂ ಅನೀತಿ ಗಳನ್ನೂ ಕೈಗೊಂಡಿರುವುದು ವಾಸ್ತವ. ಆದರೆ ಅವರು ಹಾಗೆ ಮಾಡಿದ್ದು ತಿಳುವಳಿಕೆ ಇಲ್ಲದೆಯೂ ಧರ್ಮೋ ದೇಶಗಳ ತಾತ್ಪರ್ಯವನ್ನು ಗ್ರಹಿಸದೆಯೂ ಮಾತ್ರ ವಾಗಿದೆ. ಅವರು ಈ ಅಜ್ಞತೆಯ ನಿಮಿತ್ತ ಅನೇಕ ಶತವರ್ಷಗಳಲ್ಲಿ ವರ್ತಿಸಿದ ಅಕ್ರಮಗಳಿಗಿಂತಲೂ ಅನ್ಯಾಯಗಳಿಗಿಂತಲೂ ಎಷ್ಟೋ ಪಾಲು ಅಧಿಕ ಅಕ್ರಮ ಗಳೂ ಅನ್ಯಾಯಗಳೂ ಈ ಕಾಲದಲ್ಲಿ ನಾಗರಿಕತೆಯೂ ವಿದ್ಯಾಭ್ಯಾಸವೂ ಬುದ್ಧಿವಿಕಾಸವೂ ಸಿದ್ಧಿಸಿರುವ ಜಾತಿಯ ವರು ವಿದ್ಯೆ ಮತ್ತು ವಿಜ್ಞಾನದಿಂದ ಲಭಿಸಿದ ಬಲದಿಂದ ಅಲ್ಪ ಕಾಲದೊಳಗೆ ಮಾಡಿಬಿಟ್ಟಿದ್ದಾರೆ. ಹೀಗೆ ವಿಜ್ಞಾ ನದ ಶಕ್ತಿಯಿಂದ ಮಾಡಲ್ಪಡುವ ಈ ಅಕ್ರಮಗಳು ನಾಸ್ತಿಕರೂ ವಿಚಾರವಾದಿಗಳೂ ಧರ್ಮದ ಕುರಿತು ಎತ್ತುವ ಆಕ್ಷೇಪ ಕೇವಲ ಆಧಾರರಹಿತವಾದುದೆಂದು ಚಿಂತಕರಿಗೆ ಮನಗಾಣಿಸಿಕೊಡುತ್ತವೆ.

ಕಳೆದ ಮಹಾ ಯುದ್ಧಗಳಿಂದ ಪ್ರಪಂಚ ದಲ್ಲುಂಟಾದ ನಾಶನಷ್ಟ ಎಷ್ಟೆಂದು ಹೇಳಲಸದಳ. ಆಗ ನಡೆದ ಭೀಕರ ಹತ್ಯಾಕಾಂಡವೂ ರಕ್ತಪಾತವೂ ಧರ್ಮದ ಹೆಸರಿನಲ್ಲಾಗಿರಲಿಲ್ಲ. ಧರ್ಮದ ಹೆಸರಿನಲ್ಲಿ ಅನೇಕ ನೂರು ವರ್ಷಗಳಲ್ಲಿ ನಡೆದಿರುವ ಆಕ್ರಮಗಳ ಫಲ ದಿಂದುಂಟಾದ ಸೊತ್ತು ನಾಶಕ್ಕಿಂತಲೂ ಜೀವನಾಶ ಕ್ಕಿಂತಲೂ ಎಷ್ಟೋ ಎಷ್ಟೋ ಪಾಲು ಅಧಿಕವಾಗಿ ವಿಜ್ಞಾನ ಬಲದಿಂದ ಕಳೆದ ಮಹಾ ಯುದ್ಧಗಳಲ್ಲಿ ಪರಿ ಷ್ಕಾರಿಗಳು ಹಾನಿಗೈದಿದ್ದಾರೆ. ವಿಜ್ಞಾನದಲ್ಲೂ ನಾಗರಿ ಕತೆಯಲ್ಲೂ ಅಭಿಮಾನಪಡುವ ಜನರು ಸ್ತ್ರೀಪುರುಷ ಭೇದವಿಲ್ಲದೆ ಎಷ್ಟೋ ಲಕ್ಷ ಆಬಾಲವೃದ್ಧ ಜನರನ್ನು ನಾಗರಿಕತಾದೇವತೆಯ ಬಲಿಪೀಠದ ಮೇಲೆ ನಿರ್ದಯ ವಾಗಿ ಬಲಿಯರ್ಪಿಸಿದರು. ಲೋಕದಲ್ಲುಂಟಾದ ಆ ಮಹಾ ನಷ್ಟ ಪರಿಹರಿಸಲ್ಪಡುವುದಾಗಲಿ ಅದರ ಭಯಂಕರ ದೃಶ್ಯಗಳು ದೃಷ್ಟಿಪಥದಿಂದ ನೀಗುವುದಾಗಲಿ ಅದರ ನೆನಪು ಸ್ಮೃತಿಪಟಲದಿಂದ ಮರೆಯಾಗುವುದಾಗಲಿ ಆಗುವ ಮುಂಚೆಯೇ ವಿಜ್ಞಾನ ಮತ್ತು ನಾಗರಿಕತೆಯ ಹೆಸರಿನಲ್ಲಿ ಪುನಃ ಲೋಕಕ್ಕೆ ಹಲವಿಧ ನರಬಲಿಗಳನ್ನು ಕಾಣಬೇಕಾಗಿ ಬಂತು.

ನಾಗರಿಕತೆ ಮತ್ತು ವಿಜ್ಞಾನದಲ್ಲಿ ಉಚ್ಛ ಸ್ಥಾನ ಗಳಿಸಿದ ಜನರು ಈ ಇಪ್ಪತ್ತನೆಯ ಶತಮಾನದಲ್ಲಿ ಹೀಗೆ ನರಬೇಟೆಯಾಡುವುದು ತಮ್ಮ ಅತಿ ದೊಡ್ಡ ವಿನೋದ ವನ್ನಾಗಿ ಮಾಡಿರುವುದನ್ನು ಕಾಣುವಾಗ, ಲೋಕದಲ್ಲಿ ಅಶಾಂತಿಗೂ ಕಲಹಕ್ಕೂ ಕಾರಣ ಧರ್ಮವೆಂದೂ ಭೌತಿಕ ವಿಜ್ಞಾನ ಮತ್ತು ನಾಗರಿಕತೆ ಮೂಲಕ ಮಾತ್ರವೇ ಮನುಷ್ಯರೆಡೆಯಲ್ಲಿ ಸಮಾಧಾನವೂ ಸೌಹಾರ್ದವೂ ಉಂಟಾಗುವುದೆಂದೂ ಹೇಳುವುದು ಖಂಡಿತವಾಗಿಯೂ ಸಮುದಾಯ ಚರಿತ್ರೆಯ ಕುರಿತು ಚಿಂತಿಸದಿರುವುದ ರಿಂದಲೂ ಮತದ ಅಧ್ಯಾಪನಗಳ ಕುರಿತು ತಿಳುವಳಿಕೆ ಇಲ್ಲದಿರುವುದರಿಂದಲೂ ಮಾತ್ರವಾಗಿದೆ. ಧರ್ಮಾನು ಯಾಯಿಗಳು ಧರ್ಮದ ಉಪದೇಶಗಳಿಗೆ ವಿರುದ್ಧವಾಗಿ ಗೈದ ಕೆಲವು ಅನೀತಿಗಳನ್ನು ಎತ್ತಿ ತೋರಿಸಿ ಧರ್ಮವು ಕಲಹ - ಘರ್ಷಣೆಗಳಿಗೆ ಕಾರಣವೆಂದು ಹೇಳಿ ಆರೋಪಿ ಸುವುದು ನ್ಯಾಯವೆಂದಾದರೆ ವಿಜ್ಞಾನ ಮತ್ತು ಭೌತಿಕ ಪರಿಷ್ಕಾರಗಳು ಅದಕ್ಕಿಂತ ಹೆಚ್ಚು ಆಕ್ಷೇಪಾರ್ಹವಾಗಿವೆ. ಏಕೆಂದರೆ ವಿಜ್ಞಾನ ಮತ್ತು ನಾಗರಿಕತೆಯ ಗುತ್ತಿಗೆದಾರ ರೆಂದು ಭಾವಿಸುವವರು ಮಾಡಿರುವಂತಹ ಹಾಗೂ ಮಾಡುತ್ತಿರುವ ನಿಷ್ಠುರ ಪ್ರವೃತ್ತಿಗಳು ಎಷ್ಟೋ ನೂರು ವರ್ಷಕಾಲ ಮತಾನುಯಾಯಿಗಳು ಮತದ ಹೆಸರಿನಲ್ಲಿ ಮಾಡಿರುವುದನ್ನು ಮೀರುವಂತೆ ಅಷ್ಟು ಭೀಮತರವೂ ಭೀಭತ್ಸವೂ ಆಗಿವೆ. ಹೀಗೆ ವಿಜ್ಞಾನ ಮೂಲಕ ಉಂಟಾಗಿರುವ ನಾಶದ ಭೀಕರತೆಯನ್ನೂ ವಿಪುಲತೆ ಯನ್ನೂ ಮಾತ್ರ ನೋಡುವುದಾದರೆ ಆಕ್ಷೇಪಕ್ಕೆ ಈಡಾಗ ಬೇಕಾದುದು ಧರ್ಮವಲ್ಲ, ವಿಜ್ಞಾನ ಮತ್ತು ಭೌತಿಕ ನಾಗರಿಕತೆಯೆಂದು ಚೆನ್ನಾಗಿ ಮನವರಿಯಬಹುದು.

ವೈಜ್ಞಾನಿಕ ಸಂಶೋಧನೆಗಳ ಬಲದಿಂದ, ಉತ್ಕೃಷ್ಟ ನಾಗರಿಕತೆಯ ಹೆಸರಿನಲ್ಲಿ, ಲೋಕದಲ್ಲಿ ನಡೆಯು ತ್ತಿರುವ ಹತ್ಯಾಕಾಂಡ ಮತ್ತು ರಕ್ತಪಾತಗಳನ್ನು ಕಾಣುವಾಗ, ಕಲಹ ಮತ್ತು ನಾಶವನ್ನು ಉಂಟು ಮಾಡುವುದು ಧರ್ಮವೆಂದು ಹೇಳಿ ಅದನ್ನು ಆಕ್ಷೇಪಿ ಸುವ ಬದಲು ಇಂತಹ ಅಕ್ರಮಗಳಿಗೆ ಕಾರಣ

ವಿಜ್ಞಾನ ಮತ್ತು ಆಧುನಿಕ ನಾಗರಿಕತೆಯೆಂದು ಹೇಳಿ ಅವನ್ನು ಆಕ್ಷೇಪಿಸಬೇಕಾಗಿದೆ. ಅಷ್ಟೇ ಅಲ್ಲ, ವಿಜ್ಞಾನ ಮತ್ತು ಅದರ ಸಂತಾನವಾದ ಆಧುನಿಕ ನಾಗರಿಕತೆಯ ಅಭಿವೃದ್ಧಿಯೊಂದಿಗೆ ಲೋಕವನ್ನು ವಿವಿಧ ಜಾತಿಗಳು ಮತ್ತು ವಿವಿಧ ರಾಷ್ಟ್ರಗಳ ಮಧ್ಯೆ ಪರಸ್ಪರ ಅವಿಶ್ವಾಸವೂ ಸ್ಪರ್ಧೆಯೂ ವರ್ಧಿಸಿ ಅವರಲ್ಲಿ ಸ್ವಾರ್ಥಲೋಲುಪತೆ ಹಾಗೂ ಪರಸ್ವಹರಣವಾಂಛೆ ಸ್ಥಾಯಿಯಾಗಿರುವುದನ್ನು ಕಾಣುವಾಗ, ವಿಜ್ಞಾನವೂ ಈ ನಾಗರಿಕತೆಯೂ ಕೇವಲ ನಶಿಸಿ ಹೋಗುವುದಾಗಲಿ, ಅಥವಾ ಅವುಗಳ ಮೂಲಕ ಮನುಷ್ಯರು ಮೃಗಗಳಂತಾಗುವುದರ ಬದಲು ಸನ್ಮನಸ್ಸು, ನೈತಿಕ ಪ್ರಜ್ಞೆ ಮತ್ತು ಧರ್ಮ ಪ್ರಜ್ಞೆಯುಳ್ಳ ಉತ್ಕೃಷ್ಟ ಜೀವಿಗಳಾಗುವ ರೀತಿಯಲ್ಲಿ ಆಧುನಿಕ ನಾಗರಿಕತೆಯನ್ನೂ ಶಾಸ್ತ್ರಾಧ್ಯಾಯನವನ್ನೂ ಒಂದು ನಿಯಂತ್ರಣಕ್ಕೆ ಒಳಪಡಿಸುವುದಾಗಲಿ ಮಾಡದ ಪಕ್ಷದಲ್ಲಿ ಈ ಭೂಲೋಕ ನರಕಲೋಕವಾಗಿ ಮಾರ್ಪಡುವುದೋ ಎಂದು ಭಯಪಡಬೇಕಾಗಿದೆ. ವಿಜ್ಞಾನದಲ್ಲೂ ಆ ಮೂಲಕ ಬೆಳೆದು ಬರುವ ನಾಗರಿಕತೆಯಲ್ಲೂ ಮನುಷ್ಯರನ್ನು ಒಳ್ಳೆಯವರನ್ನಾಗಿ ಪರಿವರ್ತಿಸುವರೆ ಯಾವುದೇ ವ್ಯವಸ್ಥೆ ಇಲ್ಲ. ಆದ್ದರಿಂದ, ವಿಜ್ಞಾನದ ಅಭಿವೃದ್ಧಿ ಮೂಲಕ ಲೋಕದಲ್ಲಿ ಮಾನಸಿಕವೂ ಧಾರ್ಮಿಕವೂ ಆದ ಯಾವುದೇ ಪರಿವರ್ತನೆ ಉಂಟಾಗಲು ದಾರಿಯಿಲ್ಲವೆಂದು ಇದುವರೆಗೆ ಇರುವ ಅನುಭವ ನಮ್ಮನ್ನು ಎಚ್ಚರಿಸುತ್ತದೆ. ಆದುದರಿಂದ, ಮನುಷ್ಯರು ಉತ್ಕೃಷ್ಟ ಮಾನಸರೂ ನೀತಿನಿಷ್ಠರೂ ಆಗಿ ಪರಿವರ್ತಿಸಲ್ಪಡಲಿಕ್ಕೆ ಈ ವಿಜ್ಞಾನವೂ ನಾಗರಿಕತೆಯೂ ನಾಮಾವಶೇಷವಾಗಬೇಕಾಗಿದೆಯೆಂದು, ಅದರ ಮೂಲಕ ಉಂಟಾದ ವಿಪತ್ತುಗಳನ್ನು ನೆನಸುವಾಗ, ತೋಚಿಬಿಡುತ್ತದೆ. ಆದರೆ ಅನೇಕ ವರ್ಷಕಾಲದ ನಿರಂತರವಾದ ಸಂಶೋಧನೆ ಮತ್ತು ಅವಿಶ್ರಾಂತ ಪರಿಶ್ರಮದ ಫಲವಾಗಿ ಮನುಷ್ಯರಿಗೆ ಹಸ್ತಗತವಾದ ಈ ವಿಜ್ಞಾನ ಮತ್ತು ಅದರ ಸಂತಾನಗಳಾದ ಸಂಶೋಧನೆಗಳು ನಾಶವಾಗಲಾರವು; ನಾಶವಾಗಲೂ ಬಾರದು. ಆದ್ದರಿಂದ, ಆಧುನಿಕ ಶಾಸ್ತ್ರಾಧ್ಯಯನಕ್ಕೂ ಅದರ ಮೂಲಕ ಬೆಳೆದು ಬರುವ ನಾಗರಿಕತೆಗೂ ಮನುಷ್ಯರಲ್ಲಿ ಮಾನಸಿಕವೂ ಧಾರ್ಮಿಕವೂ ಆದ ಒಂದು ಉತ್ಕೃಷ್ಟ ಪರಿವರ್ತನೆಯನ್ನುಂಟುಮಾಡಲು ಪರ್ಯಾಪ್ತವಾಗುವಂತೆ ಒಂದು ನಿಯಂತ್ರಣ ಇರಬೇಕಾದುದು ಅವಶ್ಯವಾಗಿದೆ. ಆ ನಿಯಂತ್ರಣ ಶಕ್ತಿ ವಿಜ್ಞಾನ ಮುಖಾಂತರವಾಗಲಿ ತಜ್ಜನ್ಯವಾದ ನಾಗರಿಕತೆಯ ಮೂಲಕವಾಗಲಿ ವೈಜ್ಞಾನಿಕ ಸಂಶೋಧನೆಗಳ ಮೂಲಕವಾಗಲಿ ಉಂಟಾಗಲಾರದು. ವಿಜ್ಞಾನದಲ್ಲೂ ನವೀನ ನಾಗರಿಕತೆಯಲ್ಲೂ ಅಂತಹ ಒಂದು ನಿಯಂತ್ರಣಶಕ್ತಿ ಒಳಗೊಂಡಿಲ್ಲವೆಂಬುದು ಸುಸ್ಪಷ್ಟ. ಈ ಭೌತಿಕ ಶಾಸ್ತ್ರವಾದರೋ ಪ್ರಕೃತಿಯಲ್ಲಿ ಅಂತರ್ಲೀನವಾಗಿರುವ ತತ್ವಗಳನ್ನೂ ಶಕ್ತಿಗಳನ್ನೂ ಪದಾರ್ಥಗಳಲ್ಲಿ ಅಡಕವಾಗಿರುವ ಗುಣವಿಶೇಷಗಳನ್ನೂ ಅವುಗಳ ಮುಖಾಂತರ ಉಂಟಾಗುವ ಹಲವು ಶಕ್ತಿಗಳನ್ನೂ ಕುರಿತು ಪ್ರತಿಪಾದಿಸುವಂತಹದಷ್ಟೇ. ಆದ್ದರಿಂದ ಅದರಿಂದ ಮನುಷ್ಯರಿಗೆ ತಮ್ಮನ್ನು ಉತ್ಕೃಷ್ಟ ಮಾನಸರೂ ಆತ್ಮೋನ್ನತಿಯನ್ನು ಪಡೆದವರೂ ಆಗಿ ಪರಿವರ್ತಿಸುವರೆ ಯಾವ ಪ್ರೇರಣೆಯೂ ಲಭಿಸುವುದಿಲ್ಲ. ಈ ವಿಜ್ಞಾನದ ಗುರಿಯೇ ಭೌತಿಕ ವಸ್ತುಗಳಿಗೆ ಸಂಬಂಧಿಸಿ ಸಂಶೋಧನೆ ಮಾಡಿ ಭೌತಿಕ ಜೀವನವನ್ನು ಹೆಚ್ಚು ಸುಖಕರವನ್ನಾಗಿ ಮಾಡುವುದು ಮಾತ್ರವಷ್ಟೇ. ಹೀಗಿರುವ ಒಂದು ಶಾಸ್ತ್ರದಲ್ಲೂ ಅದರ ಸಂತಾನವಾದ ನಾಗರಿಕತೆಯಲ್ಲೂ ನೈತಿಕವೂ ಆಧ್ಯಾತ್ಮಿಕವೂ ಆದ ಯಾವುದೇ ಉದ್ಬೋಧ ಒಳಗೊಂಡಿಲ್ಲವಾದರೆ ಅದು ಸ್ವಾಭಾವಿಕವೇ ಆಗಿದೆ. ಪ್ರಪಂಚದ ರಹಸ್ಯಗಳನ್ನು ಕಂಡುಹಿಡಿದು ಪ್ರಕೃತಿ ಶಕ್ತಿಗಳನ್ನು ಸ್ವಾಧೀನಪಡಿಸಿ ಐಹಿಕ ಗಳಿಕೆಗಳನ್ನು ಕರಗತ ಮಾಡಲಿಕ್ಕಾಗಿ ಮಾತ್ರ ಉಪಯುಕ್ತವಾಗಿರುವ ಆಧುನಿಕ ಶಾಸ್ತ್ರಕ್ಕೆ ನೈತಿಕ ಮತ್ತು ಆಧ್ಯಾತ್ಮಿಕವಾದ ಯಾವುದೇ ಸಂಬಂಧ ಇಲ್ಲವಾದರೆ ಆಶ್ಚರ್ಯ ಪಡಲಿಕ್ಕಿಲ್ಲ.

ಇಂದಿನ ವಿಜ್ಞಾನಕ್ಕೆ ಆಧ್ಯಾತ್ಮಿಕವಾಗಿ ಯಾವುದೇ ಸಂಬಂಧವಿಲ್ಲವೆಂಬ ವಸ್ತುಸ್ಥಿತಿ ಈ ಶಾಸ್ತ್ರದ ಗುರುಗಳು ಹಾಗೂ ಅವರ ಪರಿಷ್ಕಾರವನ್ನು ಅನುಕರಿಸುವವರ ಜೀವಿತ ರೀತಿಯಿಂದಲೂ ಯಾರಿಗೂ ಮನಗಾಣಬಹುದಾಗಿದೆ. ವಿಜ್ಞಾನವು ಪ್ರಕೃತಿಯ ಅನೇಕ ನಿಗೂಢ ರಹಸ್ಯಗಳನ್ನೂ ಅಗ್ನಿ, ವಾಯು, ಜಲ ಮುಂತಾದ ಭೂತ ವಸ್ತುಗಳಲ್ಲಿ ಅಂತರ್ಲೀನವಾಗಿರುವ ಕೆಲವು ಗುಣಗಳನ್ನೂ ಅಯಸ್ಕಾಂತ, ವಿದ್ಯುಚ್ಛಕ್ತಿ, ಪ್ರಕಾಶ ಮೊದಲಾದುವುಗಳ ಶಕ್ತಿ ವಿಶೇಷಗಳನ್ನೂ ಕಂಡುಹಿಡಿಯಲು ಸಾಧಕವಾಯಿತು. ತತ್ಫಲವಾಗಿ, ಮನುಷ್ಯರಿಗೆ ಮೋಟಾರ್ ಕಾರ್, ಉಗಿಬಂಡಿ, ಹಡಗು ಮುಂತಾದ ತ್ವರಿತ ವಾಹನಗಳ ಮೂಲಕ ನೆಲದಲ್ಲೂ ಜಲದಲ್ಲೂ

ಶೀಘ್ರ ಗಮನ ಮಾಡಲಿಕ್ಕೂ ಸಮುದ್ರದ ಒಳಗಿನಿಂದ ಸಂಚರಿಸಲಿಕ್ಕೂ ವಿಮಾನ ಮೂಲಕ ಆಕಾಶದಲ್ಲಿ ಹಾರಾಡಲಿಕ್ಕೂ ರೇಡಿಯೋ ಮುಖಾಂತರ ಭೂಮಿಯ ಒಂದು ಕೊನೆಯಿಂದ ಮಾತಾಡುವುದು ಮತ್ತು ಹಾಡುವುದು ಅದೇ ನಿಮಿಷದಲ್ಲೇ ಅದರ ಮತ್ತೊಂದು ಕೊನೆಯಲ್ಲಿ ಕೇಳಲಿಕ್ಕೂ ಚಲನಚಿತ್ರ, ಟೆಲಿವಿಶನ್ ಮೂಲಕ ಪ್ರಸಿದ್ಧ ನರ್ತಕಿಯರ ನೃತ್ಯಗಳನ್ನು ಕಂಡು, ಹಾಡುಗಳನ್ನು ಆಲಿಸಿ ಆನಂದಿಸಲಿಕ್ಕೂ ಸಾಧ್ಯವಾಯಿತು. ಇದೇ ಪ್ರಕಾರ ವಿಜ್ಞಾನವು ಮನುಷ್ಯರಿಗೆ ಭೀಮವಾದ ಫಿರಂಗಿಗಳನ್ನೂ ಬೋಂಬರ್ ವಿಮಾನಗಳನ್ನೂ ಭೀಕರವಾದ ಟ್ಯಾಂಕುಗಳನ್ನೂ ಮನುಷ್ಯರನ್ನು ದಿಗ್ಭ್ರಾಂತರನ್ನಾಗಿ ಮಾಡಿಕೊಲ್ಲುವ ವಿಷವಾಯುಗಳನ್ನೂ ಬಹಳ ದೂರದಿಂದ ಜೀವಿಗಳನ್ನು ನಾಶಪಡಿಸಲು ಪರ್ಯಾಪ್ತವಾದ ಪ್ರಕಾಶ ಕಿರಣಗಳನ್ನೂ ಪ್ರದಾನಮಾಡಿತು. ಎಂದರೆ, ಇವುಗಳಿಂದೆಲ್ಲ ಮನುಷ್ಯರಿಗುಂಟಾದ ಗಳಿಕೆಯೇನೆಂದರೆ, ಅವರಿಗೆ ಇಂದ್ರಿಯ ಸುಖಗಳನ್ನು ಸ್ವೇಚ್ಛೆಯಿಂದ ಅನುಭವಿಸುವರೆ ಪೂರ್ವಾಧಿಕ ಸೌಕರ್ಯ ಲಭಿಸಿತು ಹಾಗೂ ಅವರು ದುಷ್ಟ ಜಂತುಗಳಂತೆ ತಮ್ಮ ತಮ್ಮೊಳಗೆ ಕಚ್ಚಾಡುವ ಸ್ವಭಾವದವರಾಗಿಬಿಟ್ಟರು. ಆದುದರಿಂದ ಲೋಕದಲ್ಲಿ ಶಾಂತವಾದ ಪರಿಸ್ಥಿತಿಯೂ ಸಮಾಧಾನ ಸಂದಾಯಕವಾದ ಪರಿಸರವೂ ಉಂಟಾಗಲು ಆವಶ್ಯಕವಾದ ನೈತಿಕ ಪ್ರಜ್ಞೆಯೂ ಮನಸ್ಸಂಸ್ಕಾರವೂ ಆಧುನಿಕ ಶಾಸ್ತ್ರ ಮತ್ತು ಅದರಿಂದ ಉದ್ಭವಿಸಿದ ಪರಿಷ್ಕಾರದ ಫಲದಿಂದ ಉಂಟಾಗಲಿಕ್ಕಿಲ್ಲ. ಅದಕ್ಕೆ ದೈವಭಯವೂ ಮತಾದರ್ಶಗಳನ್ನು ಅನುಸರಿಸುವ ಪ್ರಜ್ಞೆಯೂ ಇರಬೇಕಾದುದು ಅಗತ್ಯ. ಆದ್ದರಿಂದ, ವಿಜ್ಞಾನದ ಅಧ್ಯಯನದೊಂದಿಗೆ ಇಂತಹ ಮಾನಸಿಕವೂ ನೈತಿಕವೂ ಆದ ಒಂದು ಮಾರ್ಪಾಟನ್ನುಂಟುಮಾಡುವ ಧರ್ಮಪ್ರಜ್ಞೆ ಸಹ ಮನುಷ್ಯರಿಗೆ ಅನಿವಾರ್ಯವಾಗಿದೆ.

ಮನುಷ್ಯರು ಅನ್ಯೋನ್ಯ ಸಹೋದರರಂತೆ ವರ್ತಿಸಬೇಕಾಗಿದೆಂದೂ ಇತರರನ್ನು ದ್ರೋಹಿಸುವುದು ಮತ್ತು ಅವರ ಹಕ್ಕುಗಳನ್ನು ಅಪಹರಿಸುವುದು, ಬಲಶಾಲಿಗಳು ಬಲಹೀನರನ್ನು ಮರ್ದಿಸುವುದು ಮಹಾಪಾಪವೆಂದೂ ಪಾಪಕೃತ್ಯಗಳಿಗೆ ಮನುಷ್ಯರು ದೇವರ ಸನ್ನಿಧಿಯಲ್ಲಿ ಉತ್ತರ ಹೇಳಬೇಕಾದೀತೆಂದೂ ಪರೋಪಕಾರ, ಸತ್ಯಸಂಧತೆ, ನೀತಿನಿಷ್ಠೆ ಮುಂತಾದ ಉತ್ತಮ ಸ್ವಭಾವದಿಂದ ಜೀವಿಸುವವರಿಗೆ ಮಾತ್ರವೇ ಆತ್ಮೋನ್ನತಿಯೂ ಮೋಕ್ಷವೂ ಲಭಿಸುವುದೆಂದೂ ಇತ್ಯಾದಿಯಾಗಿ ಧರ್ಮಗಳು ಬಲವಾಗಿ ಉಪದೇಶಿಸುತ್ತವೆ. ಮತಗಳ ಈ ಉಪದೇಶಾದರ್ಶಗಳನ್ನನುಸರಿಸಿ ಮನುಷ್ಯರು ಜೀವನವನ್ನು ನಿಯಂತ್ರಿಸುವರಾದರೆ ಲೋಕದಲ್ಲಿ ಶಾಂತಮಯವಾದೊಂದು ಪರಿಸ್ಥಿತಿ ಉಂಟಾಗಿ, ಹಾಗೆ ಮನುಷ್ಯರ ಸೌಹಾರ್ದಮಯ ಜೀವನ ಮುಖಾಂತರ ಈ ಜಗತ್ತು ಸ್ವರ್ಗಸದೃಶವಾಗುವುದು. ಆದರೆ ಆಧುನಿಕ ಶಾಸ್ತ್ರಕ್ಕೆ ಇಂತಹ ತತ್ವಾದರ್ಶಗಳೊಂದಿಗೆ ಯಾವುದೇ ಸಂಬಂಧವಿಲ್ಲ. ಅದು ಮನುಷ್ಯರಿಗೆ, ಸನ್ಮಾರ್ಗಿಗಳೂ ಧರ್ಮನಿಷ್ಠರೂ ಆಗಿ ಬದುಕಬೇಕೆಂದು ಉಪದೇಶಿಸುವುದೂ ಇಲ್ಲ. ಆದುದರಿಂದ ಲೋಕ ಶಾಂತಿಗೆ ವಿಜ್ಞಾನವು ಕಾರಣವಾಗುವುದಿಲ್ಲ; ಧರ್ಮ ಮಾತ್ರವೆಂದು ಸಾಬೀತಾಗುತ್ತದೆ. ಮತಾನುಯಾಯಿಗಳು ಯಾವಾಗಲಾದರೂ ಕಲಹವನ್ನುಂಟುಮಾಡುವುದಾದರೆ, ಅದು ಅವರು ಮತಾದರ್ಶಗಳನ್ನು ಅನುಸರಿಸಿದ ಕಾರಣದಿಂದಲ್ಲ, ಅವುಗಳಿಂದ ವಿಮುಖರಾದ ಪರಿಣಾಮದಿಂದ ಮಾತ್ರವಾಗಿದೆ. ಆದರೆ ಆಧುನಿಕ ಶಾಸ್ತ್ರಜ್ಞರು ಯಾರಾದರೂ ಲೋಕದಲ್ಲಿ ಸಮಾಧಾನಕರವಾದ ಸ್ಥಿತಿಯೂ ಸೌಹಾರ್ದಮಯವಾದ ಪರಿಸರವೂ ಉಂಟುಮಾಡಲು ಪ್ರಯತ್ನಿಸುವರಾದರೆ ಅದು ಆ ಶಾಸ್ತ್ರದಲ್ಲಿ ಆ ರೀತಿ ಪ್ರವರ್ತಿಸುವರೆ ನಿರ್ದೇಶವಿರುವುದರಿಂದಲ್ಲ. ಬದಲಾಗಿ, ಬೇರೆ ಕಾರಣಗಳಿಂದ ಪ್ರೇರಿತರಾಗುವುದರಿಂದಾಗಿರಬಹುದು ಅವರು ಹಾಗೆ ವರ್ತಿಸುವುದು. ಉದಾಹರಣೆಗೆ, ಆರೋಗ್ಯಶಾಸ್ತ್ರವೂ ವೈದ್ಯಶಾಸ್ತ್ರವೂ ಮನುಷ್ಯರ ಆರೋಗ್ಯ ರಕ್ಷಣೆಗೆ ಬೇಕಾದ ನಿಯಮನಿರ್ದೇಶನಗಳನ್ನು ಸೂಚಿಸುತ್ತವೆಯಷ್ಟೆ. ಆದರೆ ಈ ಶಾಸ್ತ್ರಗಳನ್ನು ಕಲಿತಿರುವ ಯಾರದ್ದಾದರೂ ಆರೋಗ್ಯ ಶಿಥಿಲವಾಗಿದ್ದರೆ, ಅದು ಅವರು ಆ ಶಾಸ್ತ್ರತತ್ವಗಳನ್ನು ಪೂರ್ಣವಾಗಿ ಅನುಸರಿಸಿರುವುದರಿಂದಾಗಿರಲಿಕ್ಕಿಲ್ಲ. ಬದಲಾಗಿ, ಅದು ಅವರು ಅರಿತೋ ಅರಿಯದೆಯೋ ಆರೋಗ್ಯ ನಿಯಮಗಳನ್ನು ಉಲ್ಲಂಘಿಸಿದುದರ ಫಲ ಮಾತ್ರವಾಗಿದೆ. ಇದೇ ಪ್ರಕಾರವೇ, ಕೃಷಿ ಶಾಸ್ತ್ರದ ಕುರಿತು ತಿಳುವಳಿಕೆಯುಳ್ಳ ಒಬ್ಬನಿಗೆ ಒಳ್ಳೆಯ ಆರೋಗ್ಯವಿದ್ದರೆ ಅದಕ್ಕೆ ಕಾರಣ ಕೃಷಿ ಶಾಸ್ತ್ರ

ದಲ್ಲಿ ಆತನಿಗಿರುವ ಪರಿಜ್ಞಾನವಾಗಿರಲಿಕ್ಕಿಲ್ಲ. ಬದಲು ಆತನ ಆರೋಗ್ಯಪುಷ್ಟಿಗಿರುವ ಕಾರಣ ಆತನು ಅರಿತೋ ಅರಿಯದೆಯೋ ಆರೋಗ್ಯ ರಕ್ಷಣೆಯ ನಿಯಮಗಳನ್ನು ಅನುಸರಿಸಿದುದಾಗಿದೆ. ಹೀಗೆ ವೈದ್ಯಶಾಸ್ತ್ರ ಕಲಿತ ಯಾವನಿಗಾದರೂ ಆರೋಗ್ಯ ಕ್ಷಯಿಸುವುದರಿಂದ ಆ ಶಾಸ್ತ್ರಕ್ಕೆ ಆರೋಗ್ಯದೊಂದಿಗೆ ಯಾವುದೇ ಸಂಬಂಧವಿಲ್ಲ ವೆಂದಾಗಲಿ ಕೃಷಿಶಾಸ್ತ್ರ ಪರಿಜ್ಞಾನವಿರುವ ಒಬ್ಬನು ಉತ್ತಮ ಆರೋಗ್ಯ ಹೊಂದಿರುವುದರಿಂದ ಆ ಶಾಸ್ತ್ರ ಮುಖಾಂತರ ಆತನಿಗೆ ಆರೋಗ್ಯವನ್ನು ಪಾಲಿಸಲು ಸಾಧ್ಯವಾಯಿತೆಂದಾಗಲಿ ಹೇಳಲಾಗದು. ಇದೇ ಪ್ರಕಾರವೇ, ಲೋಕಶಾಂತಿಗೂ ಮನುಷ್ಯರ ಸೌಹಾರ್ದಯುತ ಜೀವನಕ್ಕೂ ಪರ್ಯಾಪ್ತವಾದ ಉಪದೇಶಾದರ್ಶಗಳು ಒಳಗೊಂಡಿರುವ ಧರ್ಮದ ಅನುಯಾಯಿಗಳಲ್ಲಿ ಕೆಲವರು ಸಮಾಧಾನದ ಧ್ವಂಸಕವೂ ನೀತಿವಿರುದ್ಧವೂ ಆದ ಏನಾದರೂ ಕೃತ್ಯವೆಸಗಿದುದರಿಂದ ಕಲಹಕ್ಕೂ ನಾಶಕ್ಕೂ ಕಾರಣ ಧರ್ಮವೆಂದು ಹೇಳಿ ಅದನ್ನು ದೂರುವುದು ಎಂದಿಗೂ ಸಮರ್ಥನೀಯವಲ್ಲ. ಇದೇ ಪ್ರಕಾರ, ಮನುಷ್ಯರನ್ನು ಸನ್ಮಾರ್ಗಿಗಳೂ ಆಧ್ಯಾತ್ಮಿಕ ಪ್ರಜ್ಞೆಯುಳ್ಳವರನ್ನಾಗಿ ಮಾಡಲು ಪರ್ಯಾಪ್ತವಾದ ಯಾವುದೇ ನಿರ್ದೇಶವಾಗಲಿ ಒಳಗೊಂಡಿರದ ವಿಜ್ಞಾನದ ತಜ್ಞರಲ್ಲಿ ಯಾರಾದರೂ ಮನುಷ್ಯರೆಡೆಯಲ್ಲಿ ಶಾಂತಿ ಸ್ಥಾಪಿಸಲಿಕ್ಕಾಗಿ ಶ್ರಮಿಸುವುದಾದರೆ ಅದಕ್ಕೆ ಅವರಿಗೆ ಪ್ರೇರಕವಾಗಿರುವುದು ವಿಜ್ಞಾನ ಮತ್ತು ಅದರ ಕೊಸಾದ ನಾಗರಿಕತೆಯೆಂದು ಎಂದಿಗೂ ಊಹಿಸಲು ನಿರ್ವಾಹವಿಲ್ಲ. ಮುಖ್ಯವಾಗಿ ಈ ಕಾಲದಲ್ಲಿ – ವೈಜ್ಞಾನಿಕ ಸಂಶೋಧನೆಗಳ ಬಲದಲ್ಲಿ ಮನುಷ್ಯರು ಮೃಗಗಳಂತೆ ಪರಸ್ಪರ ಕಚ್ಚಾಡುವ ಹಾಗೂ ವಿಜ್ಞಾನದ ಗುರುಗಳು ಮನುಷ್ಯಾತ್ಮಗಳಿಗೆ ಕ್ರಿಮಿಕೀಟಗಳಿಗಿರುವಷ್ಟಾದರೂ ಬೆಲೆ ಕೊಡದೆ ಅವರ ರಕ್ತಸುರಿಸಿ ಭೂಮುಖವನ್ನು ವಿವರ್ಣ ಮಾಡಿ ಪರಿವರ್ತಿಸುವ ಈ ಕಾಲದಲ್ಲಿ - ವಿಜ್ಞಾನವೂ ತತ್ಫಲವಾದ ಸಂಶೋಧನೆಗಳೂ ಜಗತ್ತಿನಲ್ಲಿ ಸಮಾಧಾನ ಮತ್ತು ಸೌಹಾರ್ದತೆಯನ್ನು ಪೋಷಿಸಲು ಸಹಾಯಕವೆಂದು ಭಾವಿಸುವುದು ಬರೇ ಪ್ರಮಾದವಾಗಿದೆ.

ಮತವಾದರೋ ಮನುಷ್ಯರಿಗೆ, ವಿಶಾಲ ಮನಸ್ಕರೂ ಸದ್ಧರ್ಮಿಗಳೂ ಶಾಂತಿಪ್ರೇಮಿಗಳೂ ಆಗಿ ಜೀವಿಸಲು ಪರ್ಯಾಪ್ತವಾದ ಉಪದೇಶಾದರ್ಶಗಳನ್ನು ನೀಡುತ್ತದೆ. ಆ ತತ್ವಾದರ್ಶಗಳನ್ನು ಲೋಕವು ಸ್ವೀಕರಿಸದಿರುವುದರಿಂದ ಹಲವು ತರದ ಅನಾಹುತಗಳು ಮನುಷ್ಯರೆಡೆಯಲ್ಲಿ ಉಂಟಾಗುತ್ತಿರುವುದಾಗಿ ನಾವು ಕಾಣುತ್ತೇವೆ. ಅವರು ಮತಾದರ್ಶಗಳನ್ನು ಅನುಸರಿಸುವುದಾದರೆ ಶಾಂತಿಮಯವಾದ ಪರಿಸರದಲ್ಲಿ ಸೌಹಾರ್ದಕರವಾಗಿ ಬದುಕಲು ಅವರಿಗೆ ಸಾಧ್ಯವಿದೆ. ಮನುಷ್ಯರೆಲ್ಲಾ ಒಬ್ಬನೇ ದೇವನ ಮಕ್ಕಳೂ ಒಬ್ಬನೇ ಪಿತನ ಸಂತಾನಗಳೆಂದೂ ದೇಶಭೇದವಾಗಲಿ ಕುಲವ್ಯತ್ಯಾಸವಾಗಲಿ ವರ್ಣವೈವಿಧ್ಯವಾಗಲಿ ಅವರ ಮಾನವತೆಗೂ ಸಹೋದರತೆಗೂ ಯಾವುದೇ ವ್ಯತ್ಯಾಸವನ್ನು ಉಂಟುಮಾಡುವುದಿಲ್ಲವೆಂದೂ ಅವರು ಅನ್ಯರ ಹಕ್ಕುಗಳನ್ನು ಅಪಹರಿಸದೆಯೂ ಪರರಿಗೆ ಯಾವ ವಿಧದಲ್ಲೂ ದೋಷವನ್ನುಂಟುಮಾಡದೆಯೂ ಜೀವಿಸಬೇಕೆಂದೂ ಅನ್ಯಧರ್ಮವನ್ನು ಮತ್ತು ಅನ್ಯಧರ್ಮ ಸ್ಥಾಪಕರನ್ನು ಗೌರವಿಸಿ ಎಲ್ಲರಿಗೂ ಅಭಿಪ್ರಾಯ ಸ್ವಾತಂತ್ರ್ಯವನ್ನು ನೀಡಬೇಕೆಂದೂ ಧರ್ಮದ ವಿಚಾರದಲ್ಲಿ ಬಲಾತ್ಕಾರ ಧೋರಣೆ ಕೈಗೊಳ್ಳಬಾರದೆಂದೂ ಯಾರೊಡನೆಯಾದರೂ ವಿರೋಧವಿದ್ದರೆ ಆ ವಿರೋಧವನ್ನು ಆಧಾರವಾಗಿರಿಸಿ ಅವರೊಡನೆ ಎಂದಿಗೂ ಅನೀತಿಯಿಂದ ವರ್ತಿಸಬಾರದೆಂದೂ ಸ್ವರಕ್ಷಣೆಗೆ ಮತ್ತು ಶಾಂತಿ ಸ್ಥಾಪನೆಗಾಗಿ ಯುದ್ಧ ಮಾಡಬೇಕಾಗಿ ಬಂದರೆ ಆ ರೀತಿಯ ಯುದ್ಧದಲ್ಲಿ ಕೂಡ ಸ್ತ್ರೀಯರು, ಮಕ್ಕಳು, ವಯೋವೃದ್ಧರು ಮತ್ತು ಪುರೋಹಿತರನ್ನು ಕೊಲ್ಲುವುದಾಗಲಿ ಆರಾಧನಾ ಸ್ಥಳಗಳನ್ನು ಹಾಳುಗೆಡಹುವುದಾಗಲಿ ಕೃಷಿ ಮತ್ತು ತೋಟಗಳನ್ನು ನಾಶಪಡಿಸುವುದಾಗಲಿ ಮಾಡಬಾರದೆಂದೂ ಆಕ್ರಮಿಗಳು ಸಂಧಾನಕ್ಕೆ ಒಪ್ಪುವರಾದರೆ ಜಗತ್ತಿನಲ್ಲಿ ಸಮಾಧಾನವು ನೆಲೆಗೊಳ್ಳುವ ರೀತಿಯಲ್ಲಿ ನ್ಯಾಯಯುತವಾದ ನಿಬಂಧನೆಗಳ ಸಹಿತ ಕೂಡಲೇ ಶಾಂತಿ ಒಪ್ಪಂದ ಮಾಡಬೇಕೆಂದೂ ಧರ್ಮ ಉಪದೇಶಿಸುತ್ತದೆ. ಮಾತ್ರವಲ್ಲ, ಮನುಷ್ಯರು ಉತ್ತಮ ರೀತಿಯಲ್ಲಿ ಧಾರ್ಮಿಕ ಜೀವನ ನಡೆಸಬೇಕೆಂದೂ ಸಮಸ್ತಸೃಷ್ಟಿಗಳನ್ನು ಪ್ರೀತಿಸಿ ಅವರಿಗೆ ಉಪಕಾರ ಮಾಡಬೇಕಾದುದು ದೇವರಿಗೆ ಅತ್ಯಂತ ಇಷ್ಟಕರವೆಂದೂ ಆದ್ದರಿಂದ ಇಂತಹ ಉಪದೇಶಗಳಿಗೆ ವಿರುದ್ಧವಾಗಿ ವರ್ತಿಸುವವರು ಮೋಕ್ಷಪ್ರಾಪ್ತಿಗೆ ಬದಲು ದೈವಕೋಪಕ್ಕೂ ಶಿಕ್ಷೆಗೂ ಪಾತ್ರರಾಗುವರೆಂದು ಕೂಡ ಧರ್ಮವು ಬೋಧಿಸುತ್ತದೆ. ಹೆಚ್ಚುಕಮ್ಮಿ ಎಲ್ಲಾ ಮತಗಳೂ ಕಲಿಸುವುದು ಇದೇ ಪ್ರಕಾರವಾಗಿದೆ. ಆದರೆ ಇಸ್ಲಾಂ ಈ ವಿಚಾರಗಳನ್ನು ಸವಿಸ್ತಾರವಾಗಿಯೂ ಮನೋಜ್ಞವಾದ ರೀತಿಯಲ್ಲೂ

ಪ್ರತಿಪಾದಿಸುತ್ತದೆ. ಇಷ್ಟು ಮಹತ್ತರವಾದ ನಿರ್ದೇಶಾದರ್ಶಗಳು ಒಳಗೊಂಡಿರುವ ಮತವನ್ನು ಕಲಹಕ್ಕೂ ಅಶಾಂತಿಗೂ ಕಾರಣವೆಂದು ಹೇಳಿ ಆಪಾದಿಸುವುದು ಖಂಡಿತವಾಗಿಯೂ ದೊಡ್ಡ ಅನ್ಯಾಯವಾಗಿದೆ. ಇಂತಹ ಉಪದೇಶಗಳನ್ನು ನೀಡುವ ಧರ್ಮಗಳ ಅನುಯಾಯಿಗಳೆಂದು ಕರೆಯಲ್ಪಡುವವರು ಯಾವಾಗಲಾದರೂ ಗೈದ ಅಕ್ರಮಗಳನ್ನೂ ಅನೀತಿಗಳನ್ನೂ ಧರ್ಮದ ಹೆಸರಿನಲ್ಲಿ ಆರೋಪಿಸಿ ಧರ್ಮವು ಈ ಅಸಮಾಧಾನಕ್ಕೆ ಕಾರಣವೆಂದು ಹೇಳುವವರು, ಇಂತಹ ಉಪದೇಶಗಳೊಂದಿಗೆ ಯಾವುದೇ ಸಂಬಂಧವಿಲ್ಲದ ವಿಜ್ಞಾನವು ಶಾಂತಿಗೂ ಸೌಹಾರ್ದಯುತವಾದ ಜೀವಿತಕ್ಕೂ ಕಾರಣವಾಗುತ್ತದೆಂದು ವಾದಿಸುವುದು ಆಶ್ಚರ್ಯಕರವೇ ಆಗಿದೆ. ಆದರೆ ಅವರ ಈ ವಾದ ಕೇವಲ ಅರ್ಥಶೂನ್ಯವೆಂದೂ ಮತಾದರ್ಶಗಳನ್ನು ಅನುಸರಿಸುವುದರಿಂದ ಮಾತ್ರವೇ ಲೋಕದಲ್ಲಿ ಸಮಾಧಾನ ನೆಲೆಸುವುದೆಂದೂ ವಿಜ್ಞಾನ ಮತ್ತು ಆಧುನಿಕ ನಾಗರಿಕತೆ ಉಚ್ಚಸ್ಥಾನಕ್ಕೇರಿರುವ ಇಪ್ಪತ್ತನೆಯ ಶತಮಾನವು ಲೋಕಕ್ಕೆ ಚೆನ್ನಾಗಿ ಮನಗಾಣಿಸಿ ಕೊಡುತ್ತಿದೆ.

ಲೋಕದಲ್ಲಿ ಶಾಂತಿ ನೆಲೆಸಲಿಕ್ಕೂ ಮನುಷ್ಯರು ಅನ್ಯೋನ್ಯ ಸೌಹಾರ್ದತೆಯಲ್ಲಿ ವರ್ತಿಸಲಿಕ್ಕೂ ಅವರು ದುರ್ಮೋಹಿಗಳೂ ಸ್ವಾರ್ಥಲೋಲುಪರೂ ಆಗದೆ ಉತ್ಕೃಷ್ಟ ಸ್ವಭಾವಿಗಳಾಗಿ ಜೀವಿಸಲಿಕ್ಕೂ ಪರ್ಯಾಪ್ತವಾದ ಉಪದೇಶಾದರ್ಶಗಳೊಂದಿಗೆ ಆಧುನಿಕ ವಿಜ್ಞಾನಕ್ಕೆ ಯಾವುದೇ ಸಂಬಂಧವಿಲ್ಲವೆಂದೂ ಅಂತಹ ತತ್ವಾದರ್ಶಗಳು ಧರ್ಮಾಧ್ಯಾಪನಗಳಲ್ಲಿ ಮಾತ್ರವೇ ಕಾಣಲ್ಪಡುವುದೆಂಬುದೂ ಒಂದು ಪರಮಸತ್ಯ ಮಾತ್ರವಾಗಿದೆ. ಅಷ್ಟೇ ಅಲ್ಲ, ಧರ್ಮದ ಲಕ್ಷ್ಯವೇ ಸೃಷ್ಟಿಗಳಾದ ಮನುಷ್ಯರಿಗೂ ಸೃಷ್ಟಿಕರ್ತನಾದ ದೇವನಿಗೂ ಮಧ್ಯೆ ಸುದೃಢವಾದೊಂದು ಪ್ರೇಮಬಂಧವನ್ನೂ ಮನುಷ್ಯರು ಅನ್ಯೋನ್ಯ ಸಹೋದರ ಭಾವನೆಯನ್ನೂ ಉಂಟು ಮಾಡಬೇಕೆಂದಾಗಿದೆ. ಧರ್ಮದ ಉದ್ದೇಶವೇ ಇದಾಗಿದ್ದು ಇದರ ಈಡೇರಿಕೆಗೆ ಪರ್ಯಾಪ್ತವಾದ ನಿರ್ದೇಶನಗಳು ಅದರಲ್ಲಿ ಒಳಗೊಂಡಿರುವಾಗ ಶಾಂತಿ ಸ್ಥಾಪನೆಗೆ ಕಾರಣವಾಗುವುದು ಧರ್ಮವೇ ಎಂದು ಹೇಳಬೇಕಲ್ಲದೆ, ಇಂತಹ ಗುರಿಯನ್ನಿಟ್ಟುಕೊಳ್ಳದ ವಿಜ್ಞಾನ ಮುಖಾಂತರ ಲೋಕದಲ್ಲಿ ಶಾಂತಮಯ ಸ್ಥಿತಿ ಉಂಟಾಗುವುದೆಂದಾಗಲಿ ಮನುಷ್ಯರು ಉತ್ಕೃಷ್ಟ ಸ್ವಭಾವಿಗಳಾಗಿಬಿಡುವರೆಂದಾಗಲಿ ಹೇಳುವುದು ಅತ್ಯಾಶ್ಚರ್ಯಕರವಾಗಿದೆ.

ದೈವಿಕ ಮತ ನಾಲ್ಕು ಪ್ರಧಾನ ವಿಚಾರಗಳನ್ನು ಕಲಿಸಿಕೊಡುತ್ತದೆ. ಆ ಪ್ರತಿಯೊಂದು ವಿಚಾರವೂ ಮನುಷ್ಯರು ಸಂಸ್ಕೃತಮತಿಗಳು ಹಾಗೂ ಉತ್ಕೃಷ್ಟಸ್ವಭಾವಿಗಳು ಆಗಲಿಕ್ಕೂ ಪರಸ್ಪರ ಸೌಹಾರ್ದತೆಯಿಂದ ವರ್ತಿಸಲಿಕ್ಕೆ ಅವರು ಪ್ರೇರಿತರಾಗಲಿಕ್ಕೂ ಪರ್ಯಾಪ್ತವಾಗಿದೆ.

ಒಂದನೆಯದಾಗಿ, ಧರ್ಮವು ಮನುಷ್ಯರಿಗೆ ದೇವರ ಕುರಿತು ಯಥಾರ್ಥವಾದ ಜ್ಞಾನವನ್ನು ನೀಡಿ, ಅವನೊಂದಿಗೆ ಅವರಿಗೆ ಒಂದು ದೃಢಸಂಬಂಧವನ್ನುಂಟುಮಾಡಿ, ಅವರ ಜೀವನೋದ್ದೇಶ ಈಡೇರಲಿಕ್ಕೆ ಅವರಿಗೆ ಸಹಾಯ ಮಾಡುತ್ತದೆ. ಇದಕ್ಕೆ, ಅದು ದೇವರ ಗುಣಮಹಿಮೆಗಳು, ಅವನೊಂದಿಗೆ ಮನುಷ್ಯರಿಗಿರಬೇಕಾದ ಸಂಬಂಧ, ಅವರ ಜವಾಬ್ದಾರಿಗಳು ಮತ್ತು ದೈವಪ್ರಾಪ್ತಿಯ ದಾರಿಯು ಕುರಿತು ಕಲಿಸುತ್ತದೆ.

ಎರಡನೆಯದಾಗಿ, ಧರ್ಮವು ಮನುಷ್ಯರಿಗೆ ಧಾರ್ಮಿಕ ತತ್ವಗಳ ಕುರಿತು ಸರಿಯಾದ ಜ್ಞಾನವನ್ನು ನೀಡಿ, ಅವರನ್ನು ಉತ್ಕೃಷ್ಟರನ್ನಾಗಿ ಮಾಡಲು ಸಹಾಯವೀಯುತ್ತದೆ. ಎಂದರೆ, ಅದು ಧಾರ್ಮಿಕ ತತ್ವಗಳ ಕುರಿತೂ ಸದ್ಗುಣ-ದುರ್ಗುಣಗಳ ವಿವೇಚನೆಯ ಬಗ್ಗೆಯೂ ಮನುಷ್ಯರು ದುರ್ಗುಣಗಳಿಂದ ಅಗಲಿ ಸದ್ಗುಣಗಳಿಂದ ಸಂಸೇವ್ಯರಾಗಲಿಕ್ಕೆ ಪೂರಕವಾದ ದಾರಿಗಳ ಕುರಿತೂ ಬೋಧಿಸುತ್ತದೆ.

ಮೂರನೆಯದಾಗಿ, ಧರ್ಮವು ಸಾಮುದಾಯಿಕವೂ ಪರಸ್ಪರ ವ್ಯಾವಹಾರಿಕವೂ ಆದ ವಿಷಯಗಳ ಬಗ್ಗೆ ಪ್ರತಿಪಾದಿಸುತ್ತಾ ಮನುಷ್ಯರಿಗೆ ಅನ್ಯೋನ್ಯ ನ್ಯಾಯಯುತವಾಗಿ ವರ್ತಿಸುವರೆ ಸಾಧಕಗಳಾದ ನಿರ್ದೇಶಗಳನ್ನು ನೀಡುತ್ತವೆ. ಬಂಧುಗಳು ತಮ್ಮ ಪರಸ್ಪರ ಭಾದ್ಯತೆಗಳನ್ನೂ ರಾಷ್ಟ್ರೀಯವಾದ ಹಕ್ಕುಗಳನ್ನೂ ಯಜಮಾನ-ಭೃತ್ಯ, ರಾಜ-ಪ್ರಜೆ, ಧನಿಕ-ದರಿದ್ರದೊಳಗಿನ ಸಂಬಂಧವನ್ನೂ ವಿಭಿನ್ನ ಧರ್ಮಾನುಯಾಯಿಗಳು ತಮ್ಮೊಳಗೆ ಹಾಗೂ ವಿವಿಧ ರಾಷ್ಟ್ರಗಳು ಅನ್ಯೋನ್ಯ ಹೇಗೆ ವರ್ತಿಸಬೇಕೆಂಬುದರ ಕುರಿತೂ ಯುಕ್ತವಾದ ಉಪದೇಶಗಳನ್ನು ಧರ್ಮವು ನೀಡುತ್ತದೆ.

ನಾಲ್ಕನೆಯದಾಗಿ, ಧರ್ಮವು ಮನುಷ್ಯನ ಅಂತ್ಯ ಗತಿಯನ್ನು, ಎಂದರೆ ಮರಣಾನಂತರದ ಸ್ಥಿತಿಯ ಕುರಿತು ಕಲಿಸಿ ಮರಣಾ ನಂತರದ ಜೀವಿತ, ಅದರ ಸ್ವಭಾವ, ಆ ಘಟ್ಟದಲ್ಲಿ ಅನುಭವವಾಗುವ ಸುಖದುಃಖ ಗಳು, ಅಲ್ಲಿನ ಪುರೋಗತಿ ಇತ್ಯಾದಿ ವಿಚಾರಗಳ ಕುರಿತು ವಿಶ್ವಾಸ ಉಂಟಾಗುವಂತೆ ಮಾಡುತ್ತದೆ.

ಧರ್ಮವು ಕಲಿಸಿಕೊಡುವ ಈ ನಾಲ್ಕು ಪ್ರಧಾನ ಸಂಗತಿಗಳೂ ಮನುಷ್ಯರಿಗೆ ದೇವರೊಂದಿಗೆ ಒಂದು ಪ್ರೇಮಬಂಧವನ್ನುಂಟುಮಾಡಲಿಕ್ಕೂ ಅವರು ಪರಸ್ಪರ ಒಡಹುಟ್ಟಿದವರಂತೆ ವರ್ತಿಸಲಿಕ್ಕೂ ಸಹಾಯಕವಾಗಿದೆ ಯೆಂದು ಯಾರಿಗೂ ಗ್ರಹಿಸಬಹುದು. ಈ ನಾಲ್ಕು ವಿಚಾರಗಳ ಬಗ್ಗೆ ಇಸ್ಲಾಂ ಸಮಗ್ರವೂ ಮನೋಜ್ಞವೂ ಆದ ರೀತಿಯಲ್ಲಿ ಪ್ರಬೋಧಿಸಿರುತ್ತದೆ. ಇಸ್ಲಾಂ ಎಂಬ ನಾಮವೇ ಅದರ ಉದ್ದೇಶ ಮತ್ತು ಅಧ್ಯಾಪನ ಹೇಗಿರು ವಂತಹದ್ದೆಂದು ಬೊಟ್ಟು ಮಾಡುತ್ತದೆ. ಇಸ್ಲಾಂ ಎಂಬ ಪದದ ಅರ್ಥವೇ ತ್ಯಾಗಬೋಧದಿಂದ ಕೂಡಿ ಶರಣಾಗು ವುದು ಹಾಗೂ ಶಾಂತಸ್ಥಿತಿಯನ್ನು ಪೋಷಿಸುವುದು ಎಂದಾಗಿದೆ. ಆಗ, ದೇವರಿಗಾಗಿ ಆತ್ಮಾರ್ಪಣೆ ಮಾಡಿ ಅವನೊಂದಿಗೆ ಸುದೃಢವಾದೊಂದು ಸಂಬಂಧವನ್ನು ಸ್ಥಾಪಿಸಿ ಶಾಂತಿಯನ್ನು ಗಳಿಸಿ, ಅದರೊಂದಿಗೆ ಸಮಸೃಷ್ಟಿ ಗಳೊಡನೆ ಸೌಹಾರ್ದತೆಯಿಂದ ವರ್ತಿಸಿ ಸುತ್ತುಮುತ್ತಲೂ ಸಮಧಾನದಾಯಕವಾದ ಪರಿಸರವನ್ನು ಸೃಷ್ಟಿಸುವುದಾ ಗಿದೆ ಇಸ್ಲಾಂ ಧರ್ಮದ ಉದ್ದೇಶವೆಂದು ಇದರಿಂದ ಸಿದ್ಧ ವಾಗುತ್ತದೆ. ಅದರ ಈ ನಾಮಾಭಿಧಾನದಿಂದ ಮನವರಿಕೆ ಯಾಗುವ ಈ ಉದ್ದೇಶ ಸಾಧನೆಗೆ ಮೇಲೆ ವಿವರಿಸಿ ದಂತಹ ಉಪದೇಶಾದರ್ಶಗಳು ಅದರಲ್ಲಿ ಒಳಗೊಂಡಿರು ತ್ತವೆ. ಆದರೆ ಆಧುನಿಕ ವಿಜ್ಞಾನಕ್ಕಾದರೋ ಇಂತಹ ಉಪದೇಶಗಳೊಂದಿಗೆ ಏನೂ ಸಂಬಂಧವಿಲ್ಲ. ಅದಾ ದರೋ, ಭೌತಿಕ ವಸ್ತುಗಳಿಗೆ ಸಂಬಂಧಿಸಿದ ಸಂಶೋಧನೆ ಹಾಗೂ ಆ ಮೂಲಕವಿರುವ ಜ್ಞಾನಾರ್ಜನೆಯನ್ನು ಮಾತ್ರವೇ ಗುರಿಯಾಗಿರಿಸುತ್ತದೆ. ಅದುವೇ ಅದರ ಪರ ಮೋದ್ದೇಶ. ಹಾಗಲ್ಲದೆ, ಅದಕ್ಕೆ ಮನುಷ್ಯರು ಉತ್ಕೃ ಷ್ಟರೂ ಸುಸ್ವಾಭಾವಿಗಳೂ ಆಗಬೇಕೆಂಬ ಉದ್ದೇಶವೇ ಇರುವುದಿಲ್ಲ. ಆದ್ದರಿಂದ, ಲೋಕದಲ್ಲಿ ಸಮಾಧಾನಯುತ ವಾದ ಸ್ಥಿತಿಯೂ ಶಾಂತಿಸಂದಾಯಕವಾದ ಪರಿಸರವೂ ಉಂಟಾಗಲಿಕ್ಕೆ ಮತೋಪದೇಶಗಳನುಸಾರ ಜೀವಿಸಬೇಕಾ ದುದು ಅತ್ಯಾವಶ್ಯಕವಾಗಿದೆ.

ಧರ್ಮವು ಕಲಹಕ್ಕೆ ಕಾರಣವಾಗುವುದೆಂದು ವಾದಿಸುವವರು ಹೇಳುವ ಒಂದು ಸಂಗತಿ, ಪ್ರತಿ ಯೊಂದು ಧರ್ಮ ಕೂಡ ಅದು ಕಲಿಸುವುದು ಮಾತ್ರವೇ ಸತ್ಯವೆಂದೂ ಬಾಕಿಯವೆಲ್ಲ ಅಸತ್ಯವೆಂದೂ ಅಸತ್ಯ ಧರ್ಮದ ವಿಶ್ವಾಸಿಗಳೆಲ್ಲ ದಾರಿತಪ್ಪಿದವರೆಂಬ ಒಂದು ಭಾವನೆ ಅದರ ಅನುಯಾಯಿಗಳಲ್ಲಿ ಉಂಟು ಮಾಡುತ್ತದೆಂದೂ ಆಗಿದೆ. ಈ ಭಾವನೆಯೇ ಮನು ಷ್ಯರು ಅನ್ಯೋನ್ಯ ದ್ವೇಷಿಸಲಿಕ್ಕೂ ಜಗಳಾಡಲಿಕ್ಕೂ ಕಾರಣವಾಗುವುದಂತೆ! ಈ ವಾದವು ಪ್ರಥಮಶ್ರವಣ ದಲ್ಲಿ ಸರಿಯೆಂದೇ ತೋರುವುದಾದರೂ ಗಾಢವಾಗಿ ಚಿಂತಿಸುವಾಗ ಅದು ಬಹಳ ದುರ್ಬಲವಾದ ವಾದ ವೆಂದೂ ಅದನ್ನು ಆಧಾರವಾಗಿರಿಸಿ ಧರ್ಮವನ್ನು ಆಕ್ಷೇ ಪಿಸಬಾರದೆಂದೂ ಮನವರಿಕೆಯಾಗುತ್ತದೆ.

ಒಂದನೆಯದಾಗಿ, ನನಗೆ ತಿಳಿದ ಮಟ್ಟಿಗೆ, ಯಾವುದೇ ದೈವಿಕ ಧರ್ಮವೂ ಇತರ ಧರ್ಮಗಳ ಉಪ ದೇಶಗಳೆಲ್ಲಾ ಅಸತ್ಯವೆಂದು ಬೋಧಿಸುವುದಿಲ್ಲ. ಇಸ್ಲಾಂ ಧರ್ಮವಾದರೋ ಖಂಡಿತವಾಗಿಯೂ ಹಾಗೆ ಕಲಿಸು ವುದಿಲ್ಲ, ಬದಲು, ಅದು ಎಲ್ಲಾ ಮತಸ್ಥಾಪಕರನ್ನೂ ನಂಬಿ ಗೌರವಿಸಲಿಕ್ಕೂ ಅವರ ಧರ್ಮೋಧ್ಯಾಪನಗಳಲ್ಲಿ ಅಡಕವಾದ ಎಲ್ಲಾ ಸತ್ಯಗಳನ್ನು ಸ್ವೀಕರಿಸಲಿಕ್ಕೂ ಕಲಿಸು ತ್ತದೆ. ಪೂರ್ವಮತಗಳ ಅಧ್ಯಾಪನಗಳಲ್ಲಿ ಕೆಲವು ಆಯಾಯ ಕಾಲಘಟ್ಟಗಳಿಗೆ ಮಾತ್ರ ಯುಕ್ತವಾದುದೂ ಇನ್ನು ಕೆಲವು ಆ ಮತಗಳ ಆಧಾರ ಗ್ರಂಥಗಳು ಸುರಕ್ಷಿತ ವಲ್ಲವಾದುದರಿಂದ ಮನುಷ್ಯರ ಹಸ್ತಕ್ಷೇಪದಿಂದ ರೂಪಾಂತರಗೊಂಡುದುದರಿಂದಲೂ ಆ ಮತಗಳ ಉಪ ದೇಶಸಿದ್ಧಾಂತಗಳೆಲ್ಲಾ ಸರಿಯೆಂದು ಹೇಳಲಿಕ್ಕಾಗದೆಂದೂ ಇಸ್ಲಾಂ ಹೇಳುತ್ತದೆ. ಅದರ ಜತೆಯಲ್ಲಿ, ಧರ್ಮವ್ಯತ್ಯಾಸ ವನ್ನು ಆಧಾರಮಾಡಿ ಇತರರನ್ನು ದ್ವೇಷಿಸುವುದಾಗಲಿ ಅವರೊಂದಿಗೆ ಅನ್ಯಾಯವಾಗಿ ವರ್ತಿಸುವುದಾಗಲಿ ಮಾಡಬಾರದೆಂದೂ ಅವರ ಧಾರ್ಮಿಕ ಭಾವನೆಗಳನ್ನು ಹಾನಿಗೊಳಿಸಬಾರದೆಂದೂ ಧರ್ಮಸ್ವಾತಂತ್ರ್ಯವನ್ನು ನೀಡಬೇಕಾಗಿದೆಂದೂ ಇಸ್ಲಾಂ ಬಲಯುತವಾಗಿ ಉಪ

ದೇಶಿಸುತ್ತದೆ. ಹಾಗಿರುವಾಗ, ಒಂದು ಧರ್ಮದ ಸಿದ್ಧಾಂತಗಳು ಸತ್ಯವೆಂದೂ ಇತರ ಧರ್ಮಗಳ ಸಿದ್ಧಾಂತಗಳಲ್ಲಿ ಕೆಲವು ಕುಂದುಕೊರತೆಗಳು ಸೇರಿವೆಯೆಂದೂ ಅವುಗಳನ್ನು ನಂಬುವವರು ದಾರಿತಪ್ಪಿದವರೆಂದೂ ಹೇಳುವುದು ಕಲಹಕ್ಕೆ ಎಂದಿಗೂ ಕಾರಣವಾಗಲಿಕ್ಕಿಲ್ಲ. ಏಕೆಂದರೆ ಧರ್ಮವು ಈ ಪ್ರಕಾರ ವ್ಯತ್ಯಸ್ತ ಅಭಿಪ್ರಾಯಗಳನ್ನು ಕಲಿಸುವ ಅದೇ ಸಂದರ್ಭದಲ್ಲಿ ಅದು ಧರ್ಮಭೇದವನ್ನು ಆಧಾರವಾಗಿಟ್ಟು ಯಾರನ್ನೂ ದ್ವೇಷಿಸಬಾರದೆಂದೂ ಯಾರೊಡನೆಯಾಗಲಿ ಜಗಳಾಡಬಾರದೆಂದೂ ಕಲಿಸುತ್ತದೆ.

ಪ್ರತಿಯೊಬ್ಬನು ತನ್ನ ವಿಶ್ವಾಸಾಭಿಪ್ರಾಯಗಳೇ ಸರಿಯೆಂದೂ ಅವುಗಳಿಗೆ ವಿರುದ್ಧವಾದುದು ಸರಿಯಲ್ಲವೆಂದೂ ಹೇಳುವುದು ಸ್ವಾಭಾವಿಕವೇ ಆಗಿದೆ. ಈ ಅಭಿಪ್ರಾಯಗತಿ ಧರ್ಮಕ್ಕೆ ಮಾತ್ರ ಸಂಬಂಧಿಸಿದುದಲ್ಲ. ಮನುಷ್ಯರು ಲೋಕದಲ್ಲಿರುವಷ್ಟು ಕಾಲವೆಲ್ಲಾ ಅಭಿಪ್ರಾಯ ವ್ಯತ್ಯಾಸ ಇದ್ದೇ ಇರುವುದು. ಆದ್ದರಿಂದ ಜಗತ್ತಿನಲ್ಲಿ ಧರ್ಮ ಇಲ್ಲವೆಂದಾದರೆ ಕೂಡ ಭಿನ್ನಾಭಿಪ್ರಾಯ ಇಲ್ಲದಾಗುವುದಿಲ್ಲ. ಒಂದು ಧರ್ಮವು ಅದರ ಸಿದ್ಧಾಂತಗಳು ಸತ್ಯವೆಂದೂ ಆ ಸತ್ಯಸಿದ್ಧಾಂತಗಳಿಗೆ ವಿರುದ್ಧವಾದುವು ಅಸತ್ಯವೆಂದೂ ಅಂತಹ ಅಸತ್ಯ ಸಿದ್ಧಾಂತಗಳನ್ನು ಸ್ವೀಕರಿಸುವವರು ಪಥಭ್ರಷ್ಟರೆಂದೂ ಕಲಿಸುವುದಾದರೆ ಅದು ಸಹ ಒಂದು ಅಭಿಪ್ರಾಯ ಭೇದವೇ ಆಗಿದೆ. ಆದುದರಿಂದ, ಧರ್ಮವನ್ನು ಸ್ಪರ್ಶಿಸುವ ಈ ಅಭಿಪ್ರಾಯವ್ಯತ್ಯಾಸ ಕಲಹಕ್ಕೂ ಅಶಾಂತಿಗೂ ಕಾರಣವಾಗುವುದಾದರೆ ಯಾವುದೇ ರೀತಿಯ ಅಭಿಪ್ರಾಯ ವ್ಯತ್ಯಾಸ ಸಹ ಕಲಹಕಾರಣವಾಗಬೇಕಾಗಿದೆ. ಏಕೆಂದರೆ, ಯಾವುದೇ ವಿಚಾರಕ್ಕೆ ಸಂಬಂಧಿಸಿದ ಭಿನ್ನಾಭಿಪ್ರಾಯವಾದರೂ ಆ ನಿರ್ದಿಷ್ಟ ಅಭಿಪ್ರಾಯದವರ ದೃಷ್ಟಿಯಲ್ಲಿ ವಿರೋಧಾಭಿಪ್ರಾಯವು ತಪ್ಪು ಹಾಗೂ ವಿರೋಧಾಭಿಪ್ರಾಯವನ್ನು ಹೊಂದಿದವರು ದಾರಿತಪ್ಪಿದವರು ಆಗಿದ್ದಾರೆ. ಧರ್ಮವ್ಯತ್ಯಾಸಕ್ಕಿಂತ ದೇಶವ್ಯತ್ಯಾಸ ಮತ್ತು ಜಾತಿವ್ಯತ್ಯಾಸ ತೀವ್ರವಾದ ಛಿದ್ರತೆಗೂ ಕಲಹಕ್ಕೂ ಕಾರಣವಾಗಿ ಗೋಚರಿಸುತ್ತವೆ. ವಾಸ್ತವದಲ್ಲಿ, ಇಂತಹ ಅಭಿಪ್ರಾಯ ಭಿನ್ನತೆಗಳೊಂದೂ ಅಲ್ಲ, ಈ ಭಿನ್ನಾಭಿಪ್ರಾಯ ಹೊಂದಿದ ಜನವಿಭಾಗಗಳ ದುಷ್ಟ ಮನಸ್ಥಿತಿಯೇ ಕಲಹಕ್ಕೂ ಅಸಮಾಧಾನಕ್ಕೂ ಕಾರಣವಾಗುತ್ತದೆ. ಧರ್ಮವು ಅಭಿಪ್ರಾಯ ವ್ಯತ್ಯಾಸಕ್ಕೆ ಕಾರಣವಾಗುವುದರಿಂದಲ್ಲವೇ ಅದು ಕಲಹಕ್ಕೂ ಸಮಾಧಾನ ವಿಘಾತಕ್ಕೂ ಹೇತುಕವೆಂದು ಹೇಳುವುದು. ಹಾಗೆ ಭಿನ್ನಾಭಿಪ್ರಾಯ ಕಲಹ-ಗಲಭೆಗೆ ಕಾರಣವಾಗುವುದೆಂದಾದರೆ ಮನುಷ್ಯರಿಗೆ ಅಭಿಪ್ರಾಯ ಸ್ವಾತಂತ್ರ್ಯವೇ ಇರಬಾರದೆಂದೂ ಒಳ್ಳೆಯದೆಂದು ತೋಚುವ ಯಾವುದೇ ಸಿದ್ಧಾಂತವನ್ನಾಗಲಿ ಅಂಗೀಕರಿಸುವ ಸ್ವಾತಂತ್ರ್ಯವನ್ನು ಅವರಿಗೆ ನೀಡಬಾರದೆಂದೂ ಹೇಳಬೇಕಾದೀತು. ಇದಾದರೋ ಅತಿ ಭಯಂಕರವಾದ ವಿಪ್ಲವಕ್ಕೂ ಶಾಂತಿ ಭಂಗಕ್ಕೂ ಕಾರಣವಾಗುವಂಥದ್ದೂ ಮನುಷ್ಯರನ್ನು ಮೃಗಗಳಿಗಿಂತ ಹೆಚ್ಚು ನಿಕೃಷ್ಟವಾದೊಂದು ಪರಿಸ್ಥಿತಿಗೆ ಕೊಂಡೊಯ್ಯುವ ಅಭಿಪ್ರಾಯವೂ ಆಗಿದೆ.

ಅಷ್ಟೇ ಅಲ್ಲ, ದೈವಿಕ ಧರ್ಮಗಳು ಅಸಮಾಧಾನಕ್ಕೆ ಕಾರಣವಾಗುವುದೆಂದೂ ಆದ್ದರಿಂದ ಆ ಧರ್ಮಗಳೆಲ್ಲಾ ತ್ಯಾಜ್ಯವೆಂದೂ ಹೇಳುವವರಿಗೆ ಸ್ವಂತವಾಗಿ ಹಲವು ತರದ ವಿಶ್ವಾಸಾಭಿಪ್ರಾಯಗಳು ಇರಬಹುದು. ಅವರ ಆ ವಿಶ್ವಾಭಿಪ್ರಾಯಗಳೇ ಅವರ ಧರ್ಮಗಳಾಗಿವೆ. ದೈವಿಕ ಧರ್ಮಗಳೆಂದು ನಂಬಲ್ಪಡುವವುಗಳ ಸಿದ್ಧಾಂತಗಳನ್ನು ಅವುಗಳ ಅನುಯಾಯಿಗಳು ಸತ್ಯವೆಂದು ಸ್ವೀಕರಿಸುವಾಗ, ಈ ಬಗೆಯ ಧರ್ಮಗಳು ಬೇಡವೆಂದು ವಾದಿಸುವವರು ತಾವು ಸ್ವಂತವಾಗಿ ರೂಪೀಕರಿಸಿದ ಅಭಿಪ್ರಾಯಾದರ್ಶಗಳನ್ನಾಗಲಿ ಬೇರೆ ಯಾರಾದರೂ ವಿದ್ವಾಂಸರು ಹೇಳಿರುವ ಅಭಿಪ್ರಾಯಗಳನ್ನಾಗಲಿ ತಮ್ಮ 'ಧರ್ಮ'ವೆಂದು ಅಂಗೀಕರಿಸುತ್ತಾರೆ ಎಂಬ ಒಂದು ವ್ಯತ್ಯಾಸ ಮಾತ್ರವೇ ಇದೆ. ಆದ್ದರಿಂದ, ಅಭಿಪ್ರಾಯಂ ಭಿನ್ನತೆಗಳಿಗೆ ಹೇತುವಾಗುವ ಧರ್ಮಗಳು ಕಲಹಗಳಿಗೆ ದಾರಿಮಾಡಿಕೊಡುತ್ತವೆಂದು ಹೇಳಬಹುದಾದರೆ ಧರ್ಮವಿರೋಧಿಗಳ ಈ 'ಧರ್ಮ'ಗಳು ಸಹ ಕಲಹಕ್ಕೂ ಅಸಮಾಧಾನಕ್ಕೂ ಕಾರಣವಾಗುತ್ತವೆಂದೇ ಹೇಳಬಹುದು. ಏಕೆಂದರೆ, ಇವರಿಗೂ ಮನಸ್ಸಾಕ್ಷಿಯೂ ನೀತಿಪ್ರಜ್ಞೆಯೂ ಇದ್ದರೆ ಇವರ ಸ್ವಯಂನಿರ್ಮಿತ ಸಿದ್ಧಾಂತಗಳಿಗೆ ವಿರುದ್ಧವಾದ ಅಭಿಪ್ರಾಯಗಳೂ ಸಿದ್ಧಾಂತಗಳೂ ಅಸಂಬದ್ಧಗಳೆಂದೂ ಆ ಅಸಂಬದ್ಧ ವಿಚಾರಗಳನ್ನು ಕೈಗೊಳ್ಳುವವರು ದಾರಿತಪ್ಪಿದವರೆಂದೂ ಭಾವಿಸಲು ಇವರು ಸಹ ಸ್ವಭಾವತಃ ನಿರ್ಬಂಧಿತರಾಗುತ್ತಾರೆ. ಆಗ, ಯಾವ ನ್ಯಾಯವನ್ನು ಅವಲಂಬಿಸಿ ಧರ್ಮವು ಕಲಹಕ್ಕೆ

# ಯೇಸುಕ್ರಿಸ್ತರು ಕಾಶ್ಮೀರದಲ್ಲಿ ನಿಧನರಾಗಿರುವರೋ?

★ ಡಿ. ಕೆ. ದೀಕ್ಷಿತ್

ಯೇಸುಕ್ರಿಸ್ತರು ಶಿಲುಬೆಯಲ್ಲಿ ಮೃತರಾಗಲಿಲ್ಲ. ಅವರು ಸತ್ತವರಿಂದ ಎದ್ದೇಳಲೂ ಇಲ್ಲ. ತದ್ವಿರುದ್ಧವಾಗಿ ಅವರು ಶಿಲುಬೆಯ ಶಿಕ್ಷೆಗೆ ಗುರಿಯಾಗಿಯೂ ರಕ್ಷಿಸಲ್ಪಟ್ಟು ಕಾಶ್ಮೀರಕ್ಕೆ ಪಲಾಯನಗೈದರು. ಅಲ್ಲಿ ಪೂರ್ಣ ಜೀವಾವಧಿಯನ್ನು ಕಳೆದು ಸ್ವಾಭಾವಿಕವಾಗಿ ಮೃತಪಟ್ಟು ರೌಝಾಬಾಲ್‌ನಲ್ಲಿ ದಫನ ಮಾಡಲ್ಪಟ್ಟರು. ಶ್ರೀನಗರದ ಮಧ್ಯದಲ್ಲಿ ಜನನಿಬಿಡವಾದ ಖಾನ್‌ಯಾರ್ ಎಂಬ ಸ್ಥಳದಲ್ಲಿ ಈ ರೌಝಾಬಾಲ್ ಗೋರಿ ಇದೆ. ಪ್ರಪಂಚದಾದ್ಯಂತವಿರುವ ನೂರು ಕೋಟಿ ಕ್ರೈಸ್ತರ ಧಾರ್ಮಿಕ ವಿಶ್ವಾಸಗಳ ಮೂಲಾಧಾರಗಳನ್ನೇ ಘಾಸಿಗೊಳಿಸುವಂತಹ ಈ ವಾದ ದೈವದ್ರೋಹಕರವೂ ಭಾವೋದ್ರೇಕಕರವೂ ಕುತೂಹಲಕರವೂ ಆಗಿ ತೋರುತ್ತದೆಯಲ್ಲವೇ ?

ಇತ್ತೀಚೆಗಿನ ವರ್ಷಗಳಲ್ಲಿ ಅಸಾಧಾರಣವೂ ನಂಬಲು ಕಷ್ಟಕರವೂ ಆದ ಈ ವಾದವನ್ನು ಪುರಸ್ಕರಿಸುವ ಹಲವಾರು ವಿಶ್ವಸನೀಯವೂ ಖಂಡನೆಗೆ ಅಸಾಧ್ಯವೂ ಆದ ಸಾಕ್ಷ್ಯಾಧಾರಗಳನ್ನು ಹಲವು ನವೀನ ವಿದ್ವಾಂಸರು ಶೇಖರಿಸಿ ಈ ವಾದವನ್ನು ಸಮರ್ಥಿಸಿರುವರು. ಆಂಡ್ರಿಯಾಸ್ ಫೇಬರ್ ಕೈಸರ್ ಎಂಬ ಜರ್ಮನ್ ವಿದ್ವಾಂಸರು ಇತ್ತೀಚೆಗೆ ಪ್ರಕಟಗೊಂಡ ತನ್ನ

---

ಕಾರಣವೆಂದು ಆಪಾದಿಸುತ್ತಾರೋ ಅದೇ ನ್ಯಾಯ ಪ್ರಕಾರ ಇವರ ಸ್ವಂತ ಅಭಿಪ್ರಾಯಗಳಾದ ಧರ್ಮವು ಕೂಡ ಕಲಹಕ್ಕೂ ಅಶಾಂತಿಗೂ ಕಾರಣವಾಗುವುದೆಂದು ಹೇಳಬಹುದಾಗಿದೆ. ಅಷ್ಟೇ ಅಲ್ಲ, ಈ ಜನರ ವಿಶ್ವಾಸಾಭಿಪ್ರಾಯಗಳು ಸ್ವಂತ ಹಿತಾನುಸಾರವಾಗಿರುವುದರಿಂದ ಮೇಲಿನ ಒಂದು ಶಕ್ತಿಯ ಅಧಿಕಾರ ಪ್ರಭಾವ ಅವುಗಳಲ್ಲಿ ಅಂತರ್ಲೀನವಾಗಿಲ್ಲದಿರುವುದರಿಂದ ಇವರ ಅಭಿಪ್ರಾಯ ಭಿನ್ನತೆಗಳೇ ವಾಸ್ತವದಲ್ಲಿ ಕಲಹಗಳಿಗೂ ಛಿದ್ರತೆಗಳಿಗೂ ಹೇತುವಾಗುತ್ತವೆ. ದೈವವಿಶ್ವಾಸವನ್ನೂ ಧರ್ಮಾದರ್ಶಗಳನ್ನೂ ಕಿತ್ತೆಸೆದು ಸ್ವಾಭಿಪ್ರಾಯಗಳನ್ನು ಮಾತ್ರ ಅವಲಂಬಿಸಿ ವರ್ತಿಸುವ ಸ್ವಾರ್ಥಲೋಲುಪರಾದ ಯುರೋಪಿನ ನರಬೇಟೆಯಾಡುವವರ ಪ್ರವೃತ್ತಿಗಳಿಂದ ಈ ವಸ್ತುಸ್ಥಿತಿಯನ್ನು ಮನಗಾಣಬಹುದು. ಆದರೆ ಧರ್ಮಾನುಯಾಯಿಗಳು ಅಂಗೀಕರಿಸಿರುವುದು ಅವರ ಸ್ವಾರ್ಥವನ್ನು ಪೋಷಿಸಲು ಸ್ವಯಂನಿರ್ಮಿತಗಳಾದ ನಿರ್ದೇಶನಗಳನ್ನಲ್ಲ; ಬದಲು, ದೈವಿಕವೆಂದು ತಾವು ನಂಬುವ ಧರ್ಮಗಳಲ್ಲಿ ಒಳಗೊಂಡಿರುವ ಉಪದೇಶಾದರ್ಶಗಳನ್ನಾಗಿದೆ. ಶಿಕ್ಷಾರಕ್ಷೆಗಳ ಪರಮಾಧಿಕಾರಿಯೂಗಿರುವ ಒಬ್ಬ ಸರ್ವಾಧಿಕರ್ತ ತಮಗಿದ್ದಾನೆಂದೂ ತಾವು ಕೈಗೊಂಡಿರುವುದು ಆ ಸರ್ವವಲ್ಲಭನಿಂದಿರುವ ನಿರ್ದೇಶನಗಳನ್ನೆಂದೂ ಅವರು ನಂಬುತ್ತಾರೆ. ಅಭಿಪ್ರಾಯ ಭಿನ್ನತೆಯನ್ನು ಪ್ರಕಟಿಸುವರೆ ಅವಕಾಶವನ್ನೂ ಧರ್ಮ ಸ್ವಾತಂತ್ರ್ಯವನ್ನೂ ನೀಡಬೇಕೆಂಬುದೂ ಇತರರೊಡನೆ ಸೌಹಾರ್ದತೆಯಿಂದ ವರ್ತಿಸಬೇಕೆಂಬುದೂ ಆ ಸರ್ವಾಧಿನಾಥನ ಆದೇಶವೇ ಆಗಿದೆಯೆಂದೂ ಧರ್ಮಾನುಯಾಯಿಗಳು ನಂಬುತ್ತಾರೆ. ಆದ್ದರಿಂದ, ಇತರ ಧರ್ಮಾನುಯಾಯಿಗಳ ಕೆಲವು ನಂಬಿಕೆಗಳು ತಪ್ಪೆಂದು ನಂಬುವುದರ ಜೊತೆಯಲ್ಲೇ ಅವರು ಆ ವಿಮತಸ್ಥರೊಡನೆ ಸೌಹಾರ್ದತೆಯಿಂದ ವರ್ತಿಸುವರೆ ಪ್ರೇರಿತರಾಗುತ್ತಾರೆ. ಆದ್ದರಿಂದ, ಧರ್ಮಭೇದದ ಕಾರಣದಿಂದುಂಟಾಗುವ ಅಭಿಪ್ರಾಯಭೇದ ಕಲಹಕ್ಕೂ ಶಾಂತಿಭಂಗಕ್ಕೂ ಹೇತುವಾಗಲಾರದು. ಬದಲು ಒಬ್ಬನು ಎಷ್ಟರ ಮಟ್ಟಿಗೆ ದೈವಭಕ್ತಿಯಲ್ಲೂ ಧರ್ಮಾನುಸರಣೆಯಲ್ಲೂ ಅಭಿವೃದ್ಧಿ ಪಡೆಯುತ್ತಾನೋ ಅಷ್ಟರ ಮಟ್ಟಿಗೆ ಆತನು ಸಮಸೃಷ್ಟಿಗಳೊಡನೆ ಸೌಹಾರ್ದತೆಯಲ್ಲೂ ಸಹೋದರ ಭಾವನೆಯಲ್ಲೂ ವರ್ತಿಸುವರೆ ನಿರ್ಬಂಧಿತನಾಗಿ, ಹಾಗೆ ಆತನು ತನ್ನ ಸುತ್ತುಮುತ್ತಲೂ ಶಾಂತಿ ಸಂವರ್ಧಕವಾದ ಪರಿಸರವನ್ನು ಸೃಷ್ಟಿಸುತ್ತಾನೆ.

ಗ್ರಂಥವಲ್ಲಿ ಯೇಸುಕ್ರಿಸ್ತರ ಜೀವನದ ರಹಸ್ಯಕರವಾದ ಸಂಗತಿಗಳ ಕುರಿತು ಬೆಳಕನ್ನು ನೀಡುವ ಸಾಕ್ಷ್ಯಗಳನ್ನು ನೀಡಿರುವರು. ಫೇಬರ್ ಕೈಸರ್ ಬರೆದ ಪುಸ್ತಕದ ಹೆಸರು "*Jesus Died in Kashmir*" (ಯೇಸುಕ್ರಿಸ್ತರು ಕಾಶ್ಮೀರದಲ್ಲಿ ಮೃತರಾಗಿರುವರು) ಎಂದಾಗಿದೆ. ಈ ಗ್ರಂಥವು ಅವರ ವಾದವನ್ನು ಸಮರ್ಥಿಸಲು ಬಹಳ ಸೂಕ್ಷ್ಮವಾಗಿ ಸಂಶೋಧಿಸಲ್ಪಟ್ಟ ಸಾಕ್ಷ್ಯಾಧಾರಗಳಿಂದ ಕೂಡಿದ್ದು ಹಲವಾರು ಕೈಬರಹ ಪ್ರತಿಗಳ ಫೋಟೊಗಳನ್ನೂ ಭಾಷಾಂತರಗಳನ್ನೂ ದೀರ್ಘವಾದ ಟಿಪ್ಪಣಿಗಳನ್ನೂ ಒಳಗೊಂಡಿದೆ. ಅವರು ತನ್ನ ಗ್ರಂಥದಲ್ಲಿ ಅನೇಕ ಸಾಕ್ಷ್ಯಾಧಾರಗಳನ್ನು ನೀಡಿರುವುದರಿಂದ ಅವರ ವಾದವನ್ನು ಸುಲಭವಾಗಿ ಖಂಡಿಸಲು ಮತ್ತು ತಳ್ಳಿಹಾಕಲು ಸಾಧ್ಯವಿಲ್ಲದಾಗಿದೆ. ಇತ್ತೀಚೆಗೆ ಲಂಡನಿನಲ್ಲಿ ಈ ನಿರ್ಣಾಯಕವೂ ವಿವಾದಾತ್ಮಕವೂ ಆದ ವಿಷಯದ ಕುರಿತು ಒಂದು ಅಂತಾರಾಷ್ಟ್ರೀಯ ವಿಚಾರ ಸಂಕಿರಣ (Symposium) ನಡೆಯಿತು. ಅಮೇರಿಕದಲ್ಲಿ ಈ ಹೊಸ ವಾದ ನಿಷ್ಠಾವಂತ ಕ್ರೈಸ್ತ ವಿಶ್ವಾಸಿಗಳಲ್ಲಿ ತೀವ್ರ ಭಾವೋದ್ರೇಕದಿಂದ ಕೂಡಿದ ವಾಗ್ವಾದಗಳಿಗೆ ಕಾರಣವಾಗಿದೆ.

ಯೇಸು ಕ್ರಿಸ್ತರು ಶಿಲುಬೆಯ ಮರಣದಿಂದ ರಕ್ಷಿಸಲ್ಪಟ್ಟು ಕಾಶ್ಮೀರಕ್ಕೆ ಪಲಾಯನಗೈದು ಅಲ್ಲಿ ಮೃತರಾದರೆಂದು ಮೊತ್ತಮೊದಲು ಸಾಕ್ಷ್ಯಾಧಾರಗಳನ್ನಿತ್ತು ವಾದಿಸಿದುದು ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ (1835–1908), 1899ನೇ ಇಸವಿಯಲ್ಲಿ ತನ್ನ "ಮಸೀಹ್ ಹಿಂದೂಸ್ಥಾನ್-ಮೇ" (ಯೇಸುಕ್ರಿಸ್ತರು ಭಾರತದಲ್ಲಿ) ಎಂಬ ಉರ್ದು ಗ್ರಂಥದ ಮೂಲಕವಾಗಿತ್ತು. ಅಸಾಧಾರಣವಾದ ಈ ವಾದವನ್ನು ಅವರ ಅನುಯಾಯಿಗಳು ಇನ್ನಷ್ಟು ಹೆಚ್ಚು ವಿಶದವಾಗಿ ವಿವರಿಸಿ ಗ್ರಂಥಗಳನ್ನು ರಚಿಸಿರುವರು. ಅವರ ಅನುಯಾಯಿಗಳಾದ ಮುಫ್ತಿ ಮುಹಮ್ಮದ್ ಸಾದಿಖ್ "ದಿ ಗ್ರೇವ್ ಆಫ್ ಜೀಸಸ್" (ಯೇಸುಕ್ರಿಸ್ತರ ಗೋರಿ) ಎಂಬ ಗ್ರಂಥವನ್ನು 1936 ರಲ್ಲಿ ಬರೆದರು. ಖ್ವಾಜಾ ನಝೀರ್ ಅಹ್ಮದ್ "ಜೀಸಸ್ ಇನ್ ಹೆವನ್ ಆನ್ ಅರ್ತ್" (ಯೇಸುಕ್ರಿಸ್ತರು ಭೂಲೋಕದ ಸ್ವರ್ಗದಲ್ಲಿ) ಎಂಬ ಗ್ರಂಥವನ್ನು 1951 ರಲ್ಲಿ ಬರೆದರು. ಮೌಲಾನ ಜಲಾಲುದ್ದೀನ್ ಶಮ್ಸ್ "ವೇರ್ ಡಿಡ್ ಜೀಸಸ್ ಡೈ?" (ಯೇಸುಕ್ರಿಸ್ತರು ಮೃತರಾದುದು ಎಲ್ಲಿ?) ಎಂಬ ಗ್ರಂಥವನ್ನು 1959 ರಲ್ಲಿ ಪ್ರಸಿದ್ಧಗೊಳಿಸಿದರು.

ಅಹ್ಮದಿಯರು ತಮ್ಮ ಸಂಘಟನೆಯ ಸ್ಥಾಪಕ ಮಿರ್ಝಾ ಗುಲಾಮ್ ಅಹ್ಮದರನ್ನು ಮಸೀಹ್ ಮೌಊದ್ (ವಾಗ್ದಾನ ನೀಡಲ್ಪಟ್ಟ ಮಸೀಹ್) ಎಂದು ನಂಬುತ್ತಾರೆ. ಅವರು ಮುಹಮ್ಮದ್ ಪೈಗಂಬರರು ಕೊನೆಯ ಪ್ರವಾದಿಯೆಂದು ಇತರ ಮುಸ್ಲಿಮರು ನಂಬುವ ಹಾಗೆ ನಂಬುವುದಿಲ್ಲ. ಅವರನ್ನು ಪಾಕಿಸ್ತಾನದಲ್ಲಿ ಅಮುಸ್ಲಿಮರೆಂದು ಘೋಷಿಸಲಾಗಿದೆ. ಜಾಗತಿಕ ನ್ಯಾಯಾಲಯದಲ್ಲಿ ಪಾಕಿಸ್ತಾನದ ಪ್ರತಿನಿಧಿಯಾಗಿ ಜಡ್ಜ್ ರಾಗಿದ್ದ ಸರ್ ಮುಹಮ್ಮದ್ ಝಫರುಲ್ಲಾ ಖಾನರು ಯೇಸುಕ್ರಿಸ್ತರು ಕಾಶ್ಮೀರದಲ್ಲಿ ಜೀವಿಸಿ ಮೃತರಾದರೆಂದೂ ಅವರ ದಫನ ಸ್ಥಳ ರೌಝಾಬಾಲ್ ಕ್ಷೇತ್ರದಲ್ಲಿ ಇದೆಯೆಂದೂ ಹೇಳಿದ್ದರು. ಅಬುಲ್ ಫಝಲ್ ಯೇಸುಕ್ರಿಸ್ತರನ್ನು ಯೂಝ್ ಎಂದೂ ಕ್ರಿಸ್ತನೆಂದೂ ಬರೆದಿದ್ದರು. ರೌಝಾಬಾಲ್ ಸಮಾಧಿ ಯೂಝ್ ಆಸಫ್ ಎಂಬವರ ಅವಶಿಷ್ಟಗಳನ್ನು ಒಳಗೊಂಡಿದೆಯೆಂದು ಕಾಶ್ಮೀರದ ಮುಸ್ಲಿಮರು ಹೇಳುತ್ತಾರೆ.

ಫೇಬರ್ ಕೈಸರ್‌ರನ್ನು ನಂಬಬಹುದಾದರೆ ಯೇಸು ಕ್ರಿಸ್ತರ ಜೀವಿತದ ಕುರಿತು ಸಂಪ್ರದಾಯಕ್ಕೆ ವಿರುದ್ಧವಾಗಿ ಅವರು ನೀಡುವ ವಿವರಣೆ ಈ ರೀತಿ ಇದೆ: ಯೇಸುಕ್ರಿಸ್ತರು ಶಿಲುಬೆಯ ಶಿಕ್ಷೆಗೆ ಗುರಿಯಾದ ನಂತರ ಅದರಿಂದ ಜೀವಂತನಾಗಿಯೇ ಇಳಿಸಲ್ಪಟ್ಟರು. ಅವರ ಗಾಯಗಳು ಗುಣಹೊಂದಿದ ನಂತರ ತನ್ನ ತಾಯಿ ಮತ್ತು ತನ್ನ ಪ್ರಿಯ ಶಿಷ್ಯನಾದ ತೋಮಸ್ ಅವರ ಜೊತೆಗೂಡಿ ಪೂರ್ವ ದೇಶಗಳಿಗೆ ವಲಸೆ ಹೋದರು. ಯೇಸುಕ್ರಿಸ್ತರ ತಾಯಿಗೆ ಪ್ರಯಾಣದ ಕಷ್ಟಗಳನ್ನು ಸಹಿಸಲಿಕ್ಕಾಗದೆ ರಾವಲ್‌ಪಿಂಡಿ-ಶ್ರೀನಗರ ದಾರಿಯಲ್ಲಿರುವ ರಾವಲ್‌ಪಿಂಡಿಗೆ ಹತ್ತಿರವಾದ ಮರ್ರಿ (Murree) ಎಂಬಲ್ಲಿ ಮೃತರಾದರು. ಮರ್ರಿ ಎಂಬ ಪಟ್ಟಣ ಯೇಸು ಕ್ರಿಸ್ತರ ತಾಯಿ ಮೇರಿಯವರ ಹೆಸರಿನಿಂದಾಗಿ ಹಾಗೆ ಕರೆಯಲ್ಪಡುತ್ತದೆ. ಹತ್ತೊಂಭತ್ತನೆಯ

ಶತಮಾನದ ಕೊನೆಯ ತನಕ ಈ ಪಟ್ಟಣದ ಹೆಸರನ್ನು Mary (ಮೇರಿ) ಎಂದೇ ಬರೆಯುತ್ತಿದ್ದರು. ಯೇಸು ಕ್ರಿಸ್ತರ ಶಿಷ್ಯ ತೋಮಸ್ ದಕ್ಷಿಣ ಭಾರತಕ್ಕೆ ಹೋಗಿ ಅಲ್ಲಿ ಸುವಾರ್ತೆಯನ್ನು ಹರಡುತ್ತಾ ಅಲ್ಲೇ ಮೃತರಾದರು.

ಮೇಲೆ ಹೇಳಲಾದ ಜರ್ಮನ್ ವಿದ್ವಾಂಸ ಹೇಳುವುದು ಈ ರೀತಿ: ಯೇಸುಕ್ರಿಸ್ತರು ಕಾಶ್ಮೀರದಲ್ಲಿ ನೆಲಸಿ ಅಲ್ಲೇ ಹೊಸ ಜೀವನ ನಡೆಸಿದರು. ಅವರು ಮದುವೆ ಆಗಿ ಅವರಿಗೆ ಮಕ್ಕಳೂ ಹುಟ್ಟಿದರು. ಶ್ರೀನಗರದ ನಿವಾಸಿ ಸಾಹಿಬ್‌ಝಾದ ಬಶಾರತ್ ಸಲೀಮ್ ಎಂಬ ವ್ಯಕ್ತಿಯ ಬಳಿ ಇರುವ ವಂಶಾವಳಿ ಪತ್ರಿಕೆ ಆ ವ್ಯಕ್ತಿಯು ಯೇಸುಕ್ರಿಸ್ತರ ನೇರ ಸಂತತಿಗೆ ಸೇರಿದವನೆಂದು ಸಾಕ್ಷ್ಯ ನೀಡುತ್ತದೆ. ಯೇಸುಕ್ರಿಸ್ತರು ದೀರ್ಘಾಯುಸ್ಸು ಗಳಿಸಿದರೆಂದೂ ಅವರು ವೃದ್ಧಾಪ್ಯದಲ್ಲಿ ಸಹಜ ಕಾರಣಗಳಿಂದ ಮೃತರಾದ ನಂತರ ಶೌಝಾಬಾಲ್‌ನ ಗೋರಿಯಲ್ಲಿ ದಫನುಗೊಳಿಸಲ್ಪಟ್ಟರೆಂದೂ ಹೇಳಲಾಗುತ್ತಿದೆ.

ಯೇಸುಕ್ರಿಸ್ತರ ಜೀವನದ ಕುರಿತು ಬೈಬಲ್ ನೀಡುವ ವಿವರಣೆ ಕೆಲವು ಪ್ರಶ್ನೆಗಳನ್ನು ಉತ್ತರಿಸದೆ ಬಿಡುತ್ತದೆ. ಉದಾಹರಣೆಗೆ, 13ನೇ ವಯಸ್ಸಿನ ನಂತರ ಅಜ್ಞಾತರಾದ ಯೇಸುಕ್ರಿಸ್ತರು ತನ್ನ 29ನೇ ವಯಸ್ಸಿನಲ್ಲಿ ಸ್ನಾನಿಕನಾದ ಸಂತ ಜೋನ್‌ನಿಂದ ಸ್ನಾನಗೊಳಿಸಲ್ಪಡುವ ವರೆಗೆ ಎಲ್ಲಿದ್ದರು ? ರಶ್ಯನ್ ಸಂಚಾರಿಯೂದ ನಿಕೋಲಸ್ ನೋಟೋವಿಚ್ 1887ರಲ್ಲಿ ಭಾರತವನ್ನು ಸಂದರ್ಶಿಸಿದ ನಂತರ ಬರೆದ *Life of Saint Jesus* (ಸಂತ ಯೇಸುಕ್ರಿಸ್ತರ ಜೀವನ ಚರಿತ್ರೆ) ಎಂಬ ಗ್ರಂಥದಲ್ಲಿ ಯೇಸುಕ್ರಿಸ್ತರು ಲಡಾಖ್ ಮತ್ತಿತರ ಪೂರ್ವ ಪ್ರದೇಶಗಳನ್ನು ಸಂದರ್ಶಿಸಿದ್ದರು ಎಂಬ ಸಂಗತಿಯನ್ನು ಬರೆದಿದ್ದಾನೆ. ಲಡಾಖ್ ಪ್ರದೇಶದಲ್ಲಿ ಸಂಚರಿಸಿದ ಈ ರಶ್ಯನ್ ಸಂಚಾರಿ ಲೆಹ್‌ನಲ್ಲಿರುವ ಹೆಮಿಸ್ ಲಾಮಾ ಮಠದಲ್ಲಿ 84000 ಸುರುಳಿಪತ್ರಗಳನ್ನು ಆಕಸ್ಮಾತ್ತಾಗಿ ಕಂಡನು. ಕೈಬರಹದ ಈ ಸುರುಳಿಪತ್ರಗಳಲ್ಲಿ ವಿವಿಧ ಪ್ರವಾದಿಗಳ ಜೀವನಚರಿತ್ರೆಗಳನ್ನು ಬರೆಯಲಾಗಿದ್ದು ಅದರಲ್ಲಿ ಈಸಾ ಪ್ರವಾದಿಯ ಚರಿತ್ರೆಯೂ ಸೇರಿತ್ತು. ಈಸಾ, ಯೂಝುಫ್, ಯೂಝೂ. ಈಸ್ಸಾ, ಯೂಝಾ ಎಂಬುದು ಯೇಸುಕ್ರಿಸ್ತರ ಹೆಸರಿನ ವಿವಿಧ ರೂಪಗಳಾಗಿವೆ. ನೋಟೋವಿಚ್ ಈ ರೀತಿ ಬರೆಯುತ್ತಾನೆ:

ಈಸಾ ಇಸ್ರಾಯೇಲ್ ರಾಜ್ಯದಲ್ಲಿ ಜನಿಸಿದರು ....... ಅವರ ಮಾತಾಪಿತೃಗಳು ಬಡವರಾಗಿದ್ದರು......ಸತ್ಯದ ದಾರಿಯಲ್ಲಿ ಸ್ಥಿರವಾಗಿ ಅವರ ಕುಟುಂಬ ಮುಂದುವರಿದ ಕಾರಣ ಅವರನ್ನು ಬಹುಮಾನಿಸಲಿಕ್ಕಾಗಿ ದೇವರು ಅವರ ಪ್ರಥಮ ಪುತ್ರನನ್ನು ಅನುಗ್ರಹಿಸಿ ಅವರ ಮೂಲಕ ಅಪಕೀರ್ತಿಗೊಳಗಾದವರನ್ನು ಉದ್ಧಾರ ಮಾಡಲಿಕ್ಕೂ ರೋಗಿಗಳ ರೋಗಶಮನ ಮಾಡಲಿಕ್ಕಾಗಿಯೂ ಆಯ್ಕೆ ಮಾಡಿದನು ... ಈಸಾ 13ನೇ ವರ್ಷಕ್ಕೆ ತಲುಪಿದಾಗ (ಇದು ಇಸ್ರಾಯೇಲ್ಯರು ಸಾಧಾರಣವಾಗಿ ವಿವಾಹವಾಗುವ ಕಾಲ) ಅವರು ತನ್ನ ಪಿತೃಗೃಹವನ್ನು ರಹಸ್ಯವಾಗಿ ತೊರೆದು ಜೆರುಸಲೇಮಿನಿಂದ ಹೊರಟು ಸಿಂಧ್ ಪ್ರಾಂತ್ಯದ ಕಡೆಗೆ ಪ್ರಯಾಣಿಸಿದನು".

ಯೇಸುಕ್ರಿಸ್ತರು ಪಂಚನದಿಗಳು ಹರಿಯುವ ಪ್ರದೇಶದಲ್ಲಿ ನಿವಾಸಿಸಿ ಪ್ರವಾದಿಯ ರೀತಿ ಉಪದೇಶಿಸಿದರೆಂದು ಮೇಲೆ ಬರೆದ ಹಸ್ತಪ್ರತಿಗಳು ತಿಳಿಸುತ್ತವೆ. ಅವರು ಭಾರತದ ಹಲವಾರು ಪ್ರದೇಶಗಳನ್ನು ಸುತ್ತಿರುವುದಾಗಿಯೂ ವಾರಣಾಸಿಯಲ್ಲೂ ಜಗನ್ನಾಥಪುರಿಯಲ್ಲೂ ರಾಜಗೃಹದಲ್ಲೂ ಆರು ವರ್ಷಗಳನ್ನು ಕಳೆದುದಾಗಿಯೂ ತಿಳಿಯುತ್ತದೆ. ಸಾಮಾನ್ಯ ಜನರು ಅವರ ಪ್ರವಚನಗಳನ್ನು ಕೇಳಲು ಗುಂಪು ಗುಂಪಾಗಿ ಸೇರುತ್ತಿದ್ದರು. ಆದರೆ ಅವರು ಮಾನವ ಸಮತ್ವದ ಕುರಿತು ನೀಡುತ್ತಿದ್ದ ಉಪದೇಶದಿಂದ ಮೇಲ್ವರ್ಗದ ಜಾತಿಯವರಾದ ಬ್ರಾಹ್ಮಣರು ಕುಪಿತರಾಗಿ ಅವರನ್ನು ಮರ್ದಿಸಿದರು. ಹಿಮಾಲಯಕ್ಕೆ ಪಲಾಯನಗೈಯಲು ನಿರ್ಬಂಧಿತರಾದ ಯೇಸುಕ್ರಿಸ್ತರು ಅಲ್ಲಿಂದ ಪರ್ಶಿಯೂ ಮಾರ್ಗವಾಗಿ ತನ್ನ 29ನೇ ಪ್ರಾಯದಲ್ಲಿ ಇಸ್ರಾಯೇಲ್‌ಗೆ ಹಿಂತಿರುಗಿದರು. ಪಶವರ್ತಿಯಾಗುವಂತೆ ಮಾಡುವ ಭಾರತದ ಆಕರ್ಷಣೆಯು ಅವರು ಶಿಲುಬೆಯ ಸಂಭವದ ನಂತರ ಭಾರತಕ್ಕೆ ಹಿಂತಿರುಗುವಂತೆ ಮಾಡಿತು.

ಸತ್ತವರನ್ನು ನೆಲದಲ್ಲಿ ತೋಡಿದ ಸಮಾಧಿಯಲ್ಲಿ ದಫನು ಮಾಡುವುದು ಆ ಕಾಲದ ಪದ್ಧತಿಯಾಗಿದ್ದರೂ ಇದಕ್ಕೆ ವಿರುದ್ಧವಾಗಿ ಯೇಸುಕ್ರಿಸ್ತರನ್ನು ಒಂದು ಕೋಣೆಯಷ್ಟು ದೊಡ್ಡದಾಗಿರುವ ಶವಕುಟೀರದಲ್ಲಿ ಇರಿಸಿದುದು ಅವರಿಗೆ ಗಾಳಿ ದೊರೆಯುವಂತೆ ಮಾಡುವುದೂ ವೈದ್ಯರು ಅವರ ಗಾಯಗಳಿಗೆ ಶುಶ್ರೂಷೆ ಮಾಡುವುದೂ ಅವರ ಉದ್ದೇಶವಾಗಿತ್ತೆಂದು ಸ್ಪಷ್ಟವಾಗುತ್ತದೆ. ಈ

ಸಂದರ್ಭದಲ್ಲಿ ಟ್ಯೂರಿನಿನ ಶವವಸ್ತ್ರದ ಕುರಿತು ಜ್ಞಾಪಿಸುವುದುಚಿತವಾಗಿದೆ. ಆ ಶವವಸ್ತ್ರ ಒಬ್ಬ ಜೀವಂತ ಶ್ವಾಸೋಚ್ಛ್ವಾಸ ಮಾಡುವ ವ್ಯಕ್ತಿಯನ್ನು ಸುತ್ತುವರಿದಿತ್ತೆಂದು ನಿಸ್ಸಂದೇಹವಾಗಿ ಸ್ಪಷ್ಟವಾಗಿರುವುದರಿಂದ ಈ ಶವವಸ್ತ್ರದಲ್ಲಿ ಸುತ್ತಲ್ಪಟ್ಟ ವ್ಯಕ್ತಿ ಸತ್ತಿರಲಿಲ್ಲವೆಂಬುದು ವ್ಯಕ್ತವಾಗುತ್ತದೆ. ಮೇಲೆ ಹೇಳಿದ ಜರ್ಮನ್ ವಿದ್ವಾಂಸರ ವಾದ ಇದಾಗಿದೆ: ಯೇಸು ಕ್ರಿಸ್ತರ ಆಗಮನದ ಪ್ರಥಮ ಉದ್ದೇಶ ಇಸ್ರಾಯೇಲ್ ಜನತೆಗೆ ಸತ್ಯವನ್ನೂ ಕ್ರೈಸ್ತ ವಿಶ್ವಾಸಗಳನ್ನೂ ಭೋಧಿಸುವುದಾಗಿತ್ತು. ಅವರ ದ್ವಿತೀಯ ಉದ್ದೇಶ ಎಲ್ಲಾ ಕಾಣೆಯಾದ ಇಸ್ರಾಯೇಲ್ ಗೋತ್ರಗಳನ್ನು ಹುಡುಕಿ ಅವರಿಗೆ ಸುವಾರ್ತೆಯನ್ನು ತಲಪಿಸುವುದಾಗಿತ್ತು. ಕಾಶ್ಮೀರ ಮತ್ತು ಅಫಘಾನಿಸ್ಥಾನದ ಹಲವಾರು ಜನಸಮೂಹಗಳು ಯಥಾರ್ಥವಾಗಿ ಇಸ್ರಾಯೇಲ್ ಗೋತ್ರಗಳಿಗೆ ಸೇರಿದುವೆಂದು ಫೇಬರ್ ಕೈಸರ್ ಸಾಬೀತು ಪಡಿಸಲು ಯತ್ನಿಸಿದ್ದಾರೆ. ಕಾಶ್ಮೀರದಲ್ಲಿ ಯೂಸ್‌ಮಾರ್ಗ ಎಂಬಲ್ಲಿ ಇಸ್ರಾಯೇಲ್ ಸಂತತಿಗಳೆಂದು ತಮ್ಮನ್ನು ಕರೆದುಕೊಳ್ಳುತ್ತಿರುವ ಒಂದು ಜನಸಮೂಹವನ್ನು ಕಂಡುದಾಗಿ ಈ ವಿದ್ವಾಂಸರು ಬರೆದಿರುತ್ತಾರೆ. ಈ ಜನರು ಕ್ರಿಸ್ತನ ಸಮಾಧಿಯನ್ನು ಆದರಿಸುತ್ತಾರೆ. ಶ್ರೀನಗರದ ಉತ್ತರಕ್ಕಿರುವ ಒಂದು ಸಮಾಧಿಯನ್ನು ಅವರು ಆರಾಧಿಸುತ್ತಿದ್ದು ಅದು ಮೂಸಾ ಪ್ರವಾದಿಯ ಅವಶಿಷ್ಟಗಳನ್ನು ಒಳಗೊಂಡಿದೆಯೆಂದು ನಂಬುತ್ತಾರೆ.

ರೌಝಾಬಾಲ್‌ನಲ್ಲಿರುವ ಗೋರಿ ಅದರ ವಿನ್ಯಾಸದಲ್ಲಿ ಅದ್ವಿತೀಯವಾಗಿದೆ. ಅದು ಯೆಹೂದಿ ಶೈಲಿಯಲ್ಲಿ ರಚಿಸಲ್ಪಟ್ಟಿದ್ದು ಅದರ ಕಿಟಿಕಿ ಬಾಗಿಲುಗಳು ಇಸ್ರಾಯೇಲ್ ಮಾದರಿಗಳನ್ನು ಒಳಗೊಂಡಿದೆ. ಬೂದಿ ಬಣ್ಣದ ಈ ಸಾಮಾನ್ಯ ಗೋರಿ ಅಸಾಧಾರಣವಾಗಿ ದೊಡ್ಡ ಗಾತ್ರವನ್ನು ಹೊಂದಿದೆ. ಈ ಗೋರಿಯ ಕಾಲಿನಭಾಗ ಮಕ್ಕಾ ನಗರದ ಕಡೆಗಿರುವುದರಿಂದ ಇದು ಒಬ್ಬ ಮುಸ್ಲಿಮನ ಗೋರಿಯೆಂದು ಹೇಳಲು ಅಸಾಧ್ಯ. ಈ ಗೋರಿ ಹಲವಾರು ವಿದೇಶ ಪ್ರವಾಸಿಗಳನ್ನು ಆಕರ್ಷಿಸುತ್ತಿರುವುದರಲ್ಲಿ ಆಶ್ಚರ್ಯವೇನಿಲ್ಲ. ಪುರಾತನವಾದ ಈ ಗೋರಿಯ ಮೇಲೆ ಯೂಝ್ ಆಸಫ್ ಎಂಬ ಹೆಸರು ಲಿಖಿತವಾಗಿದೆ. ಯೂಝ್ ಎಂಬುದು ಯೂಝೂ ಎಂಬ ಅರೆಬಿಕ್ ಹೆಸರಿನ ಸಂಕ್ಷಿಪ್ತ ರೂಪವಾಗಿದೆ. ಆಸಫ್ ಎಂದರೆ ಹಿಬ್ರೂ ಭಾಷೆಯಲ್ಲಿ "ಒಟ್ಟಿಗೆ ಸೇರಿಸುವವ" ಎಂದಾಗಿದೆ. ಯೇಸುಕ್ರಿಸ್ತರು ಕಾಣೆಯಾದ ಹತ್ತು ಇಸ್ರಾಯೇಲ್ ಗೋತ್ರಗಳನ್ನು ಜೊತೆಗೂಡಿಸಲು ಹೋದ ಕಾರಣ ಯೇಸು ಕ್ರಿಸ್ತರಿಗೆ "ಜೊತೆಗೂಡಿಸುವ ಯೇಸು" ಎಂಬ ಹೆಸರು ಬಂದಿತು. ಇದೇ ಯೂಝ್ ಆಸಫ್ ಶಬ್ದದ ಅರ್ಥ.

ಕಾಶ್ಮೀರದ ಪ್ರಥಮ ಮುಸ್ಲಿಮ್ ಚರಿತ್ರೆಗಾರರಾದ ಮುಲ್ಲಾ ನಾದಿರಿ ತನ್ನ "ತಾರೀಖೇ ಕಾಶ್ಮೀರ್" ನಲ್ಲಿ ಈ ರೀತಿ ಬರೆದಿದ್ದಾರೆ: "ರಾಜಗೋಪದತ್ತನ ಕಾಲದಲ್ಲಿ (ಕ್ರಿ. ಶ. 49–109) ಹಝ್‌ರತ್ ಯೂಝ್ ಆಸಫ್ ಬೈತುಲ್ ಮುಖದ್ದಿಸ್ (ಪಾಲೆಸ್ತೀನ್) ನಿಂದ ಈ ಪರಿಶುದ್ಧ ಕಣಿವೆಗೆ ಬಂದು ತನ್ನ ಪ್ರವಾದಿತ್ವವನ್ನು ಘೋಷಿಸಿದರು. ಅವರು ರಾತ್ರೆಹಗಲು ದೇವರಪ್ರಾರ್ಥನೆ ಮಾಡುತ್ತಾ ಇದ್ದರು. ಅವರು ಸದ್ಗುಣಗಳಲ್ಲೂ ಭಕ್ತಿಯಲ್ಲೂ ಉನ್ನತ ಮಟ್ಟವನ್ನು ಗಳಿಸಿದ ನಂತರ ತಾನು ಕಾಶ್ಮೀರದ ಜನತೆಗೆ ಪ್ರವಾದಿಯಾಗಿ ಬಂದಿರುವೆನೆಂದು ಹೇಳಿದರು ...... ನಾನು ಹಿಂದುಗಳ ಒಂದು ಪುಸ್ತಕದಲ್ಲಿ ಈ ಪ್ರವಾದಿ ಯಥಾರ್ಥವಾಗಿ ಹಝ್ರತ್ ಈಸಾ (ಯೇಸು) ರೂಹುಲ್ಲಾಹ್ (ದೇವರ ಆತ್ಮ) ಆಗಿದ್ದರೆಂದು ಬರೆದುದಾಗಿ ನೋಡಿದ್ದೇನೆ. ಅವರ ಮೇಲೆ ದೇವರು ತನ್ನ ಇಷ್ಟಾಶೀರ್ವಾದಗಳನ್ನು ಸುರಿಸಲಿ. ಇವರೇ ಯೂಝ್ ಆಸಫ್ ಎಂಬ ಹೆಸರನ್ನು ಸ್ವೀಕರಿಸಿದ್ದರು." ಪವಿತ್ರ ಖುರ್‌ಆನಿನ ಪ್ರಕಾರ ಯೇಸುಕ್ರಿಸ್ತರು ಇಸ್ರಾಯೇಲ್ ಸಂತತಿಗೆ ಬಂದ ಪ್ರವಾದಿಯಾಗಿದ್ದರು.

ಯೇಸುಕ್ರಿಸ್ತರು ತನ್ನ ಮಾತೃಭೂಮಿಯನ್ನು ತೊರೆದಾಗ ತನ್ನ ವಿರೋಧಿಗಳು ತನ್ನನ್ನು ಹಿಂಬಾಲಿಸಿ ಸೆರೆಹಿಡಿದು ಶಿಕ್ಷಿಸದಂತೆ ಮಾಡಲು ತನ್ನ ಗುರುತನ್ನು ಅಡಗಿಸಲಿಕ್ಕಾಗಿ ಯೂಝ್ ಆಸಫ್ ಎಂಬ ಹೆಸರನ್ನು ಸ್ವೀಕರಿಸಿರಲೂ ಬಹುದು. ಬೈಬಲ್ ಸಹ ಈ ಊಹೆಯನ್ನು ಬಲಪಡಿಸುತ್ತದೆ. "ಯೇಸು ತನ್ನ ಜೀವನವು ಅಪಾಯದಲ್ಲಿದೆಯೆಂದರಿತು ಬೆಟ್ಟಗಳಲ್ಲಿಯೂ ಅಜ್ಞಾತ ಸ್ಥಳಗಳಲ್ಲೂ ಆಶ್ರಯ ಪಡೆಯುತ್ತಿದ್ದನು" ಎಂದು ಬೈಬಲ್ ಹೇಳುತ್ತದೆ. ಪವಿತ್ರ ಖುರ್‌ಆನ್ "ನಾವು ಮರ್ಯಮಳ ಮಗನನ್ನೂ ಆತನ ತಾಯಿಯನ್ನೂ ಒಂದು ದೃಷ್ಟಾಂತವನ್ನಾಗಿ ಮಾಡಿ ಅವರಿಬ್ಬರಿಗೂ ಉನ್ನತವಾದ ಮೈದಾನಗಳಲ್ಲೂ ಒರತೆಗಳ ಆಶ್ರಯವಿರುವಲ್ಲಿಯೂ ಅಭಯ ನೀಡಿದೆವು" ಎಂದು ಹೇಳು

ತ್ತದೆ. ಮಸೀಹ್ ಎಂಬ ಪರ್ಶಿಯನ್ ಶಬ್ದದ ಅರ್ಥ "ದೊಡ್ಡ ಸಂಚಾರಿ" ಎಂದೂ ಆಗಿರುತ್ತದೆ. ಮ್ಯಾಕ್ಸ್ ಮುಲ್ಲರ್ ತನ್ನ *Sacred Books of East* (Vol XI) ನಲ್ಲಿ ಇಂಗ್ಲಿಷಿನ "t" (ಟಿ) ಅರಬಿ ಭಾಷೆಯ "s" (ಎಸ್)ಗೆ ಸಮಾನವೆಂದು ಹೇಳಿರುತ್ತಾರೆ. ಆದುದರಿಂದ ಬೌದ್ಧ ಗ್ರಂಥಗಳಲ್ಲಿರುವ ಮೆತ್ತಯ್ಯ (ಮೈತ್ರೇಯ) ಎಂಬ ಶಬ್ದ ಮೆಸ್ಸಾಯ ಪದಕ್ಕೆ ಸಮಾನವಾಗಿದ್ದು ಅದೇ ವ್ಯಕ್ತಿಯನ್ನು ಸೂಚಿಸಿರಬಹುದು.

ಹಳೆಯ ಒಡಂಬಡಿಕೆಯಲ್ಲಿ ಸೂಚಿಸಲಾದ ಐದು ಸ್ಥಳಗಳಲ್ಲಿ ವಾಗ್ದಾನ ನೀಡಲ್ಪಟ್ಟ ಭೂಮಿಯಾದ ಬೆತ್‌ಪುರ್ ಎಂಬುದರ ಅರ್ಥ "ತೆರೆಯುವ ಸ್ಥಳ" ಎಂದಾಗಿದೆ. ಝೀಲಮ್ ನದಿಯನ್ನು ಪರ್ಶಿಯನ್ ಭಾಷೆಯಲ್ಲಿ "ಬೆತ್" ಎಂದೂ "ವೆತ್" ಎಂದು ಕಾಶ್ಮೀರದಲ್ಲಿಯೂ ಕರೆಯುತ್ತಿರುವ ಕಾರಣ ಬೆತ್‌ಪುರ್ ಎಂಬುದು ಝೀಲಮ್ ನದಿಯ ದಂಡೆಯಲ್ಲಿರುವ ಯಾವುದಾದರೊಂದು ಸ್ಥಳವಾಗಿರಲು ಸಾಧ್ಯ. ಕಲ್ಹಣನ "ರಾಜ ತರಂಗಿಣಿ" ಎಂಬ ಗ್ರಂಥದ ಪ್ರಕಾರ ಬಂಡೀಪುರ ಅಥವಾ ಬೆತ್‌ಪುರ ತೆರೆಯುವ ಸ್ಥಳವಾಗಿದೆ. ಈ ಸ್ಥಳದಿಂದಲೇ ಕಾಶ್ಮೀರದ ಕಣಿವೆ ಪ್ರಾರಂಭವಾಗುತ್ತದೆ. ಇಲ್ಲಿಯೇ ಒಂದು ಬಿರುಕಿನ ಮೂಲಕ ಝೀಲಮ್ ನದಿ ವುಲರ್ ಸರೋವರಕ್ಕೆ ಹರಿಯುತ್ತದೆ. ಕಾಶ್ಮೀರದ ಬೆತ್‌ಪುರವೇ ವಾಗ್ದಾನ ನೀಡಲ್ಪಟ್ಟ ಭೂಮಿಯಾಗಿದ್ದು ಇಲ್ಲೇ ಯೇಸು ಕ್ರಿಸ್ತರು ಇಸ್ರಾಯೇಲ್ ಸಂತತಿಗಳಿಗೆ ಉಪದೇಶ ನೀಡಿರಬಹುದು.

ಸಂಸ್ಕೃತದಲ್ಲಿ ಮಹರ್ಷಿ ವೇದವ್ಯಾಸ ಋಷಿಯಿಂದ ಸುಮಾರು ಕ್ರಿ. ಶ. 115 ರಲ್ಲಿ ಭವಿಷ್ಯ ಮಹಾಪುರಾಣದಲ್ಲಿ ರಾಜ ಶಾಲಿವಾಹನನು ಕ್ರಿ. ಶ. 78ರಲ್ಲಿ ಹಿಮಾಲಯ ಪರ್ವತಗಳಲ್ಲಿ ಸಂಚರಿಸಿದಾಗ ಬಿಳಿಬಟ್ಟೆ ಧರಿಸಿದ, ಬೆಳ್ಳಗಿರುವ ವರ್ಣದ, ಗಾಂಭೀರ್ಯವುಳ್ಳ ಒಬ್ಬ ಸಂತ ಸತ್ಪುರುಷನನ್ನು ಕಂಡನು. ತಾವು ಯಾರೆಂದು ಶಾಲಿವಾಹನ ರಾಜನು ಆ ಸತ್ಪುರುಷನನ್ನು ಕೇಳಿದಾಗ "ನಾನು ದೇವಪುತ್ರನು; ಕನ್ಯೆಯಿಂದ ಜನಿಸಿದೆನು. ನಾನು ಮ್ಲೇಚ್ಛ ಧರ್ಮದ ಪ್ರಚಾರಕನೂ ಸತ್ಯ ತತ್ವಾವಲಂಬಿಯೂ ಆಗಿದ್ದೇನೆ" ಎಂದನು. ಆತನ ಧರ್ಮದ ಕುರಿತು ರಾಜನು ವಿವರಣೆ ಕೇಳಿದಾಗ ಆ ವ್ಯಕ್ತಿ ಈ ರೀತಿ ಹೇಳಿದನು: "ರಾಜಾ, ಸತ್ಯವು ಮರೆಯಾಗಿ ಪರಂಪರಾಗತ ತತ್ವಗಳು ನಾಶವಾದಾಗ ನಾನು ಅಲ್ಲಿ ಆಗಮಿಸಿದೆನು. ನನ್ನ ಕಾರ್ಯಗಳಿಂದ ಅಪರಾಧಿಗಳೂ ದುಷ್ಟರೂ ಕಷ್ಟವನ್ನನುಭವಿಸಿದರು. ನಾನೂ ಅವರ ಕೈಯಲ್ಲಿ ಕಷ್ಟವನ್ನನುಭವಿಸಿದೆ". ಆ ವಿಷಯವಾಗಿ ಇನ್ನಷ್ಟು ವಿಶದೀಕರಿಸಲು ಕೇಳಿದಾಗ ಆ ಸಂತರು ಈ ರೀತಿ ಹೇಳಿದರು: "ಅದು ಪ್ರೇಮ, ಸತ್ಯ ಮತ್ತು ಹೃದಯದ ಪರಿಶುದ್ಧತೆಯಾಗಿದೆ. ನನ್ನನ್ನು ಈಸಾ ಮಸೀಹ್ (ಯೇಸುಕ್ರಿಸ್ತ) ಎಂದು ಕರೆಯುತ್ತಾರೆ". ರಾಜನು ಅವರನ್ನು ಆದರಪೂರ್ವಕವಾಗಿ ಬೀಳ್ಕೊಟ್ಟ ನಂತರ ಹಿಂತಿರುಗಿದನು.

ಪಂಡಿತ್ ಜವಾಹರ್‌ಲಾಲ್ ನೆಹರೂ ತನ್ನ *Glimpses of World History* ಎಂಬ ಗ್ರಂಥದಲ್ಲಿ ಈ ರೀತಿ ಹೇಳುತ್ತಾರೆ: ಮಧ್ಯ ಏಶಿಯದ ಎಲ್ಲಾ ಸ್ಥಳಗಳಲ್ಲೂ ಕಾಶ್ಮೀರ, ಲಡಾಖ್ ಮತ್ತು ಟಿಬೇಟಿನಲ್ಲೂ ಅಲ್ಲಿಂದ ಉತ್ತರಕ್ಕೂ ಒಂದು ಬಲಯುತವಾದ ವಿಶ್ವಾಸ ವ್ಯಾಪಿಸಿಕೊಂಡಿದೆ. ಜೀಸಸ್ ಅಥವಾ ಈಸಾ ಆ ಪ್ರದೇಶಗಳಲ್ಲಿ ಸಂಚರಿಸಿದ್ದರೆಂಬುದೇ ಈ ವಿಶ್ವಾಸವಾಗಿದೆ.......ಅವರು ಈ ರೀತಿ ಸಂಚರಿಸಿದ್ದರೆಂಬುದು ಅಸಂಭಾವ್ಯವಲ್ಲ." ಈ ಸಂಗತಿಗಳೇನೇ ಇದ್ದರೂ ಯೇಸು ಕ್ರಿಸ್ತರು ಕಾಶ್ಮೀರಕ್ಕೆ ಬಂದಿದ್ದರೇ ಎಂಬ ಸಂಗತಿಯ ಕುರಿತು ಕೋಪೋದ್ರೇಕದಿಂದ ಕೂಡಿದ ವಾದ ವಿವಾದಗಳು ಈ ವಿಷಯದ ಕುರಿತು ಹೆಚ್ಚಿನ ಸಂಶೋಧನೆಗಳು ನಡೆಯುವ ವರೆಗೆ ಮುಂದುವರಿಯುತ್ತಲೇ ಇರುವುವು. ಈ ಹೊಸ ಸಿದ್ಧಾಂತ ಸತ್ಯವೋ ವಿಶ್ವಾಸಾರ್ಹವೋ ಎಂಬುದನ್ನು ಸ್ಪಷ್ಟಗೊಳಿಸಲು ರೌಝಾಬಾಲ್ ಸಮಾಧಿಯಲ್ಲಿರುವ ಯೂಝ್ ಆಸಫರ ಅವಶಿಷ್ಟಗಳನ್ನು ಮೇಲೆತ್ತಿ ವೈಜ್ಞಾನಿಕವಾಗಿ ಪರೀಕ್ಷಿಸುವುದು ಅಗತ್ಯವಾಗಿದೆ. ವಿದ್ವಾಂಸರು ನಡೆಸಿದ ಸಂಶೋಧನೆಗಳ ಫಲಿತಾಂಶಗಳು ಪರಂಪರಾಗತ ವಿಶ್ವಾಸಗಳನ್ನು ಹೊಂದಿದ ಕ್ರೈಸ್ತ ಧರ್ಮಿಯರಿಗೆ ಎಷ್ಟು ಅಸಮಾಧಾನಕರವಾಗಿದ್ದರೂ ಅದು ಅವರ ರಕ್ಷಕನ ಕುರಿತು ನುಡಿಯಲಾಗುವ ಆಧಾರ ರಹಿತ ಸುಳ್ಳೆಂದು ಹೇಳಲು ಸಾಧ್ಯವಿಲ್ಲ. ಈ ಸಂಗತಿಯ ಕುರಿತು ಸೂಕ್ಷ್ಮವಾಗಿಯೂ ಜಾಗರೂಕತೆಯಿಂದಲೂ ಸಂಶೋಧಿಸಬೇಕಾಗಿದೆ. ಸತ್ಯವೂ ಭಕ್ತಿಯೂ ಕ್ರೈಸ್ತಧರ್ಮದ ಸಾರವಾಗಿರುವಾಗ ಅವರಿಗೆ ಇದು ಅಸಮಾಧಾನಕರವಾಗಲಿಕ್ಕಿಲ್ಲ ಅಲ್ಲವೇ? ಆದರೆ ಇಲ್ಲಿರುವ ಪ್ರಧಾನವಾದ ಪ್ರಶ್ನೆ ಇದಾಗಿದೆ: ಯೇಸುಕ್ರಿಸ್ತರದೆಂದು ಹೇಳಲ್ಪಡುವ ಕಾಶ್ಮೀರದಲ್ಲಿರುವ ಗೋರಿಯನ್ನು ವೈಜ್ಞಾನಿಕ ಸಂಶೋಧನೆಗಳಿಗಾಗಿ ತೆರೆಯಲು ಅನುಮತಿ ಸಿಗುವುದೇ? ●

**(ಡೆಕ್ಕಾನ್ ಹೆರಾಲ್ಡ್ 7-7-'85, ಬೆಂಗಳೂರು.)**

# ಇಮಾಂ ಮಹ್‌ದಿಯ ಸೂಚಕಕಾರ್ಯ: ಸೂರ್ಯ-ಚಂದ್ರ ಗ್ರಹಣಗಳು *

★ ಪ್ರೊ. ಹಾಫಿಝ್ ಸಾಲಿಹ್ ಮುಹಮ್ಮದ್ ಅಲಾವುದ್ದೀನ್ MSc., Ph. D. ಹೈದರಾಬಾದ್
(ಕನ್ನಡಕ್ಕೆ ಎಂ. ಪಿ. ಇಬ್ರಾಹಿಂ)

ಹಝ್ರತ್ ಮುಹಮ್ಮದ್ ಪೈಗಂಬರರು (ಸ), ಕಾಲಾಂತರದಲ್ಲಿ ಸಂಭವಿಸಲಿರುವ ಧರ್ಮಗ್ಲಾನಿಯ ಕುರಿತು ಶಕ್ತಿಯುತವಾಗಿ ಭವಿಷ್ಯ ನುಡಿದಿರುವರು. ಮಾನವ ಸಮುದಾಯವು ಅತ್ಯಂತ ಆಪತ್ಕರವಾದ ರೀತಿಯಲ್ಲಿ ಧಾರ್ಮಿಕ ಅಂಧಕಾರದಲ್ಲಿ ಮುಳುಗುವುದೆಂದೂ ವಿಶೇಷತಃ ತನ್ನ ಸಮುದಾಯವಾದ ಮುಸ್ಲಿಂ ಜನಾಂಗವು ಅತ್ಯಂತ ಶೋಚನೀಯವಾಗಿ ಅಧಃಪತನ ಹೊಂದಲಿರುವುದೆಂದೂ ಆ ಪ್ರವಾದಿಯುವರು ಭವಿಷ್ಯ ನುಡಿದಿದ್ದಾರೆ. ಆಗ ಇಸ್ಲಾಮಿನಲ್ಲಿ ಅದರ ಹೆಸರೂ ಖುರ್‌ಆನಿನಲ್ಲಿ ಅದರ ಲಿಪಿಗಳೂ ಮಾತ್ರವೇ ಬಾಕಿಯುಳಿವುವು; ಯಥಾರ್ಥವಾದ ಸತ್ಯವಿಶ್ವಾಸವು ಭೂಮಂಡಲದಿಂದ ಅಂತರ್ಧಾನವಾಗುವುದು; ನಾಸ್ತಿಕವಾದವು ಜಯಭೇರಿಗಳಿಸುವುದು ಹಾಗೂ ಇಸ್ಲಾಂ ಧರ್ಮವು ನಾನಾ ಕಡೆಗಳಿಂದಲೂ ಆಕ್ರಮಿಸಲ್ಪಟ್ಟು ಅತಿಭಯಂಕರ ಆಪತ್ತಿನಲ್ಲಿ ಸಿಲುಕಲಿರುವುದೆಂದು ಆ ಮಹಾತ್ಮರು ಪ್ರವಾದನಗೈದಿರುವರು. ಆ ಕಾಲದಲ್ಲಿ ಅಲ್ಲಾಹನು ಒಬ್ಬ ಉದ್ಧಾರಕನನ್ನು ನಿಯೋಜಿಸಿ ಇಸ್ಲಾಂ ಧರ್ಮದ ಪೂರ್ವ ಪ್ರತಾಪವನ್ನು ಪುನರುತ್ಥಾನಗೊಳಿಸುವನೆಂದೂ ಕೂಡ ಹಝ್ರತ್ ಪೈಗಂಬರರು ಭವಿಷ್ಯ ನುಡಿದಿದ್ದಾರೆ. ಈ ವಾಗ್ದತ್ತ ಉದ್ಧಾರಕನ ಸತ್ಯತೆಗೆ ನಿದರ್ಶನವಾಗಿ ಪೈಗಂಬರರು ಹಲವಾರು ಸೂಚಕ ಕಾರ್ಯಗಳನ್ನು ತಿಳಿಸಿಕೊಟ್ಟಿರುತ್ತಾರೆ. "ಇಮಾಂ ಮಹ್‌ದಿ" ಮತ್ತು "ಮಸೀಹ್" ಎಂಬ ಗುಣನಾಮದೊಂದಿಗೆ ಆವಿರ್ಭವಿಸುವರೆಂದು ವಾಗ್ದಾನ ಮಾಡಲ್ಪಟ್ಟ ಆ ಮಹಾಪುರುಷನ ಆಗಮನ ಕಾಲದಲ್ಲಿ ನವನವೀನ ವಾರ್ತಾಪ್ರಸಾರ ಮಾಧ್ಯಮಗಳು ಕಂಡುಹಿಡಿಯಲ್ಪಡುವುವೆಂದೂ ನವೀನ ಸಾರಿಗೆ ಸೌಲಭ್ಯಗಳ ಆವಿಷ್ಕರಣದಿಂದಾಗಿ ಒಂಟೆ ಸವಾರಿಯು ವರ್ಜಿಸಲ್ಪಡುವುದೆಂದೂ ಅನೇಕ ವೈಜ್ಞಾನಿಕ ಸಂಶೋಧನೆಗಳು ಆ ಕಾಲದಲ್ಲಿ ಉಂಟಾಗಲಿವೆಯೆಂದೂ ಪ್ರವಾದನಗಳಲ್ಲಿ ವಿವರಿಸಲಾಗಿದೆ. ಆ ಕಾಲದಲ್ಲಿ ಕ್ರೈಸ್ತ ಧರ್ಮವು ಅತ್ಯಧಿಕ ಪ್ರಾಬಲ್ಯದಿಂದ ಜಗತ್ತಿನಾದ್ಯಂತ ವ್ಯಾಪಿಸುವುದೆಂದೂ ಸಹ ಹಝ್ರತ್ ಪೈಗಂಬರರು ಭವಿಷ್ಯ ನುಡಿದಿದ್ದಾರೆ. ವಾಗ್ದಾನ ಮಾಡಲಾದ ಆ ಉದ್ಧಾರಕನ ಕಾಲದಲ್ಲಿ ಸಂಭವಿಸಲಿರುವುದೆಂದು ಹಝ್ರತ್ ಮುಹಮ್ಮದ್ ಪೈಗಂಬರರು ಭವಿಷ್ಯ ನುಡಿದಿರುವ ಅತಿ ಮಹತ್ತಾದ ಒಂದು ಸೂಚಕ ಕಾರ್ಯದ ಕುರಿತು ನಾನು ಈ ವೇಳೆಯಲ್ಲಿ ನಿಮ್ಮ ಮುಂದೆ ಮಾತನಾಡ ಬಯಸುತ್ತೇನೆ.

ಹಝ್ರತ್ ಪೈಗಂಬರರು ಈ ರೀತಿ ಹೇಳಿದರು: "ನಮ್ಮ ಮಹ್‌ದಿಗೆ ಎರಡು ಸೂಚಕ ಕಾರ್ಯಗಳು ನಿಶ್ಚಯಿಸಲ್ಪಟ್ಟಿವೆ. ಆಕಾಶ ಭೂಮಿಗಳು ಉಂಟಾದ ಮೊದಲ್ಗೊಂಡು ಇಂತಹ ದೃಷ್ಟಾಂತಗಳು ಯಾವ ಉದ್ಧಾರಕನ ಪರವಾಗಿಯೂ ತೋರಿಸಲ್ಪಟ್ಟಿರಲಾರವು. ಅದೇನೆಂದರೆ, ಒಂದು ರಮಝಾನ್ ತಿಂಗಳಲ್ಲಿ ಚಂದ್ರಗ್ರಹಣವು ಸಂಭವಿಸುವ ರಾತ್ರಿಗಳ ಮೊದಲನೆಯ ರಾತ್ರಿಯಲ್ಲಿ ಚಂದ್ರಗ್ರಹಣವೂ ಸೂರ್ಯನಿಗೆ ಗ್ರಹಣ ಹಿಡಿಯುವ ದಿವಸಗಳ ಪೈಕಿ ಮಧ್ಯದ ದಿವಸದಲ್ಲಿ

* ಪಯಂಗಾಡಿಯಲ್ಲಿ ಕಳೆದ ಎಪ್ರಿಲ್ 12, 13 ತಾರೀಕುಗಳಂದು ಜರಗಿದ ಕೇರಳ ರಾಜ್ಯ ಅಹ್ಮದಿಯಾ ಮುಸ್ಲಿಂ ಸಮ್ಮೇಳನದಲ್ಲಿ ಮಾಡಿದ ಇಂಗ್ಲಿಷ್ ಭಾಷಣ.

ಸೂರ್ಯಗ್ರಹಣವೂ ಉಂಟಾಗುವುವು". (ದಾರು ಖುತ್‌ನಿ). ಪೈಗಂಬರರ ಈ ವಚನವನ್ನು ಅನೇಕ ಹದೀಸ್ ಪಂಡಿತರು ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿದಾ ರೆ.

ಸೂರ್ಯ ಗ್ರಹಣಗಳೂ ಚಂದ್ರ ಗ್ರಹಣಗಳೂ ಪ್ರಕೃತಿಯ ನಿಯಮಾನುಸಾರ ಸಂಭವಿಸುತ್ತವೆ. ಭೂಮಿಯ ನೆರಳು ಚಂದ್ರನ ಮೇಲೆ ಬೀಳುವಾಗ ಚಂದ್ರಗ್ರಹಣವುಂಟಾಗುತ್ತದೆ. ಅದೇರೀತಿ ಸೂರ್ಯ ಪ್ರಕಾಶವು ಭೂಮಿಗೆ ಬೀಳುವುದನ್ನು ಚಂದ್ರನು ಮಧ್ಯ ಬಂದು ತಡೆಯುವಾಗ ಸೂರ್ಯಗ್ರಹಣವುಂಟಾಗುವುದು. ಚಂದ್ರಗ್ರಹಣವು ಪೂರ್ಣ ಚಂದ್ರನಿರುವ ದಿನಗಳಾದ ಚಾಂದ್ರಮಾನ ತಿಂಗಳ 13, 14, 15 ಎಂಬೀ ದಿನಾಂಕಗಳ ರಾತ್ರಿಗಳಲ್ಲಿ ಸಂಭವಿಸುತ್ತದೆ. ಹಾಗೆಯೇ ಚಂದ್ರನು ತೀರಾ ಗೋಚರಿಸದ ಚಾಂದ್ರಮಾನ 27, 28, 29 ಎಂಬೀ ದಿನಗಳಲ್ಲಿ ಸೂರ್ಯಗ್ರಹಣವೂ ಉಂಟಾಗುತ್ತದೆ. ಚಾಂದ್ರಮಾನ ತಿಂಗಳ (Lunar Month) 13, 14, 15 ಎಂಬೀ ರಾತ್ರಿಗಳಲ್ಲೂ 27, 28, 29 ಎಂಬೀ ದಿನಗಳ ಹಗಲಿನಲ್ಲೂ ಯಥಾಕ್ರಮ ಚಂದ್ರಗ್ರಹಣವೂ ಸೂರ್ಯಗ್ರಹಣವೂ ಪ್ರಕೃತಿಯಲ್ಲಿ ನಿಶ್ಚಯಿಸಲ್ಪಟ್ಟಿವೆ. ಹಝ್ರತ್ ಮುಹಮ್ಮದ್ ಪೈಗಂಬರರ ಪ್ರವಾದನದಲ್ಲಿ ಮೊದಲ ರಾತ್ರಿಯಲ್ಲಿ ಚಂದ್ರಗ್ರಹಣವುಂಟಾಗಲಿದೆಯೆಂದು ಹೇಳಿದುದರ ತಾತ್ಪರ್ಯವು, ಪ್ರಕೃತಿ ನಿಯಮದಂತೆ ಚಂದ್ರಗ್ರಹಣಕ್ಕೆ ನಿಶ್ಚಯಿಸಲಾದ 13, 14, 15 ಎಂಬೀ ದಿನಗಳ ಮೊದಲನೆಯ ರಾತ್ರಿಯಲ್ಲಿ (13ನೇ ರಾತ್ರಿ) ಚಂದ್ರಗ್ರಹಣವುಂಟಾಗುವುದು ಎಂದಾಗಿದೆ. ಅಂತೆಯೇ ಸೂರ್ಯನಿಗೆ ಅದರ ಮಧ್ಯ ದಿನದಲ್ಲಿ ಗ್ರಹಣ ಹಿಡಿಯುವುದೆಂದು ಹೇಳಿದುದರ ಅರ್ಥವೂ ಸೂರ್ಯಗ್ರಹಣಕ್ಕೆ ನಿಶ್ಚಯಿಸಲ್ಪಟ್ಟ ಚಾಂದ್ರಮಾನ ಮೂಸದ 27, 28, 29 ಎಂಬೀ ದಿನಾಂಕಗಳ ಪೈಕಿ ಮಧ್ಯ ದಿನವಾದ 28ನೇ ದಿನದ ಹಗಲಿನಲ್ಲಿ ಸೂರ್ಯಗ್ರಹಣವುಂಟಾಗುವುದು ಎಂದಾಗಿದೆ.

ಮುಹಮ್ಮದ್ ಪೈಗಂಬರರು ಭವಿಷ್ಯನುಡಿದಿರುವ ವಾಗ್ದತ್ತ ಪುರುಷ ತಾನೆಂದು ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ) ಅವರು 1891 ರಲ್ಲಿ ಘೋಷಿಸಿದರು. ಅಲ್ಲಾಹು ತನ್ನನ್ನು ವಾಗ್ದತ್ತ ಮಹ್‌ದಿ ಮತ್ತು ಮಸೀಹ್ ಆಗಿ ನಿಯೋಗಿಸಿರುವನೆಂದು ಹೇಳಿದ ಅವರು ತನ್ನ ವಾದದ ಸತ್ಯತೆಗೆ ಸಾಕ್ಷ್ಯವಾಗಿ ಅನೇಕ ದೃಷ್ಟಾಂತಗಳನ್ನೂ ಪ್ರವಾದನಗಳನ್ನೂ ಸೂಚಕ ಕಾರ್ಯಗಳನ್ನೂ ಲೋಕದ ಮುಂದೆ ಮಂಡಿಸಿದರು. ಅವುಗಳಲ್ಲಿ ಹೆಚ್ಚಿನವುಗಳ ಪೂರ್ತೀಕರಣವು ಆಗಲೇ ಉಂಟಾಯಿತು. ಆದರೆ ಆ ಕಾಲದ ಬಹುತೇಕ ಮತಪಂಡಿತರು ಆ ಮಹಾತ್ಮರ ವಾದವನ್ನು ಸ್ವೀಕರಿಸಲಿಲ್ಲ. ಅದಕ್ಕೆ ಆ ಮೌಲವಿಗಳು ತೋರಿಸಿದ ಪ್ರಧಾನವಾದೊಂದು ಕಾರಣವು, ಮುಹಮ್ಮದ್ ಪೈಗಂಬರರು ಇಮಾಂ ಮಹ್‌ದಿಯ ಕಾಲದಲ್ಲಿ ಒಂದೇ ರಮಝಾನ್ ತಿಂಗಳಲ್ಲಿ ಸಂಭವಿಸಲಿದೆಯೆಂದು ಪ್ರವಾದನಗೈದ ಸೂರ್ಯ-ಚಂದ್ರ ಗ್ರಹಣಗಳು ಉಂಟಾಗಲಿಲ್ಲ ಎಂಬುದಾಗಿತ್ತು. ಆದರೆ, ಆ ಮಹಾಸೂಚಕಕಾರ್ಯವನ್ನು 1894 ರಲ್ಲಿ (ಹಿಜರಿ ಶಕ 1311 ರಲ್ಲಿ) ಲೋಕವು ಕಂಡಿತು. ಸೂರ್ಯ ಚಂದ್ರ ಗ್ರಹಣಗಳು 1894ನೇ ಇಸವಿಯ ರಮಝಾನ್ ತಿಂಗಳಲ್ಲಿ ಭವಿಷ್ಯವಾಣಿಯಲ್ಲಿ ಹೇಳಲಾದ ದಿನ ರಾತ್ರಿಗಳಲ್ಲೇ ಜನರಿಗೆ ಗೋಚರಿಸಿದವು. ಇಂಗ್ಲಿಷ್ ಕ್ಯಾಲೆಂಡರಿನ ಪ್ರಕಾರ ಚಂದ್ರಗ್ರಹಣವು 1894ನೇ ಇಸವಿ ಮಾರ್ಚ್ ತಿಂಗಳ 21ನೇ ದಿನಾಂಕದಂದು ರಾತ್ರಿಯಲ್ಲೂ ಸೂರ್ಯಗ್ರಹಣವು ಎಪ್ರಿಲ್ ತಿಂಗಳ 6 ನೇ ದಿನಾಂಕದಂದು ಮಧ್ಯಾಹ್ನವೂ ದರ್ಶನವಾದುವು. ಈ ಎರಡು ಗ್ರಹಣಗಳನ್ನೂ ಖಾದಿಯಾನ್‌ನಲ್ಲಿ ಜನರು ಅತ್ಯಂತ ಕುತೂಹಲದಿಂದ ವೀಕ್ಷಿಸಿದರು. ಹಝ್ರತ್ ಮುಹಮ್ಮದ್ ಪೈಗಂಬರರು ಭವಿಷ್ಯ ನುಡಿದಿರುವ ಸೂಚಕ ಕಾರ್ಯವು ತನ್ನ ಸತ್ಯತೆಗೆ ಸಾಕ್ಷಿಯಾಗಿ ಪೂರ್ತಿಗೊಂಡಿತು ಎಂಬುದಾಗಿ ವಾಗ್ದತ್ತ ಮಸೀಹ್ (ಅ) ಘೋಷಿಸಿದರು. ಹಝ್ರತ್ ಅಹ್ಮದ್ (ಅ) ಅವರು "ನೂರುಲ್ ಹಕ್" (ಸತ್ಯದ ಪ್ರಕಾಶ) ಎಂಬ ಹೆಸರಿನಲ್ಲಿ ಒಂದು ಗ್ರಂಥವನ್ನು ಬರೆದು ಪೈಗಂಬರರ ಸುಪ್ರಸಿದ್ಧವಾದ ಆ ಭವಿಷ್ಯವಾಣಿಯು ಈಡೇರಿರುವುದಾಗಿ ವಿವರಿಸಿದರು. ಅದರಲ್ಲಿ ಆ ಮಹಾತ್ಮರು ಈ ರೀತಿ ಬರೆದರು:

"ಈ ರಮಝಾನ್ ತಿಂಗಳ ನಂತರ ನಾವು ಆಚರಿಸುವ ಈದ್ ಹಬ್ಬವು ನಮಗೆ ಇಮ್ಮಡಿ ಹಬ್ಬವಾಗಿದೆ.

ಯಾಕೆಂದರೆ, ಅಲ್ಲಾಹನು ನನ್ನ ಸತ್ಯತೆಗೆ ಸಾಕ್ಷ್ಯವನ್ನು ಈ ರಮಝಾನ್ ತಿಂಗಳಲ್ಲಿ ತೋರಿಸಿಕೊಟ್ಟಿರುತ್ತಾನೆ."

ಇದಕ್ಕೆ ಮೊದಲು ಒಂದೇ ರಮಝಾನ್ ತಿಂಗಳ, ಪೈಗಂಬರರು ಸೂಚಿಸಿರುವ ಅದೇ ರಾತ್ರಿ ಮತ್ತು ಹಗಲು ಗಳಲ್ಲಿ ಯಥಾವತ್ ಚಂದ್ರಗ್ರಹಣವೂ ಸೂರ್ಯಗ್ರಹ ಣವೂ ಒಂದು ಸೂಚಕಕಾರ್ಯವೆಂಬಂತೆ ಸಂಭವಿಸಿರು ವುದಾಗಿ ರುಜುವಾತುಪಡಿಸಲು ಯಾರಿಗಾದರೂ ಸಾಧ್ಯ ವಾದಲ್ಲಿ ಅಂಥವರಿಗೆ ತಾನು ಒಂದು ಸಾವಿರ ರೂಪಾಯಿ ಗಳ ಬಹುಮಾನವನ್ನು ನೀಡುವುದಾಗಿ ಆ ಮಹಾತ್ಮರು ತನ್ನ ಎದುರಾಳಿಗಳಿಗೆ ಆಹ್ವಾನವೊಡ್ಡಿದರು.

ಈ ಗ್ರಹಣಗಳು ಬರಲಿರುವ ಇಮಾಂ ಮಹ್‌ದಿ ಯ ಕುರಿತು ಸ್ಪಷ್ಟವಾದ ಸೂಚಕಕಾರ್ಯಗಳೆಂದು ಪೈಗಂಬರ್ (ಸ) ಭವಿಷ್ಯ ನುಡಿದಿರುವರಷ್ಟೆ. ಈ ಭವಿಷ್ಯ ನುಡಿಯ ಪೂರ್ತೀಕರಣವೇ 1894ರ (ಹಿಜರಿ 1311) ರಮಝಾನ್ ತಿಂಗಳಲ್ಲಿ ದೃಶ್ಯವಾದ ಗ್ರಹಣಗಳು. ವಾಗ್ದತ್ತ ಮಸೀಹ್ ತನ್ನ ಗ್ರಂಥದಲ್ಲಿ 1894ರ ಈ ಗ್ರಹಣಗಳ ಕುರಿತು ಗಮನಾರ್ಹವಾದ ಇನ್ನೂ ಕೆಲವು ಸಂಗತಿಗಳನ್ನು ವಿವರಿಸಿದ್ದರು. ಭಾರತದಲ್ಲಿ ಚಂದ್ರ ಗ್ರಹಣವು ರಾತ್ರಿಯ ಮೊದಲ ಹಂತದಲ್ಲೇ ಅಂದರೆ ಸೂರ್ಯಾಸ್ತಮಾನದ ವೇಳೆಯಲ್ಲೇ ಗೋಚರವಾದರೆ ಸೂರ್ಯಗ್ರಹಣವು ಹಗಲಿನ ಮಧ್ಯವೇಳೆಯಲ್ಲಿ ದೃಶ್ಯ ವಾಯಿತು. ಹೀಗೆ ಚಂದ್ರಗ್ರಹಣವು ಪ್ರಥಮದಲ್ಲಿಯೂ ಸೂರ್ಯಗ್ರಹಣವು ಮಧ್ಯದಲ್ಲಿಯೂ ಎಂಬ ಪ್ರವಾದಿ ವರ್ಯರ ಮಾತು ಅಕ್ಷರಾರ್ಥದಲ್ಲಿಯೂ ಸತ್ಯವಾ ಯಿತು. (ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದ್). 1895ರ ರಮಝಾನ್ ತಿಂಗಳಲ್ಲಿ ಕೂಡ ಸೂರ್ಯ ಚಂದ್ರ ಗ್ರಹಣಗಳು ಪುನಃ ಉಂಟಾದುವು. ಅಂದರೆ, 1894ರ ರಮಝಾನ್‌ನಲ್ಲಿ ಸೂರ್ಯ ಚಂದ್ರ ಗ್ರಹಣಗಳು ಭಾರತದಲ್ಲಿ ಗೋಚರ ವಾದ ಮೂರನೆಯ ವರ್ಷವೇ ರಮಝಾನ್ ತಿಂಗಳಲ್ಲಿ ಸೂರ್ಯ ಚಂದ್ರ ಗ್ರಹಣಗಳು ಪಶ್ಚಿಮಾರ್ಧ ಗೋಳದ ಲ್ಲಿಯೂ (ಅಮೆರಿಕಾ ಭೂಖಂಡದಲ್ಲಿಯೂ) ಗೋಚರ ವಾಯಿತು. ವಾಗ್ದತ್ತ ಮಸೀಹರು ನಂತರ ಬರೆದ "ಹಕೀಕತುಲ್ ವಹ್ಯ್" ಎಂಬ ಗ್ರಂಥದ 94ನೇ ಪುಟ ದಲ್ಲಿ ಈ ಸಂಗತಿಯನ್ನು ಉಲ್ಲೇಖಿಸಿದ್ದಾರೆ. ಈ ರೀತಿ ಯಲ್ಲಿ ಆ ಭವಿಷ್ಯವಾಣಿಯು ಸಮಸ್ತ ಲೋಕವೂ ಸಾಕ್ಷಿ ಯಾಗುವಂತೆ, ಅತ್ಯಂತ ಆಶ್ಚರ್ಯಕರವಾದ ರೀತಿಯಲ್ಲಿ ಈಡೇರಿತು.

ಆ ಭವಿಷ್ಯವಾಣಿಯು ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ) ಅವರಿಗೆ ಮಾತ್ರವೇ ಅನ್ವಯ ವಾಗುವಂತಹದೆಂದು ಭವಿಷ್ಯವಾಣಿಯ ಶಬ್ದಪ್ರಯೋಗ ವೇ ತಿಳಿಸಿಕೊಡುತ್ತದೆ. ಇನ್ನು ಮುಂದೆ ಯಾರಾದರೂ ಉದ್ಧಾರಕ ಲೋಕದಲ್ಲಿ ಅವತಾರವೆತ್ತಿದರೂ ನಿಶ್ಚಿತ ದಿನಾಂಕಗಳಲ್ಲಿ ಸೂರ್ಯ ಚಂದ್ರ ಗ್ರಹಣಗಳು ಸಂಭವಿಸಿ ದರೂ ಕೂಡ "ಲೋಕಾರಂಭ ಮೊದಲ್ಗೊಂಡು ಇದು ವರೆಗೂ ಸಂಭವಿಸದ" ಎಂಬ ವಿಶೇಷಣವು ಆ ಗ್ರಹಣ ಗಳಿಗೆ ಇರಲಾರದು.

ಇಂದು ಖಗೋಳಶಾಸ್ತ್ರವು ಅಭೂತಪೂರ್ವವಾದ ಮುನ್ನಡೆಯನ್ನು ಸಾಧಿಸಿದೆ. ನಭೋಮಂಡಲವನ್ನು ವೀಕ್ಷಿಸುವ ಹಲವಾರು ಅಂತರಿಕ್ಷ ವೀಕ್ಷಣಾಲಯಗಳು ಲೋಕದ ವಿವಿಧ ಕಡೆಗಳಲ್ಲಿ ಸ್ಥಾಪಿಸಲ್ಪಟ್ಟಿರುತ್ತವೆ. ಆದುದರಿಂದ ಈ ಕೇಂದ್ರಗಳಲ್ಲಿರುವ ದಾಖಲೆಗಳ ಸಹಾ ಯದಿಂದ ಮೇಲಿನ ಭವಿಷ್ಯವಾಣಿಯ ಈಡೇರಿಕೆಯ ಕುರಿತು ಪರೀಕ್ಷಿಸಲು ಯಾರಿಗೂ ಸಾಧ್ಯವಿದೆ. ನಾನು ಖಗೋಳಶಾಸ್ತ್ರ ವಿಭಾಗದಲ್ಲಿ ಕೆಲಸ ಮಾಡುತ್ತಿರುವುದ ರಿಂದ ಅನೇಕರು ನನಗೆ ಪತ್ರ ಬರೆದು ಈ ಪ್ರವಾದನ ಪ್ರಕಾರ ಸೂರ್ಯ ಚಂದ್ರ ಗ್ರಹಣಗಳು ಉಂಟಾದುದರ ಬಗ್ಗೆ ನನ್ನೊಡನೆ ವಿಚಾರಿಸಿದ್ದಾರೆ. ಅನ್ವೇಷಕರಿಗೆ ನಾನು ಈ ರೀತಿ ಉತ್ತರ ನೀಡಿದ್ದೆ: ಉಸ್ಮಾನಿಯಾ ವಿಶ್ವವಿದ್ಯಾಲಯದ ನನ್ನ ಲೈಬ್ರರಿಯಲ್ಲಿ ಪ್ರಖ್ಯಾತ ಖಗೋಳ ಶಾಸ್ತ್ರಜ್ಞ Oppolzer ಬರೆದ Canon of Eclipses ಎಂಬ ಒಂದು ಗ್ರಂಥವಿದೆ. (Dover Publication-New York, 1962). ಕಳೆದ ಕಾಲದ ಲ್ಲಿ ಸಂಭವಿಸಿದ ಮತ್ತು ಇನ್ನು ಮುಂದೆ ಗೋಚರವಾಗ ಲಿರುವ ಸೂರ್ಯ ಚಂದ್ರ ಗ್ರಹಣಗಳ ವಿಸ್ತಾರವಾದ ವಿವರಣೆಯು ಈ ಗ್ರಂಥದಲ್ಲಿದೆ. ಹೈದರಾಬಾದಿಗೆ ಬಂದಲ್ಲಿ ಯಾರಿಗೂ ಈ ಗ್ರಂಥವನ್ನು ನೋಡಿ 1894ನೇ ಮಾರ್ಚ್ 21ರಂದು ಮತ್ತು ಎಪ್ರಿಲ್ 6ರಂದು ಯಥಾಕ್ರಮ ಚಂದ್ರಗ್ರಹಣವೂ ಸೂರ್ಯಗ್ರಹಣವೂ ಸಂಭವಿಸಿರುವುದನ್ನು ಖಚಿತಪಡಿಸಿಕೊಳ್ಳಲು ಸಾಧ್ಯ ವಿದೆ.

ವಾಗ್ದತ್ತ ಮಸೀಹ್ ಹಝ್ರತ್ ಅಹ್ಮದ್ (ಅ) ರವರ ಎದುರಾಳಿಗಳು 1891 ರಿಂದ 1894 ರ ವರೆಗೆ ಮುಂದಿಟ್ಟ ಆಕ್ಷೇಪವು, ಪೈಗಂಬರರು ಇಮಾಂ ಮಹ್ದಿಯ ಕಾಲದಲ್ಲಿ ರಮಝಾನ್ ತಿಂಗಳಲ್ಲಿ ಗೋಚರಿಸುವುದೆಂದು ಭವಿಷ್ಯ ನುಡಿದ ಸೂರ್ಯ ಚಂದ್ರ ಗ್ರಹಣಗಳು ಉಂಟಾಗಲಿಲ್ಲವಲ್ಲಾ ಎಂದಾಗಿತ್ತು. ಆದರೆ, ಆ ಗ್ರಹಣಗಳು 1894 ರಲ್ಲಿ ನಿಶ್ಚಿತ ದಿನ ರಾತ್ರಿಗಳಲ್ಲೇ ಗೋಚರವಾದಾಗ ಪ್ರತಿಭಟನೆಯ ಧಾಟಿಯು ಬೇರೆ ರೂಪಕ್ಕೆ ತಿರುಗಿತು. ಇತ್ತೀಚೆಗೆ ಒಂದು ಹೊಸ ರೀತಿಯ ವಿವಾದವು ಉದ್ಭವಿಸಿರುವುದಾಗಿ ಕಂಡುಬಂದಿದೆ. ಅದೇನೆಂದರೆ, ರಮಝಾನ್ ತಿಂಗಳಲ್ಲಿ ಸೂರ್ಯ ಚಂದ್ರ ಗ್ರಹಣಗಳು ಮೊದಲು ಸಹ ಹಲವು ಬಾರಿ ಗೋಚರಿಸಿವೆಂದೂ ಆದುದರಿಂದ ಈ ಸೂರ್ಯಚಂದ್ರ ಗ್ರಹಣಗಳು ಇಮಾಂ ಮಹ್ದಿಯ ಸತ್ಯಕ್ಕೆ ಸೂಚಕ ಕಾರ್ಯಗಳಾಗಿರಲು ಪರ್ಯಾಪ್ತವಲ್ಲವೆಂಬುದೇ ಈ ಹೊಸ ವಾದ. ಪಾಕಿಸ್ತಾನದ ಲಾಹೋರಿನಿಂದ ಪ್ರಕಟವಾಗುವ "ಚಟ್ಟಾನ್" ಎಂಬ ವಾರ ಪತ್ರಿಕೆಯಲ್ಲಿ (ಜುಲೈ 25, 1983) ಗಾಸಿ ಮುನಜ್ಜಂ ಎಂಬೊಬ್ಬರು ಬರೆದ ಒಂದು ಲೇಖನದಲ್ಲಿ 1807, 1829, 1851, 1873, 1894, 1917, 1959, 1982 ಎಂಬೀ ವರ್ಷಗಳ ರಮಝಾನ್ ತಿಂಗಳಲ್ಲಿ ಸೂರ್ಯ ಚಂದ್ರ ಗ್ರಹಣಗಳು ಸಂಭವಿಸಿವೆಂದೂ ಆದ್ದರಿಂದ 1894 ರ ಗ್ರಹಣಗಳಿಗೆ (ಹಿಜರಿ 1311) ಪ್ರತ್ಯೇಕ ಮಹತ್ವವನ್ನು ನೀಡಬೇಕಾಗಿಲ್ಲವೆಂದೂ ಬರೆದಿದ್ದರು. ಮಿರ್ಝಾ ಸಾಹೇಬರು ತನ್ನ ಗ್ರಂಥದಲ್ಲಿ ಲೋಕಾರಂಭ ಮೊದಲ್ಗೊಂಡು ಇದುವರೆಗೂ ಒಂದೇ ರಮಝಾನ್ ತಿಂಗಳಲ್ಲಿ ಸೂರ್ಯ ಚಂದ್ರಗ್ರಹಣಗಳು ಉಂಟಾಗಿಲ್ಲವೆಂದು ಬರೆದಿರುವುದರಿಂದ ಅವರ ಆಹ್ವಾನದಲ್ಲಿ ಹೇಳಿರುವ ಬಹುಮಾನವು ತನಗೆ ಲಭಿಸಬೇಕೆಂಬ ಒಂದು ಪ್ರತಿಪಾದನೆಯನ್ನು ಕೂಡ ಗಾಸಿ ಮುನಜ್ಜಂ ತನ್ನ ಲೇಖನದಲ್ಲಿ ಮಂಡಿಸಿದ್ದರು. ಆದರೆ ವಾಸ್ತವಾಂಶವೇನು? ವಾಗ್ದತ್ತ ಮಸೀಹರು ತನ್ನ ಗ್ರಂಥದಲ್ಲಿ ಸೂರ್ಯ ಚಂದ್ರ ಗ್ರಹಣಗಳ ದಿನಾಂಕಗಳ ಬಗ್ಗೆ ಶಕ್ತಿಯುತವಾಗಿಯೂ ಸ್ಪಷ್ಟವಾಗಿಯೂ ಬರೆದಿದ್ದರು. ಗ್ರಹಣಗಳು. ತಾನು ಮಹ್ದಿಯೆಂಬುದಾಗಿ ಓರ್ವ ವ್ಯಕ್ತಿ ವಾದಿಸುತ್ತಿರುವ ಕಾಲದ ಒಂದೇ ರಮಝಾನ್ ತಿಂಗಳಲ್ಲಿ ಸಂಭವಿಸಬೇಕು. ಮಾತ್ರವಲ್ಲ ಪೈಗಂಬರರು ಸೂಚಿಸಿರುವ ದಿನಾಂಕಗಳಲ್ಲೇ ಗ್ರಹಣಗಳು ಉಂಟಾಗಬೇಕು. ಈ ವೈಶಿಷ್ಟ್ಯಗಳುಳ್ಳ ಸೂರ್ಯ ಚಂದ್ರಗ್ರಹಣಗಳು ಮೊದಲೆಂದಿಗೂ ಉಂಟಾಗಿಲ್ಲವೆಂಬುದಾಗಿ ವಾಗ್ದತ್ತ ಮಸೀಹ್ ಹೇಳಿರುವರೇ ವಿನಾ ಇದುವರೆಗೂ ರಮಝಾನ್ ತಿಂಗಳಲ್ಲಿ ಸೂರ್ಯ ಚಂದ್ರಗ್ರಹಣಗಳು ಸಂಭವಿಸಿಯೇ ಇಲ್ಲವೆಂದು ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ) ಘೋಷಿಸಿರಲಿಲ್ಲ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಒಂದೇ ರಮಝಾನ್ ತಿಂಗಳಲ್ಲಿ ಸೂರ್ಯ ಚಂದ್ರ ಗ್ರಹಣಗಳುಂಟಾಗುವುವೆಂಬುದು ಪ್ರತಿಪಾದನೀಯವಾದ ವಿಷಯವೇ ಅಲ್ಲ. ಅಲ್ಲಾಹನ ದಿವ್ಯ ಸೂಚಕಕಾರ್ಯಗಳನ್ನು ಜನರಿಗೆ ವಿವರಿಸಿಕೊಡುತ್ತಾ ತಾನು ಅಲ್ಲಾಹನಿಂದ ನಿಯೋಗಿಸಲ್ಪಟ್ಟ ಉದ್ಧಾರಕನೆಂಬುದಾಗಿ ಓರ್ವ ವ್ಯಕ್ತಿಯು ವಾದಿಸುತ್ತಿರುವ ಕಾಲದಲ್ಲಿ ಸಂಭವಿಸುವ ಸೂರ್ಯ ಚಂದ್ರಗ್ರಹಣಗಳು ಮಾತ್ರವೇ ಭವಿಷ್ಯವಾಣಿಗೆ ಅನ್ವಯವಾಗತಕ್ಕ ಗ್ರಹಣಗಳೆಂಬುದನ್ನು ತಿಳಿಯಬೇಕು. "ಚಟ್ಟಾನ್" ವಾರ ಪತ್ರಿಕೆಯು ಪ್ರಕಟಿಸಿದ ಗಾಸಿ ಮುನಜ್ಜಮರ ಲೇಖನದಲ್ಲಿ ಸೂರ್ಯ ಚಂದ್ರಗ್ರಹಣಗಳ ನಿಶ್ಚಿತ ದಿನಾಂಕಗಳ ಕುರಿತು ಯಾವುದೇ ವಿವರಣೆ ಇರಲಿಲ್ಲ !

ಆ ಲೇಖನದ ಫೋಟೊ ಪ್ರತಿಯನ್ನು ಕೆಲವರು ನನಗೆ ಕಳುಹಿಸಿ ಕೊಡುತ್ತಾ ಅದರ ಬಗ್ಗೆ ನನ್ನ ಅಭಿಪ್ರಾಯವೇನೆಂದು ಕೇಳಿರುತ್ತಾರೆ. ಉಸ್ಮಾನಿಯಾ ವಿಶ್ವವಿದ್ಯಾಲಯದ ನನ್ನ ಸಹೋದ್ಯೋಗಿಯಾಗಿರುವ ಡಾ. ಮೋಹನ್ ಬಲ್ಲಾಬ್ ಎಂಬ ರೀಡರ್‌ರೊಂದಿಗೆ ನಾನು ಯುನಿವರ್ಸಿಟಿ ಲೈಬ್ರರಿಯ ಗ್ರಂಥಗಳನ್ನು ಪರಿಶೋಧಿಸಿ ವಿವಿಧ ಕಾಲಘಟ್ಟಗಳಲ್ಲಿ ಸಂಭವಿಸಿರುವ ಸೂರ್ಯ ಚಂದ್ರಗ್ರಹಣಗಳ ಬಗ್ಗೆ ಆಳವಾದ ಅಧ್ಯಯನ ನಡೆಸಿದೆನು. ಒಪೋಲ್ಜರ್ ಎಂಬ ವಿಜ್ಞಾನಿಯ Canon of Eclipses ಎಂಬ ಗ್ರಂಥವಲ್ಲದೆ Tables of Moon and Sun(By J. Meens –Copyright 1962 by Les Imprimeries Compinoises Bourqe Leopold - Belgium.) ಎಂಬ ಗ್ರಂಥವನ್ನು ಸಹ ನಾವು ಪರಿಶೋಧಿಸಿ ಮೊದಲು ಯಾವೆಲ್ಲಾ ವರ್ಷದ ರಮಝಾನ್ ತಿಂಗಳಲ್ಲಿ ಸೂರ್ಯ ಚಂದ್ರಗ್ರಹಣಗಳು ಉಂಟಾಗಿವೆಯೆಂಬುದಾಗಿ ಅಧ್ಯಯನ ನಡೆಸಿದೆವು. ಇದರ ಫಲವಾಗಿ, ಗಾಸಿ ಮುನಜ್ಜಂ ಬರೆದಿರುವಂತೆ ಈ ಹಿಂದೆ 9 ವಿವಿಧ ವರ್ಷ

ಗಳಲ್ಲಿ ಹಾಗೂ ಅವರು ಉಲ್ಲೇಖಿಸದಿರುವ 1895 ರಲ್ಲಿ ಕೂಡ ಒಂದೇ ರಮಝಾನ್ ತಿಂಗಳಲ್ಲಿ ಸೂರ್ಯ ಚಂದ್ರ ಗ್ರಹಣಗಳು ಉಂಟಾಗಿರುವುದನ್ನು ಕಂಡುಕೊಳ್ಳಲು ನಮಗೆ ಸಾಧ್ಯವಾಯಿತು. ಆದರೆ, ಹಝ್ರತ್ ಮುಹಮ್ಮದ್ (ಸ) ಭವಿಷ್ಯನುಡಿದಿರುವಂತೆ ನಿಶ್ಚಿತ ದಿನಾಂಕಗಳಲ್ಲಿ ಸೂರ್ಯ ಚಂದ್ರ ಗ್ರಹಣಗಳು 1894 ರಲ್ಲಿ ಮಾತ್ರವೇ ಉಂಟಾಗಿವೆಯೆಂದು ಕಂಡಾಗ ನನ್ನ ಸಹೋದ್ಯೋಗಿ ಕೂಡ ಆಶ್ಚರ್ಯ ಚಕಿತರಾದರು.

ಇಲ್ಲಿ ಉಲ್ಲೇಖಾರ್ಹವಾದ ಇನ್ನೊಂದು ಪ್ರಮುಖ ವಿಷಯವೇನೆಂದರೆ, 1894ರಲ್ಲಿ ಗೋಚರಿಸಿದ ಸೂರ್ಯ ಚಂದ್ರ ಗ್ರಹಣಗಳ ಹೊರತು ಉಳಿದೆಲ್ಲಾ ವರ್ಷಗಳ ಗ್ರಹಣಗಳೂ ಲೋಕದ ಹೆಚ್ಚಿನ ಭಾಗಗಳಲ್ಲಿ ದೃಶ್ಯವಾಗಲಿಲ್ಲ. ಚಂದ್ರಗ್ರಹಣಗಳು ಭೂಮಂಡಲದ ಅರ್ಧದಷ್ಟು ಭಾಗದಲ್ಲಿ ಮಾತ್ರ ಗೋಚರವಾದರೆ, ಸೂರ್ಯಗ್ರಹಣಗಳು ಜನವಾಸ ಕಡಿಮೆ ಇರುವ ಸ್ವಲ್ಪಭಾಗಗಳಲ್ಲಿ ಅಥವಾ ಸಮುದ್ರಾಂತರಿಕ್ಷದಲ್ಲಿ ಮಾತ್ರವೇ ಗೋಚರವಾದುವು. ಆದರೆ, 1894 ರಲ್ಲಿ ವಾಗ್ದತ್ತ ಮಸೀಹರ ಕಾಲದಲ್ಲಿ ದೃಶ್ಯವಾದ ಸೂರ್ಯ ಚಂದ್ರ ಗ್ರಹಣಗಳು ಭಾರತವೂ ಸೇರಿದಂತೆ ಏಶ್ಯಾದ ಹೆಚ್ಚಿನ ಕಡೆಗಳಲ್ಲಿ ಗೋಚರಿಸಿದುವು. ವಾಗ್ದತ್ತ ಮಸೀಹ್ (ಅ) ತನ್ನ ಅನುಚರರೊಂದಿಗೆ ಈ ಗ್ರಹಣಗಳನ್ನು ವೀಕ್ಷಿಸಿದ್ದರು. ವಾಗ್ದತ್ತ ಉದ್ಧಾರಕನು ಆವಿರ್ಭವಿಸುವ ಸ್ಥಳದಲ್ಲಿ ಈ ಗ್ರಹಣಗಳು ಗೋಚರಿಸಬೇಕಾದುದು ಅನಿವಾರ್ಯವೆಂಬುದನ್ನು ಜನರು ತಿಳಿದುಕೊಳ್ಳಬೇಕೆಂದು ಆ ಮಹಾತ್ಮರು "ನೂರುಲ್ ಹಕ್" ಎಂಬ ಗ್ರಂಥದಲ್ಲಿ ಒತ್ತಿ ಹೇಳಿದ್ದರು.

ಕಲ್ಕತ್ತ ನಗರದಲ್ಲಿ ಭಾರತ ಸರಕಾರದ ಸ್ವಾಮ್ಯತ್ವದ Positional Astronomy Centre (P. 546 N. Block, First Floor, New Alepore, Calcutta-700 053) ಎಂಬ ಒಂದು ಸಂಸ್ಥೆಯಿದೆ. ನಾನು ಅಲ್ಲಿಗೆ ಪತ್ರ ಬರೆದು, ಮೇಲಿನ 9 ವಿವಿಧ ವರ್ಷಗಳಲ್ಲಿ ಹಾಗೂ 1895ರ ರಮಝಾನ್ ತಿಂಗಳಲ್ಲಿ ಉಂಟಾದ ಸೂರ್ಯ ಚಂದ್ರ ಗ್ರಹಣಗಳ ಪೈಕಿ ಯಾವೆಲ್ಲಾ ವರ್ಷಗಳ ಗ್ರಹಣಗಳು ಭಾರತದ ಖಾದಿಯಾನ್ ಎಂಬಲ್ಲಿಗೆ ಗೋಚರವಾಗಬಹುದೆಂದು ವಿಚಾರಿಸಿದೆ. ಅದಕ್ಕೆ ಆ ಸಂಸ್ಥೆಯಿಂದ ನನಗೆ ಲಭಿಸಿದ ಉತ್ತರದಲ್ಲಿ, 1894 ರಲ್ಲಿ ಉಂಟಾದ ಗ್ರಹಣಗಳು ಮಾತ್ರವೇ ಭಾರತದ ಖಾದಿಯಾನ್ ಪ್ರದೇಶದಲ್ಲಿ ಗೋಚರವಾದುವೆಂದೂ ಅವುಗಳು ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಅವರು ಪ್ರಸ್ತಾಪಿಸಿರುವ ರಮಝಾನ್ ತಿಂಗಳ ನಿಶ್ಚಿತ ದಿನಾಂಕಗಳಲ್ಲೇ ಉಂಟಾದುವೆಂದೂ ವಿವರಿಸಲಾಗಿದೆ. ಆ ಪತ್ರವು ಈಗಲೂ ನನ್ನ ಬಳಿಯಲ್ಲಿದೆ. (D. O. No. T-00901 dated 7-3-'84, written by A. K. Bhatnagar, Meteorologist).

ವಾಗ್ದತ್ತ ಮಸೀಹ್ (ಅ) ಈ ರೀತಿ ಬರೆದರು : "ನನ್ನ ಪ್ರಾಣವು ಯಾರೊಬ್ಬನ ಹಿಡಿತದಲ್ಲಿರುವುದೋ ಆ ಅಲ್ಲಾಹನ ಹೆಸರಿನಲ್ಲಿ ಆಣೆಯಿಟ್ಟು ಹೇಳುತ್ತೇನೆ–ಆಕಾಶ ಮಂಡಲದಲ್ಲಿ ಗೋಚರವಾದ ಈ ಅದ್ಭುತ ಸೂಚಕಕಾರ್ಯವು ನನ್ನ ಸತ್ಯತೆಗೆ ಸಾಕ್ಷಿಯಾಗಿರುವುದೆಂದು ಅಲ್ಲಾಹನು ನನಗೆ ತಿಳಿಸಿಕೊಟ್ಟಿರುತ್ತಾನೆ. ಮೌಲವಿಗಳು ನನ್ನನ್ನು ದಜ್ಜಾಲ್, ಕದ್ದಾಬ್ (ಕಳ್ಳವಾದಿ) ಎಂಬಿತ್ಯಾದಿಯಾಗಿ ಕಠೋರವಾಗಿ ಆಕ್ಷೇಪಿಸುತ್ತಿರುವ ಕಾಲದಲ್ಲಿಯೇ ಸರ್ವಲೋಕದ ಪರಿಪಾಲಕನಾದ ಅಲ್ಲಾಹನು ನನ್ನ ಸತ್ಯತೆಯನ್ನು ಪ್ರಕಟಪಡಿಸುವ ಈ ಸೂಚಕಕಾರ್ಯವನ್ನು ಲೋಕಕ್ಕೆ ತೋರಿಸಿಕೊಟ್ಟಿದ್ದಾನೆ. ಹಾಗೂ ಇವುಗಳು ನನ್ನ ಕುರಿತು ಸಾಕ್ಷ್ಯಗಳಾಗಿವೆಯೆಂದು ನನಗೆ ತಿಳಿಸಿರುತ್ತಾನೆ. ನನ್ನ ಸತ್ಯತೆಯ ಕುರುಹಾಗಿ ತೋರಿಸಲ್ಪಟ್ಟ ಈ ಸೂಚಕಕಾರ್ಯವು ಹಝ್ರತ್ ಆದಮರ ಕಾಲದಿಂದ ಇದುವರೆಗೂ ಯಾರೂ ನೋಡಿರದಂತಹ ಅದ್ಭುತ ದೃಷ್ಟಾಂತವೇ ಆಗಿದೆ. ಅದಾಗ್ಯೂ ಈ ಸೂರ್ಯ ಚಂದ್ರಗ್ರಹಣಗಳು ನನ್ನ ಸತ್ಯತೆಗೆ ಸಾಕ್ಷಿಯಾಗಿವೆಯೆಂಬುದನ್ನು ನಾನು ಪವಿತ್ರ ಕಅಬಾದಲ್ಲಿ ನಿಂತುಕೊಂಡು ಪ್ರಮಾಣಪೂರ್ವಕವಾಗಿ ಹೇಳಬಲ್ಲೆ."

ಅವರು ಒಂದು ಕವನದಲ್ಲಿ ಈ ರೀತಿ ಹೇಳಿದರು:

آسمان تونے بنایا میرے لئے اک گواہ
چاند اور سورج ہوئے میرے لئے
تاریک وتار

"ನೀನು ಆಕಾಶವನ್ನು ನನಗೆ ಒಂದು
ಸಾಕ್ಷಿಯನ್ನಾಗಿ ಮಾಡಿದೆ;
ಚಂದ್ರನೂ ಸೂರ್ಯನೂ ನನಗೆ
ಸಾಕ್ಷಿ ಹೇಳುವ ತರದಲ್ಲಿ ಕಳೆಗುಂದಿ
ಹೋದುವು."

ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ – 3

# ಪ್ರವಾದಿತ್ವದ ಕುರಿತು ಪವಿತ್ರ ಖುರ್‌ಆನಿನ ಸಾಕ್ಷ್ಯಗಳು

ಉರ್ದು ಮೂಲ : ಮಿರ್ಝಾ ಬಶೀರ್ ಅಹ್ಮದ್ ಎಂ. ಎ.        ಅನುವಾದ : ಎಂ. ಉಬೈದುಲ್ಲಾ

## ಮುಹಮ್ಮದ್ ಪೈಗಂಬರರ ಉಮ್ಮತ್‌ನಲ್ಲಿ ಪ್ರವಾದಿಗಳು ಬರುವರೆಂಬ ಸ್ಪಷ್ಟ ವಾಗ್ದಾನ

ಪವಿತ್ರಖುರ್‌ಆನ್ ಹೀಗೆ ಹೇಳುತ್ತದೆ.

يابني آدم إما يأتينكم رسل منكم يقصون
عليكم آيتي فمن اتقى وأصلح فلا خوف
عليهم ولا هم يحزنون

"ಓ ಆದಮ್ ಸಂತತಿಗಳೇ, ನಿಮ್ಮ ಬಳಿಗೆ ನಿಮ್ಮಿಂದಲೇ ಪ್ರವಾದಿಗಳು ಬಂದು, ನನ್ನ ವಚನಗಳನ್ನು ಓದಿ ಕೇಳಿಸಿದರೆ, ಯಾರು ಭಯವುಳ್ಳವರಾಗಿ ತಮ್ಮ ನಡೆವಳಿಕೆಗಳನ್ನು ಸುಧಾರಿಸುತ್ತಾರೋ ಅವರಿಗೆ ಯಾವುದೇ ಭಯವಾಗಲಿ ವ್ಯಸನವಾಗಲಿ ಉಂಟಾಗಲಾರದು." (7 : 36)

ಈ ಆಯತಿನಲ್ಲಿ ಅಲ್ಲಾಹನು ತನ್ನ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಮೂಲಕ ಸಂಪೂರ್ಣ ಮಾನವ ಕುಲವನ್ನು ಸಂಬೋಧಿಸಿ ಈ ರೀತಿ ಹೇಳಿರುವನು: ಇನ್ನು ಮುಂದೆ ಮುಹಮ್ಮದ್ ಪೈಗಂಬರರ ಉಮ್ಮತ್‌ನಲ್ಲಿ ಯಾರಾದರೂ ಪ್ರವಾದಿಗಳು ಬಂದರೆ ಅವರನ್ನು ತಿರಸ್ಕರಿಸಬಾರದು. ಅಲ್ಲಾಹನ ಕುರಿತು ಭಯ ಭಕ್ತಿಯುಳ್ಳವರಾಗಿ ತಮ್ಮ ನಡೆವಳಿಕೆಗಳ ಸುಧಾರಣೆಯ ಕುರಿತು ಚಿಂತಿಸಬೇಕು. ಇದೇ ನಿಮ್ಮನ್ನು ಭಯ ಮತ್ತು ವ್ಯಸನದಿಂದ ಸಂರಕ್ಷಿಸುವ ಮಾರ್ಗವಾಗಿದೆ. ಈ ವಚನ ಬಹಳ ವ್ಯಕ್ತವಾಗಿ ಮುಹಮ್ಮದ್ ಪೈಗಂಬರರ ಅನುಯಾಯಿಗಳ ಪೈಕಿ ಆವಶ್ಯಾನುಸಾರವಾಗಿ ಪ್ರವಾದಿಗಳ ಬರುವಿಕೆಯ ಮಾರ್ಗವನ್ನು ತೆರೆದಿಡುತ್ತದೆ. ಎಲ್ಲರೂ ಇದರ ಕುರಿತು ಆಲೋಚಿಸುತ್ತಿದ್ದರೆ ಎಷ್ಟು ಚೆನ್ನಾಗಿತ್ತು.

ಯಾರಿಗಾದರೂ ಈ ವಚನದ ಬಗ್ಗೆ ಇದು ಭವಿಷ್ಯತ್ ಕಾಲದ ಕುರಿತು ಅವತೀರ್ಣವಾದುದಲ್ಲ; ಇದು ಹಿಂದಿನ ಜನಾಂಗಗಳ ಕುರಿತು ಅವತೀರ್ಣವಾದ ವಚನವಾಗಿದೆಯೆಂಬ ಸಂಶಯವುಂಟಾದರೆ, ಹಾಗೆ ಸಂಶಯಿಸುವವರು ಪವಿತ್ರ ಖುರ್‌ಆನ್ ತೆರೆದುನೋಡಿ ಈ ವಚನದ ಹಿಂದೆ ಮತ್ತು ಮುಂದೆ ಇರುವ ವಚನಗಳನ್ನು ಪರಿಶೋಧಿಸುವುದು ಒಳ್ಳೆಯದು. ಅಲ್ಲಿ ಹಿಂದಿನ ಜನಾಂಗಗಳನ್ನು ಸಂಬೋಧಿಸುವುದರ ಕುರಿತು ಅಲ್ಪ ಮಾತ್ರ ಸೂಚನೆಯಾದರೂ ದೊರೆಯಲಾರದು. ಈ ಆಯತ್ ಭವಿಷ್ಯತ್ ಕಾಲದ ಕುರಿತಾಗಿದೆ. ಹಿಂದಿನ ಯಾವುದೇ ಜನಾಂಗದ ಕುರಿತಾಗಿಲ್ಲ ಎಂಬುದು ಸ್ಪಷ್ಟವಾದರೆ ಪ್ರತಿಯೊಬ್ಬ ನ್ಯಾಯಪ್ರಿಯನಾದ ಮನುಷ್ಯನು ಕಡ್ಡಾಯವಾಗಿ ಚಿಂತಿಸಬೇಕಾಗಿದೆ: ಪ್ರವಾದಿತ್ವ ಸ್ಥಗಿತಗೊಂಡಿಲ್ಲವೆಂಬುದಕ್ಕೆ ಇದಕ್ಕಿಂತ ಪ್ರಬಲವಾದ ಸಾಕ್ಷ್ಯವೆಲ್ಲಿದೆ? ಪವಿತ್ರ ಖುರ್‌ಆನ್ ಸ್ವಯಂ ಗಂಭೀರವಾದ ಸ್ವರದಲ್ಲಿ ಹೀಗೆ ಹೇಳುತ್ತಾ ಇದೆ: ಆದಮನ ಸಂತತಿಗಳೇ, ನೀವು ಜಾಗರೂಕರಾಗಿ ಕೇಳಿರಿ, ನಿಮ್ಮ ಬಳಿಗೆ ಇನ್ನು ಮುಂದೆ ನಮ್ಮ ಪ್ರವಾದಿಗಳು ಬರಬಹುದು. ಅವರು ನಿಮ್ಮ ಪೈಕಿಯವರಾಗಿದ್ದು ನಿಮ್ಮ ಪೈಗಂಬರರನ್ನು ಅನುಸರಿಸುವವರಾಗಿರುವರು.

---

( 20ನೇ ಪುಟದಿಂದ )

ಅದ್ಭುತಕರವಾದ ಈ ಸಂಭವಗಳ ಕುರಿತು 13 ಶತಕಗಳ ಮೊದಲು ಭವಿಷ್ಯ ನುಡಿದಿದ್ದ ಹಝ್ರತ್ ಮುಹಮ್ಮದ್ ಪೈಗಂಬರ್ (ಸ.ಅ.) ಎಷ್ಟು ಮಹೋನ್ನತರು! ಅಂತೆಯೇ ಈ ಭವಿಷ್ಯವಾಣಿಯ ಪೂರ್ತೀಕರಣವಾಗಿ ಆವಿರ್ಭವಿಸಿದ ಇಮಾಂ ಮಹ್‌ದಿ (ಅ) ಎಷ್ಟು ಮಹೋನ್ನತರು!

ವಾಗ್ದತ್ತ ಮಹ್‌ದೀ ಮಸೀಹರ ಸತ್ಯತೆಯನ್ನು ಕಂಡುಕೊಂಡು ಆ ಮಹಾತ್ಮರ ಅನುಯಾಯಿ ವೃಂದದಲ್ಲಿ ಪ್ರವೇಶಿಸುವ ಮಹಾಭಾಗ್ಯವು ಎಲ್ಲರಿಗೂ ಲಭಿಸುವಂತಾಗಲಿ ಎಂಬ ಪ್ರಾರ್ಥನೆಯೊಂದಿಗೆ ನನ್ನೀ ಮಾತುಗಳನ್ನು ಮುಗಿಸುತ್ತೇನೆ. ●

ಸ್ನೇಹಿತರೇ, ಬಂಧುಗಳೇ, ದೇವರಿಗಾಗಿ ನೀವು ಆಲಿಸಿರಿ ಮತ್ತು ನೋಡಿರಿ. ಧಾರ್ಮಿಕ ಸಂಗತಿಗಳು ಆಟೋಟಗಳ ಹಾಗಲ್ಲ. ಅದರ ಕುರಿತು ಬಹಳ ಸಮಾಧಾನದಿಂದ ಆಲೋಚಿಸುವುದು ಅತ್ಯಗತ್ಯವಾಗಿದೆ. ಆದುದರಿಂದ ನೀವು ಅಲ್ಲಾಹನಿಗೆ ಬೇಕಾಗಿ ಪವಿತ್ರ ಖುರ್‌ಆನಿನ ಈ ಆಯತಿನ ಕುರಿತು ಸಾವಧಾನದಿಂದ ಚಿಂತಿಸಿರಿ. ಈ ವಚನದಲ್ಲಿ ಕಳೆದ ಕಾಲದ ಕುರಿತು ಹೇಳಲ್ಪಟ್ಟಿದೆಯೋ ಇನ್ನು ಬರುವ ಕಾಲದ ಕುರಿತು ಹೇಳಲ್ಪಟ್ಟಿದೆಯೋ ಎಂಬುದನ್ನು ತಿಳಿಯಲು ಯತ್ನಿಸಿರಿ. ಇದು ಪೈಗಂಬರರ ಆಗಮನದ ಅನಂತರದ ಕಾಲದ ಕುರಿತಾಗಿದೆಯೆಂದು ಸ್ಪಷ್ಟವಾದರೆ, ಸತ್ಯಕ್ಕೆ ಬೇಕಾಗಿ ಅವನ್ನು ಸ್ವೀಕರಿಸಿರಿ. ಏಕೆಂದರೆ ಪವಿತ್ರ ಖುರ್‌ಆನಿಗಿಂತ ಹಿರಿದಾದ ಯಾವುದೇ ಮಾರ್ಗದರ್ಶನವಿಲ್ಲ. ಪವಿತ್ರ ಖುರ್‌ಆನನ್ನು ತಿರಸ್ಕರಿಸುವುದಕ್ಕಿಂತ ದೊಡ್ಡ ಪಾಪವೂ ಬೇರೆ ಇಲ್ಲ.

## "ಇಮ್ಮಾ" ಎಂಬ ಶಬ್ದದ ವ್ಯಾಖ್ಯಾನ

ಈ ವಚನದಲ್ಲಿ "ಇಮ್ಮಾ" ಎಂಬ ಶಬ್ದವು, "ಬಂದರೆ" ಎಂಬ ಶಬ್ದದಲ್ಲಿ "ರೆ" ಎಂಬ ಅಕ್ಷರ ಪ್ರಯೋಗಿಸಿದ ರೀತಿಯಲ್ಲಿ, ಸಂಶಯಸೂಚಕವಾಗಿ ಬಂದಿದೆಯಲ್ಲದೆ ಪ್ರವಾದಿಗಳು ಬಂದೇ ಬರುವರು ಎಂಬುದು ಸ್ಪಷ್ಟವಾಗಿ ನಿರೂಪಿಸಿಲ್ಲ ಎಂದು ಯಾರಾದರೂ ಸಂಶಯ ವ್ಯಕ್ತಗೊಳಿಸುವುದಾದರೆ, ಆ ಸಂಶಯ ಮೌಢ್ಯ ಸೂಚಕವಲ್ಲದೆ ಯಥಾರ್ಥವಾದುದಲ್ಲ. ಅಲ್ಲಾಹನು ಸರ್ವಜ್ಞನಾಗಿರುವುದರಿಂದ ಅವನಿಗೆ ಪ್ರವಾದಿಗಳು ಬರುವ ಕುರಿತು ಸಂಶಯವಿದೆ ಎಂದು ಹೇಳುವುದು ದೇವನಿಂದೆಗೆ ಸಮಾನವಾಗಿದೆ. (ಅಂತಹ ಆರೋಪಗಳನ್ನು ಮಾಡುವುದರಿಂದ ಅಲ್ಲಾಹನು ನಮ್ಮನ್ನು ರಕ್ಷಿಸಲಿ). ಇಲ್ಲಿ ಅಲ್ಲಾಹನು ಪ್ರವಾದಿಗಳು ಬಂದರೆ ಎಂದು ಹೇಳಿದುದರ ಉದ್ದೇಶ ಮುಹಮ್ಮದ್ ಪೈಗಂಬರರ ಅನಂತರದ ಪೀಳಿಗೆಗಳು ತಮ್ಮಲ್ಲಿ ಬರಬಹುದಾದ ಪ್ರವಾದಿಯ ಕುರಿತು ತಿಳಿದವರಾಗಿದ್ದುಕೊಂಡು ಅವರನ್ನು ಸ್ವೀಕರಿಸಲು ಸನ್ನದ್ಧರಾಗಿರಬೇಕೆಂಬುದರ ಕುರಿತಾಗಿದೆ. ಮುಹಮ್ಮದ್ ಪೈಗಂಬರರ ಅನಂತರ ಯಾವ ಪೀಳಿಗೆಯಲ್ಲಿ ಪ್ರವಾದಿಗಳು ಬರಬಹುದೆಂಬುದು ತಿಳಿಯದ ಕಾರಣ ಪ್ರತಿಯೊಂದು ಪೀಳಿಗೆಯವರು ತಮ್ಮಲ್ಲಿ ಬರಬಹುದಾದ ಪ್ರವಾದಿಯನ್ನು ನಿರೀಕ್ಷಿಸುತ್ತಿರಬೇಕೆಂದು ಈ ವಚನದ ಉದ್ದೇಶವಾಗಿದೆ. ಇಲ್ಲಿ "ಇಮ್ಮಾ" ಎಂದು ಹೇಳಿದುದು ಪ್ರವಾದಿಗಳು ಬರುವುದರ ಕುರಿತಲ್ಲ. ಪ್ರವಾದಿಗಳು ಯಾವ ಪೀಳಿಗೆಯಲ್ಲಿ, ಎಂದರೆ ಯಾವ ಜನರ ಕಾಲದಲ್ಲಿ ಬರುವುದರ ಕುರಿತು ನಿಶ್ಚಿತವಿಲ್ಲವೆಂಬುದನ್ನು ಈ ಶಬ್ದ ಸೂಚಿಸುತ್ತದೆ. ಪ್ರತಿಯೊಂದು ಕಾಲದ ಜನರು ಪ್ರವಾದಿಯ ಪ್ರತೀಕ್ಷೆಯಲ್ಲಿ ಇರಬೇಕೆಂದು ಈ ವಚನದ ಉದ್ದೇಶವಾಗಿದೆ. ಇಲ್ಲಿ ಪ್ರತಿಯೊಂದು ಕುಲದ ಜನರನ್ನು ಉದ್ದೇಶಿಸಿ ಅಲ್ಲಾಹನು "ನಿಮ್ಮ ಪೈಕಿ ಪ್ರವಾದಿಗಳು ಬಂದರೆ" ಎಂದು ಹೇಳಿದುದಾಗಿ ಭಾವಿಸಬೇಕಾಗಿದೆ. ಇಲ್ಲಿ ಉದ್ದೇಶಿಸಿದುದು ಪ್ರವಾದಿಗಳ ಬರುವಿಕೆಯ ಕುರಿತು ಸಂಶಯವೆಂದಾದರೆ ಅದು ಸರ್ವಜ್ಞನಾದ ಅಲ್ಲಾಹನ ವಚನವಾದ ಪವಿತ್ರ ಖುರ್‌ಆನಿನ ಮಹತ್ವಕ್ಕೆ ಅನುಯೋಜ್ಯವಾಗಿರುವುದಿಲ್ಲ.

ಈ ವಚನದಲ್ಲಿ "ರುಸುಲ್" ಅಥವಾ "ಪ್ರವಾದಿಗಳು" ಎಂಬ ಶಬ್ದ ಪ್ರಯೋಗಿಸಲಾಗಿದ್ದು ಮುಹಮ್ಮದ್ ಪೈಗಂಬರರ ಉಮ್ಮತ್‌ನಲ್ಲಿ ಇದುವರೆಗೆ ಒಬ್ಬನೇ ಪ್ರವಾದಿ ಬಂದುದಾಗಿ ಹೇಳುವ ಅರ್ಥವೇನೆಂದು ಯಾರಾದರೂ ಆಕ್ಷೇಪಿಸಿದರೆ ಅದರ ಉತ್ತರ ಇದಾಗಿದೆ: ಓ ನಮ್ಮ ಅವಸರವಸರವಾಗಿ ಆಕ್ಷೇಪಣೆ ಮಾಡುವ ಸಹೋದರರೇ, ಪ್ರಪಂಚದ ಆಯುಷ್ಯ ಇನ್ನೂ ಅವಸಾನಗೊಂಡಿಲ್ಲ. ಇನ್ನು ಮುಂದೆ ಯಾವುದಾದರೂ ಉಮ್ಮತೀ ನಬಿ (ಮುಹಮ್ಮದ್ ಪೈಗಂಬರರ ಅನುಯಾಯಿಯಾದ ಪ್ರವಾದಿ) ' ಬರಲೂ ಬಹುದು. ಅಲ್ಲದೆ ಒಂದು ತತ್ವವನ್ನು ನಿರೂಪಿಸುವಾಗ ಏಕವಚನದ ಬದಲು ಬಹುವಚನವನ್ನು ಪ್ರಯೋಗಿಸುವುದು ಸಹ ಎಲ್ಲಾ ಭಾಷೆಗಳಲ್ಲಿ ರೂಢಿಯಲ್ಲಿದೆ. ಹಝ್ರತ್ ಮಸೀಹ್ ಮೌಊದರಲ್ಲಿ ಎಲ್ಲಾ ಪ್ರವಾದಿಗಳ ಪ್ರತಿಚ್ಛಾಯೆಗಳು ಐಕ್ಯಗೊಂಡಿರುವುದಾಗಿ ಅವರ ವಾದಗಳ ಗಾಢವಾದ ಅಧ್ಯಯನದಿಂದ ವ್ಯಕ್ತಗೊಳ್ಳುವುದರಿಂದ ಅವರ ಆಗಮನದಿಂದ ಹಲವಾರು ಪ್ರವಾದಿಗಳ ಒಟ್ಟಾಗಮನವಾದಂತಾಗಿದೆ. ಇದರ ಕುರಿತು ಪವಿತ್ರ ಖುರ್‌ಆನ್ واذا الرسل اقتت (ಬೇರೆ ಬೇರೆ ಪ್ರವಾದಿಗಳು ಒಂದೇ ಸಮಯದಲ್ಲಿ ಒಟ್ಟುಗೂಡಿಸಲ್ಪಡುವರು) ಎಂಬ ವಚನದಲ್ಲಿ ಸೂಚಿಸಿದೆ.

## "ಖಾತಮುನ್ನಬಿಯ್ಯೀನ್" ವಚನದ ಉನ್ನತ ಉದ್ದೇಶ

ವಿವಾದಗೊಳ್ಳಲಾದ "ಖಾತಮುನ್ನಬಿಯ್ಯೀನ್" ಎಂಬ ವಚನದ ವಿವರಣೆಯನ್ನೀಯಲು ಈಗ ನಾನು ಬಯಸುತ್ತೇನೆ. ಈ ವಚನದ ತಪ್ಪಾದ ವ್ಯಾಖ್ಯಾನದಿಂದಾಗಿ

ನಮ್ಮ ವಿರೋಧಿಗಳು ಪ್ರವಾದಿತ್ವದ ಬಾಗಿಲು ಮುಚ್ಚಿದೆಯೆಂದು ಹೇಳುತ್ತಾರೆ. ಈ ಆಯತ್ ಮುಹಮ್ಮದ್ ಪೈಗಂಬರರ ಉನ್ನತವಾದ ಸ್ಥಾನವನ್ನು ಬಹಿರಂಗಗೊಳಿಸುವುದರೊಂದಿಗೆ ಅವರನ್ನು ನಬಿಗಳ ಶಿಲ್ಪಿ ಎಂದು ಕರೆಯಬಹುದಾದ ರೀತಿಯಲ್ಲಿ ವಿವರಿಸುತ್ತದೆ. ಪವಿತ್ರ ಖುರ್‌ಆನ್ ಈ ರೀತಿ ಹೇಳಿದೆ:

ما كان محمد ابا احد من رجالكم و لكن
رسول الله وخاتم النبيين

"ಮುಹಮ್ಮದ್ ನಿಮ್ಮ ಪೈಕಿ ಯಾವನೇ ಪುರುಷನ ಪಿತನಲ್ಲ; ಆದರೆ ಅವರು ಅಲ್ಲಾಹನ ಸಂದೇಶವಾಹಕ ಹಾಗೂ ಖಾತಮುನ್ನಬಿಯ್ಯೀನ್ ಆಗಿರುವರು" (33 : 41).

## ಆಯತ್ "ಖಾತಮುನ್ನಬಿಯ್ಯೀನ್" ಅವತೀರ್ಣವಾದ ಸಂದರ್ಭ

ಖಾತಮುನ್ನಬಿಯ್ಯೀನ್ ಎಂಬ ವಚನದ ವ್ಯಾಖ್ಯಾನ ನೀಡುವ ಮೊದಲು ಈ ವಚನ ಅವತೀರ್ಣವಾದುದರ ಕಾರಣ ಮತ್ತು ಅದರ ಚಾರಿತ್ರಿಕ ಹಿನ್ನೆಲೆಯನ್ನು ನೋಡುವುದು ಪ್ರಯೋಜನಕಾರಿಯಾಗುವುದು. ಹಝ್ರತ್ ಮುಹಮ್ಮದ್ ಪೈಗಂಬರರು ಮಕ್ಕಾನಗರದಲ್ಲಿರುವಾಗಲೇ ಅವರಿಗೆ ಹಝ್ರತ್ ಖದೀಜಾ (ರ. ಅ.) ರ ಹೊಟ್ಟೆಯಲ್ಲಿ ಜನಿಸಿದ ಪುರುಷ ಸಂತಾನಗಳೆಲ್ಲಾ ಮೃತರಾದುವು. ಆ ಸಮಯದಲ್ಲಿ ಮಕ್ಕಾದ ದುಷ್ಟರಾದ ಅವಿಶ್ವಾಸಿಗಳು ಅವರನ್ನು ಹೀಯಾಳಿಸಿ ಅವರನ್ನು ಪುರುಷ ಸಂತಾನಹೀನನೆಂದು ಅವಹೇಳನ ಮಾಡುತ್ತಾ ಅವರ ಧರ್ಮವು ಅವರೊಂದಿಗೆ ನಾಶಹೊಂದುವುದೆಂದು ಹೇಳುತ್ತಿದ್ದರು. ಆಗ ಅಲ್ಲಾಹನು ಈ ಕೆಳಗಿನ ವಚನಗಳನ್ನು ಅವತೀರ್ಣಗೊಳಿಸಿದನು:

انا اعطينٰك الكوثر فصل لربك وانحر
ان شانئك هو الابتر

"ಓ ಮುಹಮ್ಮದ್, ನಾವು ನಿನಗೆ ಮಹತ್ತಾದ ಕೊಡುಗೆಗಳನ್ನು ನೀಡಿರುವೆವು. ನೀವು ಈ ಬಹುಮಾನಗಳಿಗೆ ಕೃತಜ್ಞತೆಯಿಂದ ನಿನ್ನ ದೇವನನ್ನು ಆರಾಧಿಸು ಮತ್ತು ದೇವನ ಮಾರ್ಗದಲ್ಲಿ ಬಲಿದಾನಗಳನ್ನು ಮಾಡು. ನೀನು ಖಂಡಿತವಾಗಿಯೂ ಅಭಿವೃದ್ಧಿ ಹೊಂದುವೆ. ನಿನ್ನ ವಿರೋಧಿ ನಿಸ್ಸಂತಾನನಾಗುವನು." (108:2–4)

ಅನಂತರ ಪೈಗಂಬರರು ಮದೀನಕ್ಕೆ ವಲಸೆ ಹೋದರು. ಅಲ್ಲಿಗೆ ಹೋದ ನಂತರ ದತ್ತು ಪುತ್ರನಿಗೆ ಸಂಬಂಧಿಸಿ ಅಲ್ಲಾಹನಿಂದ ಬಂದ ಆಜ್ಞೆಯ ಪ್ರಕಾರ ತಾನು ದತ್ತು ಪುತ್ರನಾಗಿ ಸ್ವೀಕರಿಸಿದ, ಹಿಂದೆ ಗುಲಾಮನಾಗಿದ್ದು ಅನಂತರ ಸ್ವಾತಂತ್ರ್ಯವನ್ನು ಗಳಿಸಿದ ಝೈದ್ ಬಿನ್ ಹಾರಿಸ್‌ರನ್ನು ತನ್ನ ದತ್ತು ಪುತ್ರನಲ್ಲವೆಂದೂ ಆ ರೀತಿ ದತ್ತು ಪುತ್ರನನ್ನಾಗಿ ಯಾರನ್ನಾದರೂ ಮಾಡುವುದು ನಿಷಿದ್ಧವೆಂದೂ ಘೋಷಿಸಿದರು. (ಸೂರ ಅಹ್‌ಝಾಬ್: 5–7). ಈ ಘೋಷಣೆಯ ದುರುಪಯೋಗವನ್ನು ಮಾಡಿ ನೀಚರಾದ ಅವಿಶ್ವಾಸಿಗಳು ತಮ್ಮ ಹಿಂದಿನ ಅವಹೇಳನವನ್ನು ಪುನರಾವರ್ತಿಸಿದರು: ಪೈಗಂಬರರ ಗಂಡುಮಕ್ಕಳು ಮೊದಲೇ ಮೃತರಾಗಿರುವರು; ಈ ದತ್ತು ಪುತ್ರರ ಪರಂಪರೆಯೂ ಕೊನೆಗೊಂಡಿತು. ಹಾಗೆ "ಪುರುಷಸಂತಾನ ಹೀನ" ಎಂಬ ಅವಹೇಳನದಲ್ಲಿ ಅವರು ಮುಂದುವರಿದರು. ಆಗ ಆಯತ್ ಖಾತಮುನ್ನಬಿಯ್ಯೀನ್ ಅವತೀರ್ಣವಾಯಿತು. ಅದರ ತಾತ್ಪರ್ಯ, ಮುಹಮ್ಮದ್ ಪೈಗಂಬರರಿಗೆ ಗಂಡು ಮಕ್ಕಳು ಇಲ್ಲವಾದರೂ ಅವರು ದೇವರ ರಸೂಲ (ಸಂದೇಶವಾಹಕ)ರಾಗಿರುವರು. ಆದುದರಿಂದ ಅವರು ಲೆಕ್ಕವಿಲ್ಲದಷ್ಟು ಆಧ್ಯಾತ್ಮಿಕ ಸಂತತಿಗಳ ತಂದೆಯಾಗಿರುವರು. ಅಲ್ಲದೆ ಸಾಮಾನ್ಯ ರಸೂಲರಿಗಿಂತ ಅವರಿಗೆ ಇನ್ನೂ ದೊಡ್ಡ ಸ್ಥಾನವಿದೆ. ಅವರು ಖಾತಮುನ್ನಬಿಯ್ಯೀನ್ ಆಗಿರುವರು. ಅವರ ರೆಕ್ಕೆಗಳ ಅಡಿಯಲ್ಲಿ ನಬಿ ಮತ್ತು ರಸೂಲರು ಪೋಷಿಸಲ್ಪಡುವರು. ಅವರು ಖಂಡಿತವಾಗಿಯೂ ಅಬ್‌ತರ್ (ಪುರುಷ ಸಂತಾನ ಹೀನ) ಅಲ್ಲ. ಅವರೊಂದು ಆಧ್ಯಾತ್ಮಿಕ ಪರಂಪರೆಯ ಸ್ಥಾಪಕರೂ ಮೊದಲು ಬಂದವರ ಮತ್ತು ಕೊನೆಗೆ ಬರುವವರ ನಾಯಕರೂ ಆಗಿರುವರು.

## ಖಾತಮುನ್ನಬಿಯ್ಯೀನ್ ವಚನಕ್ಕೆ ನೀಡಬಹುದಾದ ಎರಡು ಅರ್ಥಗಳು

ಮೇಲೆ ಬರೆದ ಸನ್ನಿವೇಶದಲ್ಲಿ ಖಾತಮುನ್ನಬಿಯ್ಯೀನ್ ವಚನ ಅವತೀರ್ಣವಾಯಿತು. ಆ ಮಹತ್ತಾದ ವಚನದಲ್ಲಿರುವ ಉನ್ನತ ಶಿಖರಗಳಲ್ಲಿ ಖಾತಮುನ್ನಬಿಯ್ಯೀನ್ ಎಂಬ ಶಬ್ದವು ಅತ್ಯುನ್ನತ ಶಿಖರವಾಗಿದೆ.

ಆದರೆ ಮುಹಮ್ಮದ್ ಪೈಗಂಬರರ ಉನ್ನತ ಸ್ಥಾನವನ್ನು ಸೂಚಿಸಲು ಪ್ರಯೋಗಿಸಲಾದ ಈ ಶಬ್ದವನ್ನು ಅಲ್ಲಾಹನ ಅನುಗ್ರಹಗಳನ್ನು ಕೊನೆಗೊಳಿಸುವ ಅರ್ಥದಲ್ಲಿ ವ್ಯಾಖ್ಯಾನಿಸುವುದು ಬಹಳ ಖೇದಕರವಾಗಿದೆ. ಈ ಶಬ್ದವನ್ನು ಪ್ರಯೋಗಿಸಿ ಮುಹಮ್ಮದ್ ಪೈಗಂಬರರ ನಂತರ ಪ್ರವಾದಿತ್ವದ ಕಾಲುವೆ ಸ್ಥಿರವಾಗಿ ಒಣಗಿ ಹೋಯಿತೆಂದು ವ್ಯಾಖ್ಯಾನಿಸಲಾಗುತ್ತಿದೆ. ಮುಹಮ್ಮದ್ ಪೈಗಂಬರರ ನಂತರ ಅವರ ಶಿಷ್ಯ, ಅನುಯಾಯಿ ಅಥವಾ ಸೇವಕನಾದರೂ ಸಹ ನಬಿಯಾಗಲಾರರೆಂದು ಹೇಳಲಾಗುತ್ತದೆ. ನಾವು ಇನ್ನು ಮುಂದೆ ವಿವರಿಸುವ ಹಾಗೆ ಈ ವ್ಯಾಖ್ಯಾನ ಖಂಡಿತವಾಗಿಯೂ ತಪ್ಪಾಗಿದೆ. ಅರಬಿ ಭಾಷೆಯ ನಿಯಮಗಳ ಪ್ರಕಾರವೂ ಈ ವಚನದಲ್ಲಿ ಅಡಕವಾಗಿರುವ ಶಬ್ದಗಳ ಸರಿಯಾದ ಅರ್ಥಗಳ ಪ್ರಕಾರವೂ ಈ ವಚನ ಅವತೀರ್ಣವಾದ ಸನ್ನಿವೇಶದ ಪ್ರಕಾರವೂ ಈ ವಚನಕ್ಕೆ ಕೇವಲ ಎರಡೇ ಎರಡು ಅರ್ಥ ನೀಡಲು ಸಾಧ್ಯ. ಹಾಗೆ ನೀಡಬಹುದಾದ ಅರ್ಥ ಇವುಗಳಾಗಿವೆ:

1. ಓ ಜನರೇ, ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವ ಸಲ್ಲಮ್) ನಿಮ್ಮ ಪೈಕಿ ಯಾವ ಪುರುಷನ ತಂದೆಯೂ ಅಲ್ಲ. ಎಂದರೆ ಅವರು ಪುರುಷ ಸಂತಾನಗಳ ತಂದೆಯಾಗಿಲ್ಲ. ಆದರೆ ಅವರು ಅಲ್ಲಾಹನ ರಸೂಲರಾಗಿರುವ ಕಾರಣ ವಿಶ್ವಾಸಿಗಳ ಆಧ್ಯಾತ್ಮಿಕ ತಂದೆಯಾಗಿದ್ದಾರೆ. ಅವರು ನಬಿಗಳ ಮೊಹರು (ಮುದ್ರೆ) ಆಗಿರುವರು. ಹೀಗೆಯೂ ಅವರು ನಬಿಗಳಿಗೆ ತಂದೆಯಂತಿರುವರು. ಅವರ ಅಂಗೀಕಾರದ ಸೂಚಕವಾದ ಮುದ್ರೆ ದೊರೆಯದೆ ಯಾವ ನಬಿಯೂ ಸತ್ಯವಂತರಾಗಲು ಸಾಧ್ಯವಿಲ್ಲ.

ಅಥವಾ

2. ಓ ಜನರೇ, ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವ ಸಲ್ಲಮ್) ನಿಮ್ಮ ಪೈಕಿ ಯಾವ ಪುರುಷನ ತಂದೆಯೂ ಅಲ್ಲ. ಆದರೆ ಅವರು ರಸೂಲರಾಗಿರುವ ಕಾರಣ ಸತ್ಯ ವಿಶ್ವಾಸಿಗಳ ತಂದೆಯಾಗಿರುವರು. ಪ್ರವಾದಿತ್ವದ ಎಲ್ಲಾ ಅನುಗ್ರಹಗಳು ಅವರಿಗೆ ಸಂಪೂರ್ಣವಾಗಿ ನೀಡಲ್ಪಡುವ ಕಾರಣ ಅವರು ಅತ್ಯಂತ ಶ್ರೇಷ್ಠ ಪ್ರವಾದಿಯಾಗಿದ್ದು ಬಹಳ ಮಹತ್ವಶಾಲಿಯಾಗಿದ್ದಾರೆ.

### "ಲಾಕಿನ್" ಎಂಬ ಶಬ್ದದ ವಿವರಣೆ

ಅರಬಿ ಭಾಷಾ ಶಾಸ್ತ್ರದ ಪ್ರಕಾರ ಮೇಲಿನ ಎರಡು ಅರ್ಥಗಳೂ ಸರಿಯಾಗಿವೆ. ಆದರೆ ಮೊದಲನೆಯ ಅರ್ಥ ಹೆಚ್ಚು ಸರಿಯಾಗಿದೆ ಮತ್ತು ಈ ವಚನ ಅವತೀರ್ಣವಾದ ಸಂದರ್ಭಕ್ಕೆ ಅನುಯೋಜ್ಯವಾಗಿದೆ. ಆದರೆ ಈ ಎರಡು ಅರ್ಥಗಳಲ್ಲಿ ಯಾವುದನ್ನು ತೆಗೆದುಕೊಂಡರೂ ಈಗಿನ ಕಾಲದ ಅಹ್ಮದಿಯೇತರ ಮತಪಂಡಿತರ ವ್ಯಾಖ್ಯಾನ ಸರಿಯೆಂದು ಕಂಡುಬರುವುದಿಲ್ಲ. ಈ ವಚನದಿಂದ ಯಾವರೀತಿಯಲ್ಲೂ ಮುಹಮ್ಮದ್ ಪೈಗಂಬರರ ನಂತರ ಎಲ್ಲಾ ರೀತಿಯ ಪ್ರವಾದಿತ್ವದ ಬಾಗಿಲು ಪೂರ್ಣವಾಗಿ ಮುಚ್ಚಿದೆ ಎಂಬುದಕ್ಕೆ ಯಾವುದೇ ಆಧಾರ ದೊರೆಯುವುದಿಲ್ಲ.

ಈ ವಚನದ ಆಂತರಿಕ ಸಾಕ್ಷ್ಯವಾಗಿ ಈ ವಚನದ ಅರ್ಥವನ್ನು ವ್ಯಕ್ತಗೊಳಿಸುವ ಕೀಲಿ ಕೈಗಳು ಎರಡು ಶಬ್ದಗಳಾಗಿವೆ. ಒಂದು "ಲಾಕಿನ್" ಎಂಬ ಶಬ್ದ. ಇನ್ನೊಂದು "ಖಾತಮ್" ಎಂಬ ಶಬ್ದ. ಈ ಎರಡು ಶಬ್ದಗಳ ಸರಿಯಾದ ವ್ಯಾಖ್ಯಾನವಿಲ್ಲದೆ ಈ ವಚನದ ನಿಜವಾದ ಅರ್ಥ ತಿಳಿಯಲು ಸಾಧ್ಯವಿಲ್ಲ. "ಲಾಕಿನ್" ಎಂಬ ಶಬ್ದ ಅರಬಿ ವ್ಯಾಕರಣ ನಿಯಮಗಳ ಪ್ರಕಾರ ಒಂದು ವಾಕ್ಯ ಅಥವಾ ಒಂದು ನುಡಿಗಟ್ಟಿಗೆ ವಿರುದ್ಧವಾದ ಸಂಗತಿಗಳನ್ನು ನಿರೂಪಿಸಲು ಪ್ರಯೋಗಿಸಲ್ಪಡುತ್ತಿದೆ. ಅಥವಾ ಮೊದಲು ಹೇಳಿದ ವಿಷಯದ ಕುರಿತು ಉಂಟಾಗಬಹುದಾದ ಸಂಶಯವನ್ನು ನಿವಾರಿಸಲು "ಲಾಕಿನ್" ಎಂಬ ಶಬ್ದ ಪ್ರಯೋಗಿಸಿ ಇನ್ನೊಂದು ವಾಕ್ಯದಿಂದ ಆ ಸಂಶಯವನ್ನು ನಿವಾರಿಸಲಾಗುತ್ತದೆ. ಉದಾಹರಣೆಗೆ, ಒಂದು ವಾಕ್ಯದಲ್ಲಿ ಯಾವುದಾದರೂ ನಕಾರಾತ್ಮಕ ವಿಷಯ ನಿರೂಪಿಸಲ್ಪಟ್ಟರೆ "ಲಾಕಿನ್" ಎಂಬ ಶಬ್ದ ಪ್ರಯೋಗಿಸಿ ಅದರ ವಿರುದ್ಧವಾದ ಸಕಾರಾತ್ಮಕ ವಿಷಯವನ್ನು ನಿರೂಪಿಸಲಾಗುತ್ತದೆ. ಯಾವುದಾದರೂ ವಾಕ್ಯದಲ್ಲಿ ಸಕಾರಾತ್ಮಕ ವಿಷಯ ಬಂದಿದ್ದರೆ ಅದರ ವಿರುದ್ಧವಾದ ಮಾತನ್ನು "ಲಾಕಿನ್" ಎಂಬ ಶಬ್ದ ಉಪಯೋಗಿಸಿ ನಕಾರಾತ್ಮಕವಾಗಿ ಪ್ರಯೋಗಿಸಲಾಗುತ್ತದೆ. ಉರ್ದು ಭಾಷೆಯಲ್ಲೂ ಹೆಚ್ಚುಕಮ್ಮಿ ಅರಬಿ ಭಾಷೆಯ ಪ್ರಕಾರವೇ "ಲಾಕಿನ್" ಶಬ್ದ ಲೇಕಿನ್ ಎಂದು ಪ್ರಯೋಗಿಸಲಾಗುತ್ತದೆ. ಆದುದರಿಂದ ಉರ್ದು ಭಾಷೆಯ ಉದಾಹರಣೆಯೊಂದಿಗೆ ಈ ಶಬ್ದವನ್ನು ಹೆಚ್ಚು ಸುಲಭವಾಗಿ ಅರ್ಥವಿಸಬಹುದಾಗಿದೆ. ಉದಾಹರಣೆಗೆ, ಉರ್ದು ಭಾಷೆಯಲ್ಲಿ ಹೇಳುತ್ತಾರೆ: "ಹಮೀದ್ ಬದನ್ ಕಾ ಕಮ್‌ಝೋರ್ ತೊ ಹೈ ಲೇಕಿನ್ ಬಹಾ

ದುರ್ ಹೈ". (ಹಮಿೂದ್ ಶರೀರದಲ್ಲಿ ಬಲಹೀನನಾಗಿದ್ದಾನೆ; ಆದರೆ ಶೂರನಾಗಿದ್ದಾನೆ). ಇಲ್ಲಿ ಶರೀರದಲ್ಲಿ ಬಲಹೀನನಾಗಿದ್ದಾನೆ ಎಂಬುದರ ವಿರುದ್ಧವಾಗಿ ಲೇಕಿನ್ ಶಬ್ದ ಪ್ರಯೋಗಿಸಿ "ಶೂರ"ನೆಂಬ ಶಬ್ದ ತರಲಾಗಿದೆ. ಹಮೀದನು ಶರೀರದಲ್ಲಿ ಬಲಹೀನನಾದುದರಿಂದ ಆತನ ಬಗ್ಗೆ ತಲೆದೋರಬಹುದಾದ ಸಂಶಯವನ್ನು ಎಂದರೆ ಪ್ರಾಯಶಃ ಆತನು ಬಲಹೀನತೆಯ ಕಾರಣ ಶೂರನಾಗಿರಲಿಕ್ಕಿಲ್ಲ ಎಂಬ ಸಂಶಯವನ್ನು ನಿವಾರಿಸಲಿಕ್ಕಾಗಿ ಲೇಕಿನ್ (ಆದರೆ) ಎಂಬ ಶಬ್ದ ಪ್ರಯೋಗಿಸಿ ಈ ಸಂಶಯವನ್ನು ನಿವಾರಿಸಲಾಗಿದೆ. ಇದೇ ಪ್ರಕಾರ ಹೇಳುತ್ತಾರೆ: "ಸಬ್ ಲೋಗ್ ಉಠ್‌ಗಯೇ ಲೇಕಿನ್ ಸಈದ್ ನಹೀಂ ಉಠಾ" (ಎಲ್ಲರೂ ಎದ್ದುಹೋದರು ಆದರೆ ಸಈದ್ ಏಳಲಿಲ್ಲ.) ಇಲ್ಲಿ ಎಲ್ಲರೂ ಎದ್ದುಹೋದರು ಎಂಬ ವಾಕ್ಯದಿಂದ ಯಾರೂ ಕುಳಿತಿಲ್ಲ ಎಂಬ ಸಂಶಯ ನಿವಾರಣೆಗಾಗಿ ಲೇಕಿನ್ (ಆದರೆ) ಎಂಬ ಶಬ್ದ ಉಪಯೋಗಿಸಿ ಎಲ್ಲರೂ ಎದ್ದುಹೋದರೂ ಸಈದ್ ಮಾತ್ರ ಎದ್ದಿಲ್ಲ ಈಗಲೂ ಆತನು ಕುಳಿತೇ ಇದ್ದಾನೆ ಎಂಬ ಸಂಗತಿ ವ್ಯಕ್ತಗೊಳಿಸಲಾಗಿದೆ. ಈ ಎಲ್ಲಾ ಉದಾಹರಣೆಗಳಿಂದ ತಿಳಿಯುವುದೇನೆಂದರೆ ಒಂದು ವಾಕ್ಯದ ನಿರೂಪಣೆಯಿಂದ ಉಂಟಾಗಬಹುದಾದ ಸಂಶಯವನ್ನು ಲಾಕಿನ್ (ಲೇಕಿನ್) ಎಂಬ ಶಬ್ದದ ನಂತರದ ವಾಕ್ಯದಿಂದ ನಿವಾರಿಸಲಾಗುತ್ತದೆ. ಅಥವಾ ಒಂದು ಸಂಗತಿಯ ವಿರುದ್ಧವಾದ ಸಂಗತಿ ಸೂಚಿಸಲು ಸಹ ಈ ಶಬ್ದ ಉಪಯೋಗಿಸಲಾಗುತ್ತಿದೆ. ಇಂತಹ ಉದಾಹರಣೆಗಳನ್ನು ಅರಬಿ ಭಾಷೆಯಲ್ಲಿ "ಇಸ್ತಿದ್ರಾಕ್" ಎಂದು ಕರೆಯುತ್ತಾರೆ. ಅರಬಿ ನಿಘಂಟುಗಳಲ್ಲಿ "ಲಾಕಿನ್" ಶಬ್ದ ಇಸ್ತಿದ್ರಾಕ್‌ನ ಅರ್ಥದಲ್ಲಿ ಪ್ರಯೋಗಿಸಲಾಗುತ್ತಿದೆ ಎಂದು ಬರೆಯಲಾಗಿದೆ.

ನೀವು ಚೆನ್ನಾಗಿ ಆಲೋಚಿಸಿ ತಿಳಿದುಕೊಳ್ಳಿರಿ. ಖಾತಮನ್ನಬಿಯ್ಯೀನ್ ಶಬ್ದದ ಅರ್ಥ ನಬಿಗಳ ಸಮಾಪ್ತಕ ಎಂದು ನಮ್ಮ ವಿರೋಧಿಗಳ ಹಾಗೆ ಅರ್ಥ ಮಾಡಿದರೆ, ಈ ವಚನದಲ್ಲಿ ಲಾಕಿನ್ ಶಬ್ದ ಅರ್ಥಶೂನ್ಯವಾಗುತ್ತದೆ ಮತ್ತು ಈ ವಾಕ್ಯವೂ ಅರ್ಥಶೂನ್ಯವಾಗುತ್ತದೆ (ಅಲ್ಲಾಹು ನಮ್ಮನ್ನು ಈ ರೀತಿ ಮಾಡುವುದರಿಂದ ರಕ್ಷಿಸಲಿ). ಏಕೆಂದರೆ ಖಾತಮನ್ನಬಿಯ್ಯೀನ್ ಶಬ್ದಕ್ಕೆ ನಮ್ಮ ವಿರೋಧಿಗಳು ನೀಡುವ ಅರ್ಥವನ್ನು ತೆಗೆದುಕೊಂಡರೆ ಈ ವಚನದ ಅರ್ಥ ಹೀಗಾಗುತ್ತದೆ:

> ಮುಹಮ್ಮದ್ ಪೈಗಂಬರ್ ನಿಮ್ಮ ಪೈಕಿ ಯಾರ ತಂದೆಯೂ ಅಲ್ಲ; ಆದರೆ ಅವರು ನಬಿಗಳ ಸಮಾಪ್ತಕರಾಗಿದ್ದಾರೆ.

ನೀವು ಚೆನ್ನಾಗಿ ಆಲೋಚಿಸಿರಿ. ಸರ್ವಜ್ಞನೂ ಅಪ್ರತಿಮ ಬುದ್ಧಿವಂತನೂ ಆದ ಅಲ್ಲಾಹನ ಮಾತು ಬಿಡಿ, ಸಾಮಾನ್ಯ ಬುದ್ಧಿಶಕ್ತಿಯುಳ್ಳ ಒಬ್ಬನು ಸಹ ಇಂತಹ ಹೊಂದಾಣಿಕೆಯಿಲ್ಲದ ವಾಕ್ಯವನ್ನು ನುಡಿಯಲಾರ. ಇಲ್ಲಿ ಲಾಕಿನ್ ಎಂಬ ಶಬ್ದದ ಮೊದಲಿನ ವಾಕ್ಯವೂ ಅನಂತರದ ವಾಕ್ಯವೂ ಯಾವುದೇ ಸಾಮರಸ್ಯವಿಲ್ಲದೆ ಪ್ರಯೋಗಿಸಲ್ಪಟ್ಟ ಹಾಗಾಗುತ್ತದೆ. ಹಿಂದಿನ ವಾಕ್ಯದಿಂದ ಉಂಟಾಗುವ ಸಂಶಯವನ್ನು ದೂರೀಕರಿಸುವ ಬದಲು ಅದನ್ನು ಇನ್ನಷ್ಟು ಬಲಪಡಿಸುವ ಹಾಗೆ ಮುಂದಿನ ವಾಕ್ಯದ ಅರ್ಥವಾಗುತ್ತದೆ. ಇದು ಈ ರೀತಿಯ ವಾಕ್ಯದಂತೆ ಆಗುತ್ತದೆ:

"ಸಾರೇ ಲೋಗ್ ಉಠ್‌ಗಯೇ ಲೇಕಿನ್ ಸಈದ್ ಭೀ ಉಠ್‌ಗಯಾ"

(ಎಲ್ಲರೂ ಎದ್ದುಹೋದರು ಆದರೆ ಸಈದನೂ ಎದ್ದುಹೋದನು.)

ಒಬ್ಬ ತಿಳುವಳಿಕೆಯುಳ್ಳ ವ್ಯಕ್ತಿ ಈ ರೀತಿಯ ವಾಕ್ಯ ನುಡಿಯುವನೇ? ಬಹಳ ಅರ್ಥವತ್ತಾದ ವಚನಗಳನ್ನು ಹೊಂದಿರುವ ಪವಿತ್ರ ಖುರ್‌ಆನಿನಲ್ಲಿ ಈ ರೀತಿ ವಾಕ್ಯ ಬರಲು ಸಾಧ್ಯವೇ? ನೀವು ಅಲ್ಲಾಹನಿಗಾಗಿ ಚಿಂತಿಸಿರಿ; ನ್ಯಾಯಯುತವಾಗಿ ವರ್ತಿಸಿ ಹೇಳಿರಿ: ನಮ್ಮ ವಿರೋಧಿಗಳು ಹೇಳುವ ಅರ್ಥವನ್ನು "ಲಾಕಿನ್" ಪದ ಸೂಚಿಸಲು ಸಾಧ್ಯವೇ? ನಾವು ಹೇಳುವ ಅರ್ಥ ಈ ವಚನದಲ್ಲಿರುವ ಲಾಕಿನ್ ಪದಕ್ಕೆ ಅನುಯೋಜ್ಯವಾಗಿದೆ. ಈ ವಚನವನ್ನು ನಾವು ಅರ್ಥವಿಸುವ ಪ್ರಕಾರ ಅರ್ಥವಿಸುವುದರಿಂದ ಯಾವುದೇ ಸಮಸ್ಯೆಗಳು ತಲೆದೋರುವುದಿಲ್ಲ. ನಾವು ನೀಡುವ ಅರ್ಥದ ಸಾರ ಇದಾಗಿದೆ:

ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ನಿಮ್ಮ ಪೈಕಿ ಯಾವ ಪುರುಷನ ತಂದೆಯೂ ಅಲ್ಲ; ಆದರೆ ಅವರು ಸತ್ಯ ವಿಶ್ವಾಸಿಗಳ ಮತ್ತು ನಬಿಗಳ ಆಧ್ಯಾತ್ಮಿಕ ತಂದೆಯಾಗಿರುವರು.

ಒಂದು ಉತ್ತಮವಾದ ಉಂಗುರದಲ್ಲಿ ಸರಿಯಾದ ಅಳತೆಯ ವಜ್ರದ ಕಲ್ಲು ಏನೂ ಎಡೆಬಿಡದೆ ಹೊಂದಿ ಕೊಳ್ಳುವಂತೆ ನಾವು ನೀಡಿದ ಅರ್ಥದಲ್ಲಿ "ಲಾಕಿನ್" ಎಂಬ ಶಬ್ದ ಈ ವಚನದಲ್ಲಿ ಅನುಯೋಜ್ಯವಾದ ಅರ್ಥ ವನ್ನು ನೀಡುತ್ತದೆ.

## ಖಾತಮ್ ಶಬ್ದದ ವ್ಯಾಖ್ಯಾನ

ಈ ವಚನದ ಪರಿಗಣನೆಗೆ ಅರ್ಹವಾದ ಎರಡ ನೆಯ ಶಬ್ದ ಖಾತಮ್ ಆಗಿದೆ. ಸಾಧಾರಣವಾಗಿ ಈ ಶಬ್ದ **ಖಾತಮ್** ಎಂದು ತ ಅಕ್ಷರದ ಅಕಾರದೊಂದಿಗೆ ಪವಿತ್ರ ಖುರ್‌ಆನಿನಲ್ಲಿ ಪ್ರಯೋಗಿಸಲಾಗಿದ್ದರೂ ತ ಅಕ್ಷ ರದ ಇಕಾರದೊಂದಿಗೆ ಖಾತಿಮ್ ಎಂದು ಸಹ ಈ ಶಬ್ದ ಅಪರೂಪವಾಗಿ ಓದಲಾಗುತ್ತಿದೆ. ಈ ಶಬ್ದವನ್ನು ಖಾತಮ್ ಎಂದು ಉಚ್ಚರಿಸಿದರೂ ಖಾತಿಮ್ ಎಂದು ಉಚ್ಚರಿಸಿದರೂ ಈ ಶಬ್ದದ ಅರ್ಥ ಪ್ರವಾದಿಗಳ ಸಮಾಪ್ತಕ ಎಂದಾಗುವುದಿಲ್ಲ. ಇದರ ವಿವರಣೆ ಈ ರೀತಿಯಾಗಿದೆ: ಅರಬಿ ನಿಘಂಟುಗಳಲ್ಲಿ ವಿವರಿಸಿದ ಪ್ರಕಾರ ಖಾತಮ್ ಎಂಬ ಶಬ್ದ "ತ"ದ ಅಕಾರದೊಂದಿಗೆ "ಮುದ್ರೆ" ಎಂಬ ಅರ್ಥದಲ್ಲಿ ಪ್ರಯೋ ಗಿಸಲ್ಪಡುತ್ತಿದೆ. ಅರಬಿ ಭಾಷೆಯ ಪ್ರಸಿದ್ಧ ನಿಘಂಟು ತಾಜುಲ್ ಅರೂಸ್ ಎಂಬ ಗ್ರಂಥದಲ್ಲಿ ಅರಗು, ಮಣ್ಣು, ಅಥವಾ ಕಾಗದದ ಮೇಲೆ ಒತ್ತಲಾಗುವ ಮುದ್ರೆ ಎಂಬರ್ಥ ಬರೆಯಲಾಗಿದೆ. ಪೈಗಂಬರರ ವಚನ ಸಂಗ್ರಹವಾದ ಹದೀಸಿನಿಂದ ನಮಗೆ ತಿಳಿದು ಬರುವುದೇನೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು ರೋಮಿನ ರಾಜ ನಾದ ಕೈಸರನಿಗೂ ಇರಾನಿನ ರಾಜನಾದ ಕಿಸ್ರಾನಿಗೂ ಧರ್ಮ ಸಂದೇಶವನ್ನು ತಲುಪಿಸಲು ಬರೆದ ಪತ್ರಗಳಲ್ಲಿ ತನ್ನ ದೃಢೀಕರಣ ಮುದ್ರೆ ಒತ್ತಿದ್ದರು. ಈ ಅರ್ಥದ ಪ್ರಕಾರ ಈ ಖಾತಮನ್ನಬಿಯ್ಯೀನ್ ವಚನದ ಅರ್ಥ ಹೀಗಾಗುತ್ತದೆ:

"ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ನಿಮ್ಮ ಪೈಕಿ ಯಾವನೇ ಪುರುಷನ ಶಾರೀರಿಕ ತಂದೆಯಲ್ಲ ವಾದರೂ ಅವರು ರಸೂಲಾಗಿರುವ ಕಾರಣ ಸತ್ಯ ವಿಶ್ವಾಸಿಗಳ ಆಧ್ಯಾತ್ಮಿಕ ಪಿತರಾಗಿರುವರು. ಅಲ್ಲದೆ ಅವರು ನಬಿಗಳ ಮುದ್ರೆಯೂ ಆಗಿರುವರು. ಇನ್ನು ಮುಂದೆ ಅವರ ಮುದ್ರೆ ಮತ್ತು ದೃಢೀಕರಣ ಲಭಿಸಿದ ವರೇ ನಬಿಯಾಗಲು ಸಾಧ್ಯ."

ಈ ಅರ್ಥ ಎಷ್ಟು ಸ್ಪಷ್ಟ ಮತ್ತು ಸುವ್ಯಕ್ತವಾಗಿದೆ ಯೆಂದು ನೋಡಿರಿ. ಇದನ್ನು ಒಬ್ಬ ಕಿರಿ ವಯಸ್ಸಿನವ ಸಹ ಸುಲಭದಲ್ಲಿ ಗ್ರಹಿಸಬಲ್ಲ. ಈ ಅರ್ಥದ ಫಲ ಮುಹಮ್ಮದ್ ಮುಸ್ತಫಾ (ಸ) ರ ಉನ್ನತ ಮಹತ್ವ ಎಷ್ಟು ವ್ಯಕ್ತಗೊಳ್ಳುತ್ತದೆಯೆಂಬುದನ್ನು ನೋಡಿರಿ. ಅವರು ಸಾಮಾನ್ಯ ರಸೂಲರಲ್ಲ; ಅವರ ಮುದ್ರೆ ನಬಿ ಗಳನ್ನು ಕೆತ್ತುವ ಸಾಮರ್ಥ್ಯವುಳ್ಳದ್ದಾಗಿದೆ. ಅವರನ್ನು ಪರಿಪೂರ್ಣವಾಗಿ ಅನುಸರಿಸುವುದರಿಂದ ಅವರ ಆಧ್ಯಾ ತ್ಮಿಕ ಶಕ್ತಿಯ ಫಲವಾಗಿ ಒಬ್ಬ ವ್ಯಕ್ತಿ ನುಬುವ್ವತ್ತಿನ ಸ್ಥಾನಗಳಿಸಲು ಶಕ್ತ. ಅವರು ಈ ರೀತಿ ನಬಿಗಳ ಆಧ್ಯಾತ್ಮಿಕ ಪಿತರಾಗಿದ್ದಾರೆ. ಈ ವಚನದಲ್ಲಿ ಒಂದು ಭಾಗದಲ್ಲಿ ಅವರನ್ನು ಶಾರೀರಿಕವಾಗಿ ಯಾವನೇ ಪುರು ಷನ ಪಿತನಲ್ಲವೆಂದು ಹೇಳಿ ಇನ್ನೊಂದು ಭಾಗದಲ್ಲಿ ಲಾಕಿನ್ (ಆದರೆ) ಎಂಬ ಶಬ್ದ ಪ್ರಯೋಗಿಸಿ ಅವರಿಗೆ ಆಧ್ಯಾತ್ಮಿಕ ಪುತ್ರರಿದ್ದಾರೆಂದು ಹೇಳಲಾಗಿದೆ. ಅನಂತರ ಇದಕ್ಕಿಂತ ಹೆಚ್ಚಾಗಿ ಅವರಿಗೆ ನಬಿಗಳನ್ನು ದೃಢೀಕರಿಸುವ ಮುದ್ರೆ ನೀಡಿ ಅವರನ್ನು ನಬಿಗಳ ಆಧ್ಯಾತ್ಮಿಕ ಪಿತನೆಂದೂ ಘೋಷಿಸಲಾಗಿದೆ. ಇದಲ್ಲದೆ, ಖಾತಮ್ ಎಂಬುದರ ಪರ್ಯಾಯ ಅರ್ಥ ಉಂಗುರ ಎಂದೂ ಆಗಿರುವುದರಿಂದ (ತಾಜುಲ್ ಅರೂಸ್ ನೋಡಿರಿ), ಉಂಗುರ ಸೌಂದರ್ಯಕ್ಕಾಗಿ ಉಪಯೋಗಿಸುವ ಕಾರಣ ಖಾತ ಮನ್ನಬಿಯ್ಯೀನ್ ಎಂಬುದಕ್ಕೆ ಸರ್ವ ನಬಿಗಳಿಗೆ ಅಭಿಮಾನಾರ್ಹವಾದ ಉನ್ನತ ಸುಂದರ ಸ್ಥಾನವನ್ನು ಪಡೆದವರು ಎಂಬರ್ಥವೂ ಇದೆ. ಈ ಅರ್ಥವೂ ಇಲ್ಲಿ ಅನುಯೋಜ್ಯವಾಗಿದೆ.

## ಖಾತಿಮ್ ಎಂಬ ಇನ್ನೊಂದು ಉಚ್ಚಾರ

ಖಾತಮ್ ಎಂಬ ಶಬ್ದ ಅಪರೂಪವಾಗಿ ಖಾತಿಮ್ ಎಂಬ ಉಚ್ಚಾರದೊಂದಿಗೂ ನಿವೇದಿತವಾಗಿದೆ. ಈ ಶಬ್ದ ವನ್ನು ಸಹ ಗಾಢವಾಗಿ ಪರಿಶೀಲಿಸಿದರೆ ಈ ಶಬ್ದ ಸಹ ನುಬುವ್ವತನ್ನು ಕೊನೆಗೊಳಿಸುವುದಿಲ್ಲ ಎಂದು ತಿಳಿದುಬರು

ತ್ತದೆ. ಖಾತಿಮುನ್ನಬಿಯ್ಯೀನ್ ಎಂಬುದರ ಅರ್ಥ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರಲ್ಲಿ ನುಬುವ್ವತ್ತಿನ ಎಲ್ಲಾ ಅನುಗ್ರಹಗಳೂ ಪರಿಪೂರ್ಣಗೊಂಡವು ಎಂದಾಗುತ್ತದೆ. ಅದರ ಅರ್ಥ ಅವರು ಶ್ರೇಷ್ಠ ನಬಿಗಳೆಂದಾಗುತ್ತದೆ. ಅದರ ಅರ್ಥ ನುಬುವ್ವತ್ತಿನ ಅನುಗ್ರಹವನ್ನು ಕೊನೆಗೊಳಿಸುವವ ಅಥವಾ ಒಂದು ಹರಿಯುವ ಕಾಲುವೆಯನ್ನು ಬತ್ತಿಸುವವ ಎಂದಾಗುವುದಿಲ್ಲ. ಅರಬಿ ಭಾಷೆಯ ಇನ್ನೊಂದು ಪ್ರಸಿದ್ಧ ನಿಘಂಟಾದ ಅಖ್‌ರಬುಲ್ ಮವಾರಿದ್ ನಲ್ಲಿ ಹೀಗೆ ಬರೆಯಲಾಗಿದೆ:

ختم الله له الخير اتمه

ಎಂದರೆ, ಒಬ್ಬ ವ್ಯಕ್ತಿಗೆ ಅಲ್ಲಾಹನು ಎಲ್ಲಾ ಒಳಿತನ್ನು ಅಂತ್ಯಗೊಳಿಸಿದನು ಅಂದರೆ ಅದನ್ನು ಸಂಪೂರ್ಣವಾಗಿ ನೀಡಿದನು ಎಂದರ್ಥ.

ಉರ್ದುಭಾಷೆಯಲ್ಲಿ "ಫುಲಾನ್ ಶಖ್‌ಸ್ ಪರ್ ಮುಸವ್ವರೀ ಕಾ ಹುನರ್ ಖತಮ್ ಹೈ" (ಆ ಮನುಷ್ಯನಲ್ಲಿ ಚಿತ್ರರಚನೆಯ ವಿದ್ಯೆ ಕೊನೆಗೊಂಡಿದೆ) ಎಂದರೆ ಅದರ ಅರ್ಥ ಆತನು ಚಿತ್ರರಚನೆಯಲ್ಲಿ ಅತ್ಯಧಿಕ ಪ್ರಾವೀಣ್ಯತೆಯನ್ನು ಗಳಿಸಿರುವನು ಎಂದಾಗಿದೆ. ಅದರ ಅರ್ಥ ಆತನು ಕೊನೆಯ ಚಿತ್ರಗಾರ; ಆ ಮೇಲೆ ಯಾರೂ ಚಿತ್ರಗಾರರು ಜನಿಸಲಾರರು ಎಂದಲ್ಲವೆಂದು ಸಾಮಾನ್ಯ ಶಾಲೆಯ ಹುಡುಗರಿಗೂ ಗೊತ್ತಿರುವ ಸಂಗತಿಯಾಗಿದೆ. ಈ ರೀತಿಯ ಭಾಷಾ ಪ್ರಯೋಗ ಎಲ್ಲಾ ಭಾಷೆಗಳಲ್ಲೂ ಕಂಡುಬರುತ್ತದೆ.

ಒಟ್ಟಾರೆ ಹೇಳುವುದಾದರೆ, ಖಾತಿಮ್ ಎಂಬ ಶಬ್ದದ ಅರ್ಥ ಸಹ ಸರಿಯಾಗಿ ತಿಳಿದರೆ ಈ ವಚನದ ಅರ್ಥವನ್ನು ತಿಳಿಯಲು ಏನೂ ಕಷ್ಟವಿಲ್ಲ. ಇದೇ ಅರ್ಥದಲ್ಲಿ ಹಝ್ರತ್ ಮೌಲಾನ ರೂಮೀ ರಹ್ಮತುಲ್ಲಾಹಿಅಲೈಹಿ (ನಿಧನ 672 ಹಿಜರಿ) ತನ್ನ ಮಸ್ನವಿ ಎಂಬ ಗ್ರಂಥದಲ್ಲಿ ಈ ರೀತಿ ಹೇಳಿರುವರು :

بہر این خاتم شد است او کہ بجود
مثل او نے بود نے خواہند بود

ಎಂದರೆ "ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಖಾತಮುನ್ನಬಿಯ್ಯೀನ್ ಎಂಬ ಹೆಸರು ಬರಲು ಕಾರಣ-ಯಾವುದೇ ನಬಿ, ಅನುಗ್ರಹಗಳ ಸಂಪಾದನೆಯಲ್ಲಿ ಅವರಿಗೆ ಮುಂಚೆಯಾಗಲಿ ನಂತರವಾಗಲಿ ಅವರಿಗೆ ಸಮಾನರಾಗಲು ಸಾಧ್ಯವಿಲ್ಲ." (ಮಸ್ನವಿ ರೂಮೀ ದಫ್ತರ್ ಶಶಮ್, ಪುಟ 6)

## ಖಾತಮುನ್ನಬಿಯ್ಯೀನ್ ವಚನದ ಕುರಿತು ವಾದಗಳ ಸಾರಾಂಶ

ಸಂಕ್ಷಿಪ್ತವಾಗಿ ಹೇಳುವುದಾದರೆ, ಎಲ್ಲೆಲ್ಲೂ ಲಭ್ಯವಾಗುತ್ತಿರುವ ಪವಿತ್ರ ಖುರ್‌ಆನಿನ ಪ್ರತಿಗಳಲ್ಲಿ ಖಾತಮುನ್ನಬಿಯ್ಯೀನ್ ಎಂದು "ತ" ದ ಅಕಾರದಿಂದ ಈ ಶಬ್ದ ಪ್ರಯುಕ್ತವಾಗಿದ್ದರೂ ಕೆಲವು ಹಳೆಯ ತಫ್ಸೀರ್ ಗ್ರಂಥಗಳಲ್ಲಿ ಅಪರೂಪವಾಗಿ "ಖಾತಿಮ್" ಎಂದು "ತ"ದ ಇಕಾರದ ಒಂದು ಉಚ್ಚಾರ ಕ್ರಮವಿದೆಯೆಂದು ನಿರೂಪಿಸಲಾಗಿರುವ ಕಾರಣ ಅದನ್ನು ಸರಿಯೆಂದು ಒಪ್ಪಿಕೊಂಡು ಇವೆರಡು ಉಚ್ಚಾರಗಳನ್ನು ಅಂಗೀಕರಿಸಿದರೂ ಈ ಶಬ್ದದ ಇರ್ಥ ನುಬುವ್ವತ್ತನ್ನು ಅಂತ್ಯಗೊಳಿಸಿದವ ಎಂದಾಗುವುದಿಲ್ಲ. ಖಾತಮ್ ಎಂದು "ತ"ದ ಅಕಾರದೊಂದಿಗೆ ಅದರ ಅರ್ಥ ನಬಿಗಳ ಮುದ್ರೆ ಎಂದಾಗಿದೆ. ಮುಹಮ್ಮದ್ ಪೈಗಂಬರರ ಆಗಮನದ ನಂತರ ಅವರ ಅಂಗೀಕಾರದ ಮುದ್ರೆ ದೊರೆಯದೆ ಯಾರೂ ನಬಿಯಾಗಲು ಸಾಧ್ಯವಿಲ್ಲ ಎಂದು ಇದರ ಅರ್ಥವಾಗಿದೆ. ಅವರಿಂದ ಅನುಗ್ರಹ ಪಡೆದ ಅವರ ಶಿಷ್ಯನೂ ಸೇವಕನೂ ಆದ ವ್ಯಕ್ತಿ ಮಾತ್ರ ನಬಿಯಾಗಲು ಸಾಧ್ಯ ಎಂದು ಇದರ ಅರ್ಥ. ಖಾತಿಮ್ ಎಂದು "ತ"ದ ಇಕಾರದೊಂದಿಗೆ ಈ ಶಬ್ದದ ಅರ್ಥ, ಪ್ರವಾದಿತ್ವದ ಎಲ್ಲಾ ಅನುಗ್ರಹಗಳನ್ನು ಗಳಿಸಿದ ವ್ಯಕ್ತಿ ಎಂದು. ಅದರ ಅರ್ಥ ಪೈಗಂಬರರು ಅತ್ಯಂತ ಶ್ರೇಷ್ಠ ನಬಿಗಳೆಂದಾಗಿದೆ. ಅವರ ಉನ್ನತ ಸ್ಥಾನವನ್ನು ಬೇರೆ ಯಾವುದೇ ವ್ಯಕ್ತಿ ತಲುಪಲು ಸಾಧ್ಯವಿಲ್ಲ. ಇಷ್ಟು ಸುವ್ಯಕ್ತವಾದ ವ್ಯಾಖ್ಯಾನದ ವಿರುದ್ಧವಾಗಿ ಹೇಳಲು ನಮ್ಮ ವಿರೋಧಿಗಳ ಬಳಿ ಏನಿದೆ? ಈ ಪ್ರಶ್ನೆಯ ಉತ್ತರ ಅವರು ಈ ಆಯತಿಗೆ ನೀಡುವ ಭಾಷಾಂತರದಿಂದ ತಿಳಿಯುತ್ತದೆ. ಅವರು ಹೇಳುತ್ತಾರೆ:

"ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಯಾವನೇ ಪುರುಷನ ಶಾರೀರಿಕವಾಗಿ ತಂದೆಯಲ್ಲ; ಆದರೆ ಅವರು ಅಲ್ಲಾಹನ ರಸೂಲರಾಗಿರುವರು. ಅವರ ಅನಂತರ ನುಬುವ್ವತ್ತಿನ ಅನುಗ್ರಹ ಅಂತ್ಯಗೊಂಡಿತು."

ಈ ನಿಕೃಷ್ಟವಾದ ಅರ್ಥಕ್ಕೂ ನಾವು ಕೊಡುವ ಉತ್ಕೃಷ್ಟವಾದ ಅರ್ಥಕ್ಕೂ ಯಾವುದೇ ದೂರದ ಸಂಬಂಧವಾದರೂ ಇದೆಯೇ? ಹಠಮಾರಿತನದ ಸಂಗತಿ ಪ್ರತ್ಯೇಕವಾದುದಾಗಿದೆ. ಆದರೆ ಪ್ರತಿಯೊಬ್ಬ ನ್ಯಾಯ ಪ್ರಿಯನ ಹೃದಯ, ಮುಹಮ್ಮದ್ ಪೈಗಂಬರರ ಸ್ಥಾನ ಮಹಾತ್ಮೆ ನಾವು ಹೇಳಿರುವ ಅರ್ಥದಲ್ಲಿಯೇ ಇದೆ ಎಂದು ಪದೇ ಪದೇ ಹೇಳುವುದು.

ಒಟ್ಟಾರೆ ಹೇಳುವುದಾದರೆ, ನಮ್ಮ ವಿರೋಧಿಗಳ ನಿಲುವಿನ ಆಧಾರಸ್ತಂಭವಾದ ಖಾತಮುನ್ನಬಿಯ್ಯೀನ್ ವಚನ ಸಹ ನಮ್ಮ ಪರವಾಗಿಯೇ ತೀರ್ಮಾನ ನೀಡಿದೆ. ಈ ವಚನದ ಮೂಲಕ ಪ್ರವಾದಿತ್ವದ ಬಾಗಿಲು ಮುಚ್ಚುವ ಬದಲಾಗಿ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಸ್ಥಾನ ಮಹಾತ್ಮೆಯ ಕಾರಣದಿಂದಾಗಿ ಅವರ ಶಿಷ್ಯರೂ ಸೇವಕರೂ ಅವರ ಪವಿತ್ರವಾದ ಆಧ್ಯಾತ್ಮಿಕ ಶಕ್ತಿಯ ಫಲವಾಗಿ ಮತ್ತು ಅವರ ಅಂಗೀಕಾರದ ಮುದ್ರೆಯನ್ನು ಪಡೆದು ಪ್ರವಾದಿತ್ವದ ಅನುಗ್ರಹಗಳನ್ನು ಪಡೆಯಬಹುದೆಂದು ಸಾಬೀತಾಯಿತು. ಅಲ್ಲಾಹುವಿನ ಅನುಗ್ರಹದ ಕಾರಣದಿಂದ ಅವರು ಅತ್ಯಂತ ಶ್ರೇಷ್ಠ ಪ್ರವಾದಿಗಳಾಗಿರುವರು. ಅತ್ಯಂತ ಶ್ರೇಷ್ಠ ವ್ಯಕ್ತಿಯ ಆಗಮನದ ನಂತರ ಇತರ ಎಲ್ಲಾ ವ್ಯಕ್ತಿಗಳು ಆ ಶ್ರೇಷ್ಠ ವ್ಯಕ್ತಿಯ ಅಧೀನಕ್ಕೊಳಪಡುತ್ತಾರೆ. ಅವರು ಅಬ್‌ತರ್ (ಪುತ್ರ ಸಂತಾನಹೀನ) ರಲ್ಲದ ಕಾರಣದಿಂದಲೂ ಹೀಗಾಗಿದೆ. ಅವರು ಅಲ್‌ಕೌಸರ್ (ಸರ್ವ ಅನುಗ್ರಹಗಳು)ನ ಮಾಲಿಕರಾಗಿದ್ದಾರೆ. ಆತ್ಮ ಸಂಬಂಧವಾದ ಅನುಗ್ರಹಗಳ ಎಲ್ಲಾ ಒರತೆಗಳು ಅವರ ಪರಿಶುದ್ಧ ವ್ಯಕ್ತಿತ್ವದಿಂದ ಹರಿಯುತ್ತವೆ. ಮೊದಲಿನವರ ಮತ್ತು ಕೊನೆಯವರ ಕೊರಳುಗಳು ಅವರ ಮುಂದುಗಡೆ ಬಾಗಿರುತ್ತವೆ. ಇದನ್ನೇ ಸೂಚಿಸುತ್ತಾ ಪೈಗಂಬರರು ನುಡಿದಿದ್ದಾರೆ: انا سيد ولد آدم ولا فخر "ನಾನು ಸಂಪೂರ್ಣ ಮನುಷ್ಯರಾಶಿಯ ನಾಯಕನಾಗಿದ್ದೇನೆ. ಆದರೆ ನನಗೆ ಇದರ ಬಗ್ಗೆ ಅಹಂಕಾರವಿಲ್ಲ. ಏಕೆಂದರೆ ಇವೆಲ್ಲಾ ದೇವರ ಅನುಗ್ರಹಗಳಾಗಿವೆ."

ಪೈಗಂಬರರು ಹೀಗೆಯೂ ಹೇಳಿರುವರು:

لو كان موسى و عيسى حيين لما
وسعهما الا اتباعى

"ಮೂಸಾ ಅಲೈಹಿಸ್ಸಲಾಮರೂ ಈಸಾ ಅಲೈಹಿಸ್ಸಲಾಮರೂ ಈಗ ಜೀವಂತರಾಗಿರುತ್ತಿದ್ದರೆ ಅವರಿಗೆ ನನ್ನನ್ನು ಅನುಸರಣೆ ಮಾಡುವುದಲ್ಲದೆ ಬೇರೆ ನಿವೃತ್ತಿ ಇರುತ್ತಿರಲಿಲ್ಲ" (ಅಲ್‌ಯವಾಖೀತು ವಲ್ ಜವಾಹಿರ್ —ಇಮಾಮ್ ಶಿಅರಾನಿ, ಸಂಪುಟ 2, ಪುಟ 20.)

ಅಲ್ಲಾಹ್! ಅಲ್ಲಾಹ್! ಮುಹಮ್ಮದ್ ಪೈಗಂಬರರು ಎಂತಹ ಶ್ರೇಷ್ಠ ನಬಿಯಾಗಿರುವರು! ಅವರ ಸ್ಥಾನ ಎಷ್ಟು ಉನ್ನತ ಮಟ್ಟದಲ್ಲಿದೆ! ಹಿಂದಿನ ಪ್ರವಾದಿಗಳು ಮಾತ್ರವಲ್ಲ, ಈ ಕಾಲದಲ್ಲಿ ಯಾರ ಕೈಯಲ್ಲಿ ಇಸ್ಲಾಮಿನ ಎರಡನೆಯ ವಿಜಯವು ನಿಶ್ಚಯಿಸಲ್ಪಟ್ಟಿದೆಯೋ ಆ ಮಿಸೀಲೆ ಮಸೀಹ್ (ಈಸಾ ಅಲೈಹಿಸ್ಸಲಾಮರಿಗೆ ಸಮಾನರಾದ) ಮಹಾನ್ ವ್ಯಕ್ತಿ ಸಹ ಅವರ ಸೇವಕರ ಗುಂಪಿನಲ್ಲಿ ನಿಂತಿರುವರು. ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಪರಿಶುದ್ಧವಾದ ಮುದ್ರೆ ಹಿಂದಿನವರ ಮತ್ತು ಮುಂದಿನವರ ಸತ್ಯತೆಯನ್ನು ದೃಢೀಕರಿಸುತ್ತದೆ.

اللهم صل على محمد و على آل محمد
وبارك وسلم

(ಓ ನಮ್ಮ ಅಲ್ಲಾಹ್, ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಮೇಲೆ ನಿನ್ನ ಅನುಗ್ರಹಗಳನ್ನು ಸುರಿಸು; ಅವರ ಬಂಧುಗಳ ಮೇಲೆಯೂ ಅನುಗ್ರಹಗಳನ್ನು ಸುರಿಸು. ಅವರಿಗೆ ಧಾರಾಳವಾಗಿ ನೀಡು. ಅವರಿಗೆ ಶಾಂತಿ ಸಮಾಧಾನ ದಯಪಾಲಿಸು)

# ಪಾಕಿಸ್ತಾನದ ಸಿಂಧ್ ಪ್ರಾಂತ್ಯದ ಗವರ್ನರರಿಗೆ ಒಂದು ಪತ್ರ

**(ಸಿಂಧ್ ಪ್ರಾಂತ್ಯದ ಸಕ್ಕರ್‌ನ ಇಬ್ಬರು ನಿರಪರಾಧಿ ಅಹ್ಮದೀ ಸಹೋದರರಿಗೆ ಮರಣ ದಂಡನೆ ವಿಧಿಸಲಾಗಿದ್ದು ಅವರ ಪೈಕಿ ಒಬ್ಬರು ಪ್ರೊಫೆಸರ್ ನಾಸಿರ್ ಅಹ್ಮದ್ ಖುರೈಷಿಯವರಾಗಿರುವರು. ಇದು ಸಿಂಧ್ ಗವರ್ನರರಿಗೆ ಅವರ ಪುತ್ರ ಬರೆದ ಪತ್ರವಾಗಿದೆ. ಈ ಪತ್ರದಿಂದ ಪಾಕಿಸ್ತಾನ ಸರಕಾರದ ಅಧಾರ್ಮಿಕ ಮತ್ತು ಕ್ರೂರ ನಡವಳಿಕೆಯ ಒಂದು ಸಂಕ್ಷಿಪ್ತ ಚಿತ್ರ ದೊರೆಯುತ್ತದೆ. —ಸಂ.)**

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಂ

ಸಕ್ಕರ್
3-5-'86

ಸಿಂಧ್ ಪ್ರಾಂತ್ಯದ ಬಹುಮಾನ್ಯ ಗವರ್ನರರಾದ ಜಹಾಂದಾದ್ ಸಾಹೇಬರಿಗೆ, ಅಸ್ಸಲಾಮು ಅಲೈಕುಂ.

ಮಹೋನ್ನತರೇ,

ನನ್ನ ತಂದೆಯವರಾದ ಪ್ರೊಫೆಸರ್ ನಾಸಿರ್ ಅಹ್ಮದ್ ಖುರೈಷಿ ಮತ್ತು ನನ್ನ ಚಿಕ್ಕಪ್ಪನವರಾದ ರಫೀ ಅಹ್ಮದ್ ಖುರೈಷಿಯವರನ್ನು ಸುಳ್ಳು ಮೊಕದ್ದಮೆಯಲ್ಲಿ ಸಿಲುಕಿಸಿ ಅನ್ಯಾಯವಾಗಿ ಮರಣ ದಂಡನೆ ಶಿಕ್ಷೆ ವಿಧಿಸಿ ಸಕ್ಕರಿನ ಸೆಂಟ್ರಲ್ ಜೈಲಿನಲ್ಲಿಡಲಾಗಿದೆ. 23-3-'86 ರಂದು ಸಕ್ಕರ್‌ನ ಸೆಂಟ್ರಲ್ ಜೈಲಿನಿಂದ ಮರಣದಂಡನೆ ವಿಧಿಸಲ್ಪಟ್ಟ 34 ಕೈದಿಗಳು ಪರಾರಿಯಾದುದು ತಮಗೆ ತಿಳಿದಿರಬಹುದು. ಅವರು ಈ ಇಬ್ಬರು ಕೈದಿಗಳನ್ನೂ ತಮ್ಮೊಂದಿಗೆ ಓಡಿ ಹೋಗಲು ಹೇಳಿದ್ದರು. ಆದರೆ ಇವರು ಓಡಿ ಹೋಗಲು ನಿರಾಕರಿಸಿ ಈ ರೀತಿ ಹೇಳಿದ್ದರು: "ನಾವು ನಿರಪರಾಧಿಗಳೂ ವಿದ್ಯಾವಂತರೂ ಆಗಿದ್ದೇವೆ. ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ಹೃದಯ ಸಮಾಧಾನದಿಂದಿದೆ."

ಅನಂತರ ಪ್ರಧಾನ ಮಂತ್ರಿ, ಗೃಹಖಾತೆಯ ಕಾರ್ಯದರ್ಶಿ, ಮಂತ್ರಿಗಳು, ಉನ್ನತ ಅಧಿಕಾರಿಗಳು ಮತ್ತು ಮಾರ್ಷಲ್ ಲಾ ಅಧಿಕಾರಿಗಳು ಅಲ್ಲಿಗೆ ಬಂದು ವಸ್ತುಸ್ಥಿತಿಯನ್ನು ತಿಳಿದುಕೊಂಡರು. ಪತ್ರಿಕೆಗಳಲ್ಲೂ ಇವರಿಬ್ಬರೂ ಓಡಿ ಹೋಗಲು ನಿರಾಕರಿಸಿದ ಬಗ್ಗೆ ಹೇಳಿಕೆಗಳು ಪ್ರಕಟಗೊಂಡಿವೆ. ಇವರು ನಿಯಮಗಳನ್ನು ಪಾಲಿಸಿದ ಕಾರಣ ಇವರಿಗೆ ನಿಯಮಗಳು ಸಹ ಆದರಣೀಯ ಸ್ಥಾನ ನೀಡಬೇಕೆಂದು ಸಹ ಬರೆಯಲಾಗಿತ್ತು. ಆದರೆ ಇಲ್ಲಿ ಎಲ್ಲಾ ಸಂಗತಿಗಳುಅವರಿಗೆ ವಿರುದ್ಧವಾಗಿವೆ. ಉದಾಹರಣೆಗೆ :

1) ಅವರನ್ನು ಸಂದರ್ಶನಕ್ಕೆ ಕರೆದು ತರುವಾಗ ಇಬ್ಬರಿಗೂ ಕೈಕೋಳ ತೊಡಿಸಲಾಗುತ್ತಿದೆ. ಚಿಕ್ಕ ಮಕ್ಕಳು ಇದನ್ನು ನೋಡುವಾಗ ಅವರ ಹೃದಯಗಳಲ್ಲಿ ಎಷ್ಟು ವೇದನೆ ಉಂಟಾಗಬಹುದೆಂಬುದನ್ನು ಒಬ್ಬ ಮಕ್ಕಳಿರುವಾತನೇ ಅರಿಯಬಲ್ಲ. ನನ್ನ ತಂದೆಯವರು 25 ವರ್ಷ ರಾಷ್ಟ್ರದ ಸೇವೆ ಮಾಡಿದುದರ ಪ್ರತಿಫಲವಾಗಿ ಅವರನ್ನು ಈ ರೀತಿ ನಡೆಸಿಕೊಳ್ಳಲಾಗುತ್ತಿದೆ!

2) ಅವರಿಗೆ ಸ್ನಾನಮಾಡಲು ಮತ್ತು ಮೈ ಕೈ ತೊಳೆದುಕೊಳ್ಳಲು ಬಹಳ ಕಷ್ಟವಾಗುತ್ತಿದೆ. ಎರಡು ಮೂರು ದಿವಸಗಳಿಗೊಮ್ಮೆ ಸಹ ಸ್ನಾನಕ್ಕೆ ನೀರು ನಿರಾಕರಿಸಲಾಗುತ್ತಿದೆ. ಟೂತ್ ಪೇಸ್ಟ್ ಜೈಲಿನೊಳಗೆ ಕೊಂಡೊಯ್ಯಲು ಸಹ ಅನುಮತಿ ನೀಡಲಾಗುವುದಿಲ್ಲ.

3) ಅವರಿಗೆ ಕ್ಷೌರ ಮಾಡುವಾಗ ಅವರ ಕೈಗಳನ್ನು ಹಿಂಬಾಗಕ್ಕೆ ಎಳೆದು ಕೈಕೋಳ ತೊಡಿಸಿ ಅವರನ್ನು ಅಪಾಯಕಾರಿ ಅಪರಾಧಿಗಳಂತೆ ನೋಡಿಕೊಳ್ಳಲಾಗುತ್ತಿದೆ.

4) ಪಾಯಿಖಾನೆಗೆ ಹೋಗುವಾಗಲೂ ಕೈಕೋಳ ತೊಡಿಸಲಾಗುತ್ತಿದೆ.

5) ನಮ್ಮ ತಂದೆಯುವರು ನಮಗೆ ಬರೆಯುವ ಪತ್ರಗಳನ್ನು ಅಧಿಕಾರಿಗಳು ತಡೆ ಹಿಡಿಯುತ್ತಾರೆ. ನಾವು ಅವರಿಗೆ ಬರೆಯುವ ಕಾಗದಗಳನ್ನೂ ಇದೇ ರೀತಿ ಅಧಿಕಾರಿಗಳು ಇಟ್ಟುಕೊಳ್ಳುತ್ತಾರೆ. ಈ ರೀತಿ ಎರಡು ಕಡೆಯ ಪತ್ರಗಳನ್ನೂ ಸ್ವಾಧೀನಪಡಿಸಿ ಅಧಿಕಾರಿಗಳು ಮೌಲ್ವಿಗಳಿಂದ ಹಣ ಪಡೆದುಕೊಂಡು ಕೊಡುತ್ತಾರೆ. ಈ ಸಂಗತಿ ನಮ್ಮ ತಂದೆಯುವರು ನಮಗೆ ಬರೆದ ಒಂದು ಪತ್ರದಿಂದ ವ್ಯಕ್ತವಾಗುತ್ತದೆ. ಅವರೊಂದು ಪದ್ಯದಲ್ಲಿ ಈ ರೀತಿ ಹೇಳುತ್ತಾರೆ:

ನಮ್ಮ ಪತ್ರಗಳನ್ನು ಸೆನ್ಸರ್ ಮಾಡುತ್ತಾರೆ ಅಧಿಕಾರಿಗಳು,
ಇಷ್ಟವಿರುವ ಪತ್ರಗಳನ್ನು ತಮ್ಮ ಮನೆಗೆ ಒಯ್ಯುತ್ತಾರೆ;
ಮೌಲ್ವಿಗಳಿಂದ ಹಣ ಪಡೆದು ಓದಿ ಹೇಳುತ್ತಾರೆ.

ಮಹೋನ್ನತರೆ, ಇದು ಎಂತಹ ನ್ಯಾಯ! ಜೈಲಿನ ನಿರ್ಬಂಧಕ್ಕೊಳಗಾದ ಜನರಿಗೆ ಪತ್ರಗಳನ್ನು ತಲುಪಲು ಇವರು ಬಿಡುವುದಿಲ್ಲ. ಇದು ದೊಡ್ಡ ಅಕ್ರಮವಾಗಿದೆ.

6) ಇವೆಲ್ಲಾ ವಿಷಯಗಳು ಒಂದು ಕಡೆಯಿರಲಿ. ಮರಣ ದಂಡನೆ ವಿಧಿಸಲ್ಪಟ್ಟ ಕೈದಿಗಳಿಗೆ ಹಿಂಸೆ ನೀಡಬೇಕೆಂದು ಯಾವ ಕಾನೂನಿನಲ್ಲಿ ಬರೆಯಲಾಗಿದೆ. ಇದೆಷ್ಟು ದುಃಖಕರವಾದ ಸಂಗತಿಯಾಗಿದೆ. ಹಿಂಸೆ ನೀಡದಿರಬೇಕಾದರೆ ಹಣ ಕೊಡಿರೆಂದು ಇವರನ್ನು ಕೇಳಲಾಗುತ್ತಿದೆ. ಇದೆಷ್ಟು ಅನ್ಯಾಯಕರವಾಗಿದೆ. ವಿದ್ಯಾವಂತರಾದ ಸಜ್ಜನರನ್ನು ಈ ರೀತಿ ಹಿಂಸಿಸುವುದು ನ್ಯಾಯವೇ? ನಮ್ಮ ತಂದೆಯುವರು ಈ ಸಂಗತಿಗಳನ್ನು ತಮ್ಮ ಒಂದು ಪತ್ರದಲ್ಲಿ ಪದ್ಯ ರೂಪದಲ್ಲಿ ಸೂಚಿಸಿದ್ದಾರೆ.

ಮಹಾ ಪ್ರಭುಗಳೇ,

ಈ ವಿವರಣೆಗಳಿಂದ ಅಲ್ಲಿ ಏನೆಲ್ಲಾ ನಡೆಯುತ್ತಿದೆಯೆಂಬುದರ ಕುರಿತು ತಮಗೆ ಮನಗಾಣಲು ಸಾಧ್ಯವಾದೀತು. ಕಾನೂನನ್ನು ಅನುಸರಿಸುವ ಜನರ ಮೇಲೆ ಎಂತಹ ಅನ್ಯಾಯ ನಡೆಯುತ್ತದೆ ಎಂಬುದು ತಮಗೆ ವ್ಯಕ್ತವಾಗಿರಬಹುದು. ಕೈದಿಗಳಾದ ಅವರ ನಡವಳಿಕೆಯ ಬಗ್ಗೆ ನಾವು ಎಷ್ಟು ಅಭಿಮಾನಗೊಂಡರೂ ಅದು ಕಮ್ಮಿಯಾಗುತ್ತದೆ. ನಮ್ಮ ತಲೆಗಳನ್ನು ನಾವು ಅಭಿಮಾನದಿಂದ ಎತ್ತಿ ನಡೆಯುತ್ತೇವೆ. ಆದರೆ ನಮಗೆ ಅವರನ್ನು ಜೈಲಿನಲ್ಲಿ ನಡೆಸಿಕೊಳ್ಳುವ ರೀತಿಯನ್ನು ನೋಡುವಾಗಲೂ ಅದರ ಕುರಿತು ಕೇಳುವಾಗಲೂ ಬಹಳ ವೇದನೆಯಾಗುತ್ತದೆ.

ಮಹೋನ್ನತರೇ,

ನನ್ನ ತಂದೆಯುವರು ಪ್ರೊಫೆಸರರಾಗಿರುವರು. ಅವರು ಹಿರಿಯರಿಗೂ ಕಿರಿಯರಿಗೂ ವಿದ್ಯೆ ನೀಡುತ್ತಾ 25 ವರ್ಷಗಳನ್ನು ಕಳೆದಿರುವರು. ಆದರೆ ಸಮಾಜ ಅವರ ಮೇಲೆ ಈ ರೀತಿಯ ಅನ್ಯಾಯ ಮಾಡುತ್ತಿದೆ. ನಾವು ಇವರ ಪರವಾಗಿ ನಿಮ್ಮೊಡನೆ ಬೇಡಿಕೊಳ್ಳುತ್ತೇವೆ. ಇವರ ಮೇಲೆ ನಡೆಯುವ ಅನ್ಯಾಯವನ್ನು ಅಲ್ಲಾಹನನ್ನು ಗ್ರಹಿಸಿ ಕೊನೆಗೊಳಿಸಿರಿ. ನ್ಯಾಯಯುತವಾಗಿ ಇವರನ್ನು ನಡೆಸಿಕೊಳ್ಳಿರಿ. ಈ ಮೊದಲು ವಾರಕ್ಕೆ ಎರಡು ಸಲ ಇವರನ್ನು ಸಂದರ್ಶಿಸಲು ಅನುಮತಿ ನೀಡುತ್ತಿದ್ದಂತೆ ಇನ್ನು ಮುಂದೆಯೂ ಅನುಮತಿ ನೀಡಲ್ಪಡಲಿ. ನನ್ನ ಈ ಬೇಡಿಕೆಯನ್ನು ದಯಾಪೂರ್ಣರಾಗಿ ತಾವು ಪರಿಶೀಲಿಸುವಿರೆಂದು ನಂಬುತ್ತೇನೆ. ನಾನು ತಮ್ಮ ದೀರ್ಘಾಯುಷ್ಯಕ್ಕಾಗಿಯೂ ಉನ್ನತ ಸ್ಥಾನಮಾನಗಳಿಗಾಗಿಯೂ ನನ್ನ ಜೀವನ ಪರ್ಯಂತ ಪ್ರಾರ್ಥಿಸುತ್ತಾ ಇರುವೆನು—ವಸ್ಸಲಾಮ್.

**ತನ್‌ವೀರ್ ಅಹ್ಮದ್ ಖುರೈಷಿ**
**ಬಿನ್ ನಾಸಿರ್ ಅಹ್ಮದ್ ಖುರೈಷಿ**
(ಅನ್ನಸ್ರ್ ಉರ್ದು ವಾರ ಪತ್ರಿಕೆ 13–6–'86)

# ಮುಸ್ಲಿಂ ಮಹಿಳಾ ಸಂರಕ್ಷಣೆ ಮಸೂದೆ

ಎನ್. ಎ.

ಮುಸ್ಲಿಂ ಮಹಿಳಾ (ವಿವಾಹ ವಿಚ್ಛೇದನಾ ನಂತರ ಹಕ್ಕು ರಕ್ಷಣೆ) ಮಸೂದೆ ಸಂಸತ್ತಿನಲ್ಲಿ ದೊಡ್ಡ ಬಹುಮತದೊಂದಿಗೆ ಅಂಗೀಕರಿಸಲ್ಪಟ್ಟು ರಾಷ್ಟ್ರಪತಿ ಅದಕ್ಕೆ ಅಂಕಿತ ಹಾಕಿರುವುದರಿಂದ ಅದು ನಿಯಮವಾಗಿರುತ್ತದೆ. 54 ವಿರುದ್ಧ ಹಾಗೂ 372 ಪರ ಮತಗಳಿಂದ ಈ ಮಸೂದೆ ಸ್ವೀಕೃತವಾಯಿತು.

ವಿವಾಹ ವಿಚ್ಛೇದಿತ ಮಹಿಳೆಗೆ ಜೀವನಪರ್ಯಂತ ಅಥವಾ ಪುನರ್ವಿವಾಹದ ತನಕ ಜೀವನಾಂಶ ನೀಡಲಿಕ್ಕಾಗಿ ಪೂರ್ವಪತಿಯನ್ನು ಹೊಣೆಗಾರನನ್ನಾಗಿ ಮಾಡಿಕೊಂಡು ಸಿಆರ್‌ಪಿಸಿ ಸೆಕ್ಷನ್ 125 ಮುಸ್ಲಿಮರಿಗೆ ಸಹ ಅನ್ವಯಿಸುವಂತೆ ಸುಪ್ರೀಂ ಕೋರ್ಟು ಹೊರಡಿಸಿದ ವಿಧಿ "ಮುಸ್ಲಿಂ ಪರ್ಸನಲ್ ಲಾ" ಪ್ರಕಾರ ವೈವಾಹಿಕ ಸ್ವಾತಂತ್ರ್ಯ ಹಕ್ಕುಗಳನ್ನು ಅನುಭವಿಸುತ್ತಿರುವ ಮುಸ್ಲಿಮರೆಡೆಯಲ್ಲಿ ಉಂಟುಮಾಡಿರುವ ಉದ್ವಿಗ್ನತೆ ಮತ್ತು ಅಸ್ವಸ್ಥತೆ ಈ ನಿಯಮ ತಿದ್ದುಪಡಿಯ ಮೂಲಕ ಪರಿಹರಿಸಲ್ಪಟ್ಟಿತು.

ವಿವಾಹ ವಿಚ್ಛೇದಿತ ಸ್ತ್ರೀ ಆಶ್ರಯವಿಲ್ಲದೆ ನಿರ್ಗತಿಕಳಾಗಬೇಕಾಗುತ್ತದೆ ಎಂಬ ಕಾರಣದಿಂದ ವಿವಾಹ ವಿಚ್ಛೇದನ ಮಾಡುವಾತನನ್ನು ಶಿಕ್ಷಿಸಬೇಕೆಂಬಂತೆ ಸುಪ್ರೀಂ ಕೋರ್ಟು ವಿವಾದಗ್ರಸ್ತ ತೀರ್ಪನ್ನು ನೀಡಿತ್ತು. ವಿವಾಹ ವಿಚ್ಛೇದನ ಶಿಕ್ಷಾರ್ಹವಾದ ಅಪರಾಧವಲ್ಲದುದರಿಂದಲೂ ಕುಟುಂಬ ಜೀವಿತದ ಭದ್ರತೆಗೆ ಅತ್ಯಾವಶ್ಯವಾಗಿರುವುದರಿಂದಲೂ ಎಲ್ಲಾ ವಿವಾಹ ವಿಚ್ಛೇದನಕ್ಕೂ ಒಂದೇ ರೀತಿ ಪ್ರತಿಕೂಲ ನಿಯಮವನ್ನು ಅನ್ವಯಿಸುವಂತೆ ಮಾಡುವುದು ವಿವೇಕವಲ್ಲ. ವಿವಾಹವಿಚ್ಛೇದನ ಪ್ರಕ್ರಿಯೆ ಪೂರ್ಣಗೊಂಡರೆ ಪತಿ-ಪತ್ನಿ ಸಂಬಂಧವಾಗಲಿ ಪರಸ್ಪರ ಋಣಾನುಬಂಧವಾಗಲಿ ಬಾಕಿಯುಳಿಯುವುದಿಲ್ಲವೆಂಬುದಾಗಿದೆ ಸತ್ಯ. ಆದುದರಿಂದಲೇ ಅಲ್ಲವೇ ವಿವಾಹ ವಿಚ್ಛೇದನವು ಸಮ್ಮತನೀಯ ಕಾರ್ಯಗಳಲ್ಲಿ ಅತ್ಯಂತ ವಿರೋಧಿಸಲ್ಪಟ್ಟದ್ದಾಗುವುದು ಸಹ. ವಿವಾಹ ವಿಚ್ಛೇದಿತ ಸ್ತ್ರೀ ಅರಕ್ಷಿತೆಯಾಗಿ ದಿನದೂಡಬಾರದು. ಅದಕ್ಕೆ ಇಸ್ಲಾಮೀ ನಿಯಮಾನುಸಾರ ಸಮೀಪದ ಬಂಧುಗಳನ್ನು ಹೊಣೆಗಾರರನ್ನಾಗಿ ಮಾಡುವುದಾಗಿದೆ ಈಗ ಪಾಸಾದ ನಿಯಮ. ಒಬ್ಬನು ನಿರಾವಲಂಬಿಯಾದರೆ, ಆತನು ಸೊತ್ತುಳ್ಳವನಾಗಿರುವಾಗ ವಾರಸುದಾರರಾಗಿರುವವರು ಆತನನ್ನು ಸಂರಕ್ಷಿಸಬೇಕೆಂಬುದಾಗಿದೆ ಇಸ್ಲಾಮಿನ ವಿಧಿ. ವಾರಸುದಾರರಾದ ಬಂಧು ಯಾರೂ ಇಲ್ಲವಾದರೆ "ಬೈತುಲ್ ಮಾಲ್" ಸಂರಕ್ಷಿಸಬೇಕು. ಆದ್ದರಿಂದ ವಿವಾಹವಿಚ್ಛೇದಿತೆ ಇಸ್ಲಾಮೀ ಕುಟುಂಬದಲ್ಲಿ ನಿರಾಶ್ರಿತಳಾಗುವುದಿಲ್ಲ. ಉಪವಾಸ ಬೀಳಬೇಕಾಗಿ ಬಂದರೆ ಸಹ ಪರಿತ್ಯಜಿಸಿದ ಒಬ್ಬ ಪುರುಷನ ತುತ್ತನ್ನವನ್ನು ಆತನು ಅನ್ಯನಾಗಿ ಮಾರ್ಪಟ್ಟಿರುವುದರಿಂದ, ಬೇಡಿತಿನ್ನಲು ಗೌರವಸ್ಥಳಾದ ಓರ್ವ ಮುಸ್ಲಿಂ ಸ್ತ್ರೀ ಸಿದ್ಧಳಿರಲಿಕ್ಕಿಲ್ಲ. ಆದರೆ ನಿರ್ಗತಿಕಳೂ ನಿರಾಶ್ರಿತಳೂ ಅಲ್ಲದ ಸ್ತ್ರೀಗೆ ಸಹ ಮಾಜಿಪತಿ ಜೀವನಾಂಶ ಕೊಡಬೇಕೆಂದು ಶಾಬಾನುವಿನ ಪರವಾಗಿ ನೀಡಲಾದ ತೀರ್ಪಿನಲ್ಲಿ ವ್ಯಕ್ತಗೊಳಿಸಲಾಗಿದೆಯಷ್ಟೆ. ಸುಪ್ರೀಂ ಕೋರ್ಟಿನ ವಿಧಿಯ ನ್ಯೂನತೆಗಳನ್ನು ಹೊಸ ತಿದ್ದುಪಡಿ ನಿಯಮ ನಿವಾರಿಸುವುದರಿಂದ ಅಹ್ಮದಿಯಾ ಜಮಾಅತ್ ಈ ನಿಯಮವನ್ನು ಸ್ವಾಗತಿಸುತ್ತದೆ. ★


## ಅಹ್ಮದಿಯಾ ಸಂದೇಶ

ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ

ಗ್ರಂಥಕರ್ತ: ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್

ಪುಟ: 60 ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: ಉಚಿತ

ಬರೆಯಿರಿ: Book Secretary, Ahmadiyya Muslim Mission,
10-23-1008, Ansari Road, Bunder, Mangalore-575 001.

# ಅಹ್ಮದಿಯರು ಅಕ್ರಮಿಗಳಲ್ಲ

ಎ. ಆರ್.

ಲಾಹೋರಿನಲ್ಲಿ ಒಬ್ಬ ಭಾರತೀಯ ರಾಜತಾಂತ್ರಿಕ ಪ್ರತಿನಿಧಿಯ ಮೇಲೆ ಯಾರೋ ಕೆಲವು ಸಿಖ್ಖರು ಇತ್ತೀಚೆಗೆ ಹಲ್ಲೆ ನಡೆಸಿದ ಘಟನೆಯ ಬೆನ್ನಲ್ಲೇ ಅದರ ಪ್ರತೀಕಾರವೆಂಬಂತೆ ಒಬ್ಬ ಪಾಕ್ ರಾಜತಂತ್ರಜ್ಞರಾದ ತನ್‌ವೀರ್ ಅಹ್ಮದ್‌ರ ಮೇಲೆ ಅಜ್ಞಾತರಾದ ಯಾರೋ ಕೆಲವರು ದೆಹಲಿಯಲ್ಲಿ ಆಕ್ರಮಣವೆಸಗಿದರಷ್ಟೆ.

ಈ ಪ್ರತೀಕಾರ ಹಲ್ಲೆ ನಡೆಸಿದ ಅಜ್ಞಾತರು ಅಹ್ಮದಿಯಾ ಸಂಘಟನೆಗೆ ಸೇರಿದ ಪಾಕಿಸ್ತಾನಿಯರು ಆಗಿರಬಹುದೆಂದು ಸಂಶಯಿಸಲಾಗುತ್ತದೆಂದು ದೆಹಲಿಯಿಂದಿರುವ ಒಂದು ವಾರ್ತೆ ಹೇಳುತ್ತದೆ. ಆದರೆ, "ಅಸಂತೃಪ್ತರಾದ ಸಿಂಧಿಗಳಾಗಲಿ ಬಲೂಚಿಗಳಾಗಲಿ ಈ ಘಟನೆಯ ಹಿಂದೆ ಇರುವ ಸಾಧ್ಯತೆಯನ್ನೂ ತಳ್ಳಿಹಾಕುವಂತಿಲ್ಲ" ಎಂದು ಸಹ ವರದಿಯಲ್ಲಿ ಹೇಳಲಾಗಿದೆ.

ವಾರ್ತೆ ಹೀಗೆ ಮುಂದುವರಿಯುತ್ತದೆ: "ಅಜ್ಮೀರಿಗೆ ತೀರ್ಥಾಟನೆ ಮಾಡಲಿಕ್ಕೂ ಅಹ್ಮದಿಯಾ ಸಂಘಟನೆಯ ಸ್ಥಾಪಕರು ಜನ್ಮತಾಳಿದ ಅಮೃತ್‌ಸರ ಜಿಲ್ಲೆಯ ಖಾದಿಯಾನ್ ಸಂದರ್ಶಿಸಲಿಕ್ಕೂ ಅನೇಕ ಅಹ್ಮದಿಯರು ಭಾರತಕ್ಕೆ ಬಂದಿದ್ದಾರೆ ಎಂಬುದೇ ಮೇಲೆ ಹೇಳಿದ ಸಂಶಯಕ್ಕೆ ಕಾರಣ. ಮಾತ್ರವಲ್ಲ, ಅಹ್ಮದಿಯರು ಇತ್ತೀಚೆಗೆ ಪಾಕ್ ಸರಕಾರದ ವರ್ತನೆಗಳಿಗೆ ವಿರುದ್ಧವಾದ ತಮ್ಮ ಪ್ರತಿಭಟನೆಯನ್ನು ತೀವ್ರಗೊಳಿಸಿದ್ದಾರೆ..."

ಈ ವಾರ್ತೆಯ ಮರೆಯಲ್ಲಿ ಒಂದು ಗೂಢಾಲೋಚನೆ ಇದೆಯೆಂದು ತಿಳಿದುಬರುತ್ತದೆ. ಕಷ್ಟಗಳನ್ನನುಭವಿಸುತ್ತಿರುವ ಅಹ್ಮದಿಯರ ಜೀವನವನ್ನು ಪಾಕಿಸ್ತಾನದಲ್ಲಿ ಇನ್ನೂ ಹೆಚ್ಚು ದುಸ್ತರ ಮಾಡುವ ದುರುದ್ದೇಶದಿಂದ ಭಾರತದ ವಿದೇಶ ಕಾರ್ಯಾಲಯದಲ್ಲಿರುವ ಕೆಲವು ಕುಬುದ್ಧಿಗಳು ಹೆಣೆದ ಕಟ್ಟುಕಥೆ ಇದೆಂದು ಸಂಶಯಪಡುವುದರಲ್ಲಿ ತಪ್ಪೇನೂ ಇಲ್ಲ.

ಪಾಕಿಸ್ತಾನದ ತಿಳಿಗೇಡಿ 'ಉಲಮಾ'ಗಳ ತಾಳಕ್ಕೆ ತಕ್ಕಂತೆ ಕುಣಿಯುವ ಅಜ್ಞಾನಿಗಳಾದ ಜನಸಾಮಾನ್ಯರು ಮತ್ತು ಅವರ ಕಿರಾತ ಆಡಳಿತಾಧಿಕಾರಿಗಳು ಗೈಯುವ ಕುಕೃತ್ಯಗಳಿಗಾಗಿ, ಆ ರಾಷ್ಟ್ರದ ನಿರಪರಾಧಿಯಾದ ಒಬ್ಬ ರಾಜತಾಂತ್ರಿಕ ಪ್ರತಿನಿಧಿಯ ಮೇಲೆ ಹಲ್ಲೆಮಾಡಿ ಪ್ರತಿಭಟನೆ ಸೂಚಿಸುವ ಮಟ್ಟಿಗೆ ಅಹ್ಮದಿಯಾ ಜಮಾಅತಿನ ಕೀಳ್ಮಟ್ಟದ ಒಬ್ಬ ವ್ಯಕ್ತಿಯಾಗಲಿ ಒಡಂಬಡಲಿಕ್ಕಿಲ್ಲವೆಂದು ಧೈರ್ಯದಿಂದ ಹೇಳಬಹುದು. ಪೈಶಾಚಿಕವೂ ಅತ್ಯಂತ ಭೀಕರವೂ ಆದ ಮರ್ದನಗಳಿಗೆ ಗುರಿಯಾಗಿ ಸಹ ಪ್ರತಿಕಾರ ಮಾಡದೆ ತಾಳ್ಮೆಯ ಜಾಗತಿಕ ದಾಖಲೆಯನ್ನು ಸೃಷ್ಟಿಸಿದವರಾಗಿದ್ದಾರೆ ಅವರು. ಪಾಕಿಸ್ತಾನದಲ್ಲಿ ಅರ್ಧ ಕೋಟಿಯಷ್ಟು ಜನಸಂಖ್ಯೆಯಿರುವ ಅಹ್ಮದಿಯರಿಗೆ ಅಲ್ಲಿ ಏನು ಮಾಡಲಿಕ್ಕೆ ಸಾಧ್ಯವಿಲ್ಲ? ಆದರೆ ತಮ್ಮ ಗುರು ಕಲಿಸಿದ್ದು ಪ್ರತಿಯೊಬ್ಬ ಅಹ್ಮದಿ ಸಹನಮೂರ್ತಿಯಾಗಬೇಕೆಂದಾದ ಕಾರಣ ಪ್ರತಿಕಾರ ಪರವಾದ ಅಕ್ರಮ ಕೃತ್ಯವೆಸಗಲು ಅವರಿಂದ ಸಾಧ್ಯವಿಲ್ಲವೆಂಬುದಾಗಿದೆ ಸತ್ಯ.

ಗಾಲಿಯಾನ್ ಸುನ್‌ಕೆ ದುಆ ದೋ  
ಪಾಕೆ ದುಖ್ ಆರಾಮ್ ದೋ  
ಕಿಬ್‌ರ್ ಕೀ ಆದತ್ ಜೊ ದೇಖೋ  
ತುಮ್ ದಿಖಾವೋ ಇನ್ಕಿಸಾರ್

"ಬೈಗುಳ ಕೇಳಿ ನೀವು ಅವರಿಗೋಸ್ಕರ ಪ್ರಾರ್ಥಿಸುತ್ತಾ ಇರಿ; ನೀವು ಸ್ವಯಂ ದುಃಖವನ್ನು ಸಹಿಸಿಕೊಂಡು ಅವರಿಗೆ ಸುಖವನ್ನೂ ಆರಾಮವನ್ನೂ ನೀಡಿರಿ. ಅವರಲ್ಲಿ ಅಹಂಕಾರ ಕಂಡರೆ ನೀವು ಅವರೊಡನೆ ವಿನಯದಿಂದ ತೋರಿಸಿರಿ."

ಇದಾಗಿದೆ ಈ ಕಾಲದ ಪ್ರವಾದಿ – ಹಝ್ರತ್ ಅಹ್ಮದ್ (ಅ) ಅಹ್ಮದಿಯರಿಗೆ ನೀಡಿದ ಪ್ರವರ್ತನ ಮಾರ್ಗರೇಖೆ. ವಸ್ತುಸ್ಥಿತಿ ಹೀಗಿರುವಾಗ, ಪಾಕಿಸ್ತಾನದಿಂದ ತೀರ್ಥಾಟನೆಗೆ ಬರುವ ಅಹ್ಮದಿಯರು ಭಾರತದ ರಾಜಧಾನಿಯಲ್ಲಿ ಪಾಕ್ ರಾಜತಂತ್ರ ಪ್ರತಿನಿಧಿಯ ಮೇಲೆ ಹಲ್ಲೆಗೈದು ಸ್ವಯಂ ಅಪಾಯಕ್ಕೆರಗುವರೆ ಸಿದ್ಧರಾಗುವುದು ಹೇಗೆ? ಆದರೆ, "ಅಸಂತೃಪ್ತರಾದ ಸಿಂಧಿಗ

# ಅಹ್ಮದಿಯಾ ವಾರ್ತೆಗಳು

## ಪಾಕಿಸ್ತಾನದಲ್ಲಿ ಅಹ್ಮದಿಯರಿಗೆ ಪೀಡನೆ

**ಕರಾಚಿ:** ಪಾಕಿಸ್ತಾನದ ಅಹ್ಮದೀ ಮುಸ್ಲಿಮರ ವಿರುದ್ಧ ಪುನಃ ಪೀಡನವನ್ನು ಆರಂಭಿಸಲಾಗಿದೆ. ಅಲ್ಲಿನ ಸೈನಿಕ ಆಡಳಿತಾಧಿಕಾರಿಗಳು ಇವರ ಹಿಂದೆ ಇದ್ದಾರೆಂದು ಕ್ವೆಟ್ಟಾದ ಅಹ್ಮದಿಯಾ ಸಂಘಟನೆಯ ಕಾರ್ಯದರ್ಶಿ ಹಮೀದ್ ಅರ್ಶೀರ್ಖ್ ಹೇಳಿದರು.

ಸಿಯಾಲ್‌ಕೋಟ್‌ನಲ್ಲಿ ಅವರ ಮಸೀದಿಗಳಲ್ಲಿ ಬರೆದಿದ್ದ ಕಲಿಮ (ಪವಿತ್ರ ವಾಕ್ಯ)ವನ್ನು ಪಾಕ್ ಪೋಲೀಸರು ಬಲಪ್ರಯೋಗಿಸಿ ಅಳಿಸಿಬಿಟ್ಟಿದ್ದಾರೆ.

ಕಲಿಮ ಬಾಡ್ಜ್ ಧರಿಸಿದ್ದಕ್ಕೆ ಪಂಜಾಬ್ ಪ್ರಾಂತ್ಯದ ಮಾಜಿ ಶಾಸಕ ಹಾಗೂ ಅಹ್ಮದಿಯಾ ಸಂಘಟನೆಯ ಜಿಲ್ಲಾ ನಾಯಕರೂ ಆದ ಚೌಧರಿ ಮುಹಮ್ಮದ್ ಆಸಾಯಿಯನ್ನು ಸೆರೆಹಿಡಿಯಲಾಗಿದೆ.

ಕ್ವೆಟ್ಟಾದಲ್ಲಿ ಪ್ರಾರ್ಥನಾಲಯಕ್ಕೆ ಪ್ರವೇಶವನ್ನು ತಡೆದ ನಂತರ ಅಧಿಕಾರಿಗಳು ಪ್ರಾರ್ಥನಾಲಯವನ್ನು ಸ್ವಾಧೀನಪಡಿಸಿ ಅಲ್ಲಿದ್ದ ಅಹ್ಮದಿಯಾ ಸಮುದಾಯಕ್ಕೆ ಸೇರಿದ 85 ಮಂದಿಯನ್ನು ಬಂಧಿಸಿರುವರೆಂದು ಹಮೀದ್ ಅರ್ಶೀರ್ಖ್ ಹೇಳಿದರು.

ಪಾಕಿಸ್ತಾನದಲ್ಲಿ ನಡೆಯುತ್ತಿರುವ ಈ ಮರ್ದನಕ್ಕೆ ಲೋಕಾದ್ಯಂತವಿರುವ ಅಹ್ಮದಿಯರು ಪ್ರತಿಭಟಿಸುತ್ತಾರೆ. ಧರ್ಮದ ನಾಮದಲ್ಲಿರುವ ಈ ಭ್ರಾಂತಿಯನ್ನು ಅವರು ವಿರೋಧಿಸುತ್ತಾರೆ.

ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾತರು ಅನುಭವಿಸುತ್ತಿರುವ ಕಿರುಕುಳದ ಬಗ್ಗೆ ಇತ್ತೀಚೆಗೆ ಅಲ್ಲಿಗೆ ಭೇಟಿಯಿತ್ತ ಬ್ರಿಟಿಷ್ ವಿದೇಶಾಂಗ ಕಾರ್ಯದರ್ಶಿ ಜೆಫ್ರಿಹೋ ಉತ್ಕಂಠತೆ ಪ್ರಕಟಗೊಳಿಸಿದ್ದಾರೆ.

(ಮಾತೃಭೂಮಿ 17-6-'86)

---

ಳಾಗಲಿ ಬಲೂಚಿಗಳಾಗಲಿ ಈ ಘಟನೆಯ ಹಿಂದೆ ಇರುವ ಸಾಧ್ಯತೆಯನ್ನೂ ತಳ್ಳಿಹಾಕುವಂತಿಲ್ಲ" ಎಂದು ಸಹ ವರದಿಯಲ್ಲಿ ಹೇಳಿರುವಾಗ ಸಂಗತಿ ವ್ಯಕ್ತವಾಗಿ ಬಿಟ್ಟಿದೆ !

ಅಹ್ಮದಿಯರು ಪ್ರತಿಕಾರ ಮಾಡುವವರಲ್ಲ. ಎಂದಿಗೂ ಎಲ್ಲಿಯೂ ಅವರು ಪ್ರತಿಕಾರಕ್ಕೆ ಸಿದ್ಧರಾದ ಒಂದು ಉದಾಹರಣೆಯೂಗಲಿ ಇಲ್ಲ. ಭಾರತ ವಿಭಜನೆ ಕಾಲದಲ್ಲುಂಟಾದ ಕೋಮು ಗಲಭೆ ಸಂದರ್ಭದಲ್ಲಿ, ಅತ್ಯಂತ ತೀವ್ರವಾದ ಅರಕ್ಷಿತಾವಸ್ಥೆಯಲ್ಲಿ ಕೂಡ, ಸ್ವಯಂ ಆಕ್ರಮಗಳಿಗೆ ಗುರಿಯಾಗಿಯೂ ಸಹ ಶತ್ರುಗಳ ಸೇವೆಯನ್ನು ಮಾಡಿದವರಾಗಿದ್ದಾರೆ ಅಹ್ಮದಿಯರೆಂದು ಸ್ಟೇಟ್ಸ್‌ಮನ್ ಪತ್ರಿಕೆಯ ವಿಶೇಷ ವರದಿಗಾರ ಆ ಕಾಲದಲ್ಲಿ ಬರೆದಿದ್ದರು. ಆ ಗಲಭೆಕಾಲದಲ್ಲಿ ಕೂಡ ಅಹ್ಮದಿಯರ ಕೈಗಳು ಪರಿಶುದ್ಧವಾಗಿದ್ದುವೆಂದು ಡಾ। ಶಂಕರ್ ದಾಸ್ ಮೆಹ್ರಾರಂತಹ ಖ್ಯಾತ ಹಿಂದೂ ನೇತಾರರು ಸಾಕ್ಷ್ಯವಹಿಸಿದ್ದರು. ಇವಕ್ಕೆಲ್ಲಾ ಹೊರತಾಗಿ, ಖಾದಿಯಾನಿನಲ್ಲಿ ಆ ಕಾಲದಲ್ಲಿ ಯಾವನಾದರೂ ಸಿಖ್ಖ ಅಥವಾ ಹಿಂದೂ ಬಾಂಧವನಿಗೆ ಯಾವುದಾದರೂ ರೀತಿಯಲ್ಲಿರುವ ಶಾರೀರಿಕ ಪೀಡನವಾಗಲಿ ಧನನಷ್ಟವಾಗಲಿ ಉಂಟಾದರೆ, ಖಾದಿಯಾನಿನ ಅಹ್ಮದಿಯರಾದ ಬಹುಸಂಖ್ಯಾತ ನಿವಾಸಿಗಳ ಪ್ರಶ್ನಾತೀತ ನಾಯಕನೆಂಬ ನೆಲೆಯಲ್ಲಿ ಅದರ ಸಂಪೂರ್ಣ ಹೊಣೆಯನ್ನು ವಹಿಸಲು ತಾನು ಸಿದ್ಧನೆಂದೂ ಆ ಸಂಬಂಧವಾಗಿ ಏನೇ ನಷ್ಟಪರಿಹಾರ ನೀಡಲು ತಾನು ಬದ್ಧನೆಂದೂ ಘೋಷಿಸಿದ ಅನನ್ಯಸಾಧಾರಣ ನೇತೃತ್ವದ ಯಜಮಾನನಾದ ಓರ್ವ ವೀರನಾಯಕನ ಉತ್ಕೃಷ್ಟ ಶಿಕ್ಷಣದಲ್ಲಿ ಬೆಳೆದ ಅಹಿಂಸಾ ವ್ರತಿಗಳಾದ, ಆದರ್ಶಪೌರರಾದ ಅಹ್ಮದಿಯರಲ್ಲಿ ಇಂತಹ ಸುಳ್ಳಾರೋಪವನ್ನು ಹೊರಿಸುವುದು ಅತ್ಯಂತ ಪರಿಹಾಸ್ಯಕರವಾಗಿದೆ. ದೆಹಲಿಯಲ್ಲಿ ಪಾಕ್ ರಾಜತಾಂತ್ರಿಕ ಪ್ರತಿನಿಧಿಯ ಮೇಲೆ ಹಲ್ಲೆ ಮಾಡಿದ್ದು ಅಹ್ಮದಿಯರಾದರೆ ಅವರನ್ನು ಸೆರೆಹಿಡಿದು ಕೋರ್ಟಿನಲ್ಲಿ ಹಾಜರುಪಡಿಸಿ ಅಪರಾಧವನ್ನು ಸಾಬೀತುಪಡಿಸುವರೆ ಈ ವಾರ್ತೆಗೆ ಬಿ.ಬಿ.ಸಿ.ಯೂ ಸೇರಿದ ಮಾಧ್ಯಮಗಳ ಮೂಲಕ ಲೋಕವ್ಯಾಪಕ ಪ್ರಚಾರ ನೀಡಿದ ಅಧಿಕಾರಿಗಳನ್ನು ನಾವು ಆಹ್ವಾನಿಸುತ್ತೇವೆ. ! ★

# ಅಹ್ಮದಿಯಾ ಮಸೀದಿ ಧ್ವಂಸ – ಪಾಕ್ ಮುಲ್ಲಾ ಧರ್ಮಸೇವೆ

ಪಾಕ್ ಗಡಿನಾಡು ಪ್ರಾಂತ್ಯದ ಮರ್ದಾನ್ ಎಂಬಲ್ಲಿ ಅಹ್ಮದಿಯಾ ಮಸೀದಿಯೊಂದನ್ನು ಇತ್ತೀಚೆಗೆ ಧ್ವಂಸ ಮಾಡಲಾಯಿತು.

ಈದುಲ್ ಅಝ್ಹಾದ ಹಿಂದಿನ ದಿನ ಮರ್ದಾನಿನ ಜಮಾಅತೆ ಇಸ್ಲಾಮಿಗೆ ಸೇರಿದವರು ಅಹ್ಮದಿಯರು ಈದುಲ್ ಅಝ್ಹಾದ ಖುರ್ಬಾನ್ ಕೊಡಬಾರದೆಂದು ಮುನ್ನೆಚ್ಚರಿಕೆ ನೀಡಿದರು. ಇಸ್ಲಾಮಿಗೆ ವಿರುದ್ಧವಾದ ಈ ಅಕ್ರಮ ಕೇಳಿಕೆಯ ನಂತರ ಆಗೋಸ್ತು 17ರಂದು ಬೆಳಿಗ್ಗೆ 8 ಗಂಟೆಗೆ ಅಹ್ಮದಿಯರು ತಮ್ಮ ಮಸೀದಿಯಲ್ಲಿ ಈದ್ ಪ್ರಾರ್ಥನೆ ಸಲ್ಲಿಸುತ್ತಿರುವಾಗ ಅನೇಕ ಪೋಲೀಸರು ಮಸೀದಿಗೆ ಧಾಳಿಯಿಟ್ಟರು. ಮಹಿಳೆಯರು ಮತ್ತು ಮಕ್ಕಳು ಸೇರಿ ಸುಮಾರು 90 ಮಂದಿಯನ್ನು ಅವರು ದಸ್ತಗಿರಿ ಮಾಡಿದರು. ಅದೇ ಸಂದರ್ಭದಲ್ಲಿ ಅನೇಕ ಹಲ್ಲೆಕೋರರು ಕೆಲವು ಮೌಲ್ವಿಗಳ ನೇತೃತ್ವದಲ್ಲಿ ಅಲ್ಲಿಗೆ ಧಾವಿಸಿ ಬಂದು ಪೋಲೀಸರ ಸಮಕ್ಷಮದಲ್ಲೇ, ಅವರ ನೆರವಿನಿಂದಲೇ ಮಸೀದಿಯ ಫೇನ್ ಮತ್ತು ಇತರ ಪೀಠೋಪಕರಣಗಳನ್ನು ಲೂಟಿ ಮಾಡಿದರು. ಆ ಬಳಿಕ ಮಸೀದಿಯನ್ನು ಕೆಡವಲು ಆರಂಭಿಸಿದರು. ಅವರ ಈ ಕುಕೃತ್ಯ ದಿನವಿಡೀ ಮುಂದುವರಿಯಿತು. ಹಾಗೆ ಮಸೀದಿಯನ್ನು ಸಂಪೂರ್ಣವಾಗಿ ನಾಶಪಡಿಸಲಾಯಿತು. ಮಸೀದಿಯಲ್ಲಿದ್ದ ಪವಿತ್ರ ಖುರ್‌ಆನ್ ಮತ್ತು ಇತರ ಬೆಲೆಬಾಳುವ ಗ್ರಂಥಗಳನ್ನು ಬೆಂಕಿಗೆ ಆಹುತಿ ಮಾಡಲಾಯಿತು. ಈ ಎಲ್ಲಾ ಕಾರ್ಯಾಚರಣೆ ಹಯಾತುಲ್ಲಾ ಎಂಬ ಅಸಿಸ್ಟೆಂಟ್ ಪೋಲೀಸ್ ಕಮಿಷನರ್‌ನ ಮೇಲ್ನೋಟದಲ್ಲಿ ನಡೆಯಿತು. ದಸ್ತಗಿರಿಯಾದವರಲ್ಲಿ ಮರ್ದಾನಿನ ಅಮೀರ್ ಆದಂ ಖಾನ್ ಸಾಹೇಬ್ ಮತ್ತು ಅಹ್ಮದೀ ಸಿವಿಲ್ ಹಾಗೂ ಮಿಲಿಟರಿ ಅಧಿಕಾರಿಗಳೂ ಸೇರಿದ್ದಾರೆ.

## ವೃದ್ಧ ಅಹ್ಮದಿಯ ಹತ್ಯೆ

ಪಾಕಿಸ್ತಾನದ ಹೈದರಾಬಾದಿನ ಮಾಜಿ ಅಮೀರ್ ಜ। ಬಾಬು ಅಬ್ದುಲ್ ಗಫ್ಫಾರ್ ಸಾಹೇಬ್ ಎಂಬ 80 ವಯಸ್ಸಿನ ವಯೋವೃದ್ಧರು ಕಳೆದ ಜುಲೈ 9ರಂದು ಅಹ್ಮದೀ ವಿರೋಧಿಯರಿಂದ ಹತ್ಯೆಯಾದರು. ಅವರು ತನ್ನ ಅಂಗಡಿಯಲ್ಲಿ ಒಬ್ಬಂಟಿಗನಾಗಿರುವ ಸಂದರ್ಭದಲ್ಲಿ ದುಷ್ಕರ್ಮಿಗಳು ಅವರ ಮೇಲೆರಗಿ ಅನೇಕ ಶಿವಿತಗೊಳಪಡಿಸಿ ಕೊಲೆ ಮಾಡಿದರು. ಜ। ಬಾಬು ಅಬ್ದುಲ್ ಗಫ್ಫಾರ್ ಸಾಹೇಬರು ಓರ್ವ ಗಣ್ಯವ್ಯಕ್ತಿಯಾಗಿದ್ದರು.

## ಈದುಲ್ ಫಿತ್ರ್ ದಿನ ಅಹ್ಮದೀ ಮಹಿಳೆಯ ಕೊಲೆ

ಪಾಕಿಸ್ತಾನದ ಮರ್ದಾನ್ ಎಂಬಲ್ಲಿ ಈದುಲ್ ಫಿತ್ರ್ ದಿನದಂದು ರುಖ್ಸಾನ ಎಂಬ ಅಹ್ಮದೀ ಮಹಿಳೆ ಹತ್ಯೆಗೀಡಾದರು. ಈದ್ ದಿನದಂದು ತಾನು ತನ್ನ ಪತಿಯೊಂದಿಗೆ ಅಹ್ಮದಿಯಾ ಮಸೀದಿಗೆ ಹೋಗಿ ಪ್ರಾರ್ಥನೆ ಸಲ್ಲಿಸಿ ಬಂದುದನ್ನು ನೋಡಿ ಸಹಿಸದ ಅಹ್ಮದೀ ವಿರೋಧಿಯಾಗಿದ್ದ ಮೈದುನ ಬಶಾರತ್ ಎಂಬವನು ಅತ್ತಿಗೆಯೊಂದಿಗೆ ವಾಗ್ವಾದಕ್ಕಿಳಿದು ಪಿಸ್ತೂಲಿನಿಂದ ಎರಡು ಗುಂಡುಗಳನ್ನು ಹಾರಿಸಿ ಕೊಂದನು.

## ಕಲಿಮ ಬ್ಯಾಡ್ಜ ಧರಿಸಿದ್ದಕ್ಕೆ ಜೈಲುವಾಸ

ಕ್ವೆಟ್ಟಾ: ಕಲಿಮ ಬ್ಯಾಡ್ಜ ಧರಿಸಿದ್ದಕ್ಕೆ ಐವರು ಅಹ್ಮದಿಯರಿಗೆ ಜೈಲುಶಿಕ್ಷೆಯನ್ನೂ ಜುಲ್ಮಾನೆಯನ್ನೂ ಕಳೆದ ಜುಲೈ 10ರಂದು ಮ್ಯಾಜಿಸ್ಟ್ರೇಟರೋರ್ವರು ವಿಧಿಸಿದ್ದಾರೆ.

ಅಬ್ದುಲ್ ರಹ್ಮಾನ್ ಖಾನ್, ಅಬ್ದುಲ್ ಮಜೀದ್, ರಫೀ ಅಹ್ಮದ್ ಮತ್ತು ಝಿಯಾಉದ್ದೀನ್ ಎಂಬವರಿಗೆ ತಲಾ ಒಂದು ವರ್ಷದ ಸಜೆಯನ್ನೂ ಒಂದು ಸಾವಿರ ರೂಪಾಯಿ ಜುಲ್ಮಾನೆಯನ್ನೂ ವಿಧಿಸಲಾಗಿದೆ. ಮುಹಮ್ಮದ್ ಹಯಾತ್ ಎಂಬ ವಯೋವೃದ್ಧರಿಗೆ 3000 ರೂಪಾಯಿ ಜುಲ್ಮಾನೆಯನ್ನು ವಿಧಿಸಲಾಗಿದೆ. ತೀರ್ಪನ್ನು ಆಲಿಸಿದಾಗ ಮೇಲಿನವರ ಪೈಕಿ ಒಬ್ಬರು ಆವೇಶದಿಂದ ಕಲಿಮವನ್ನು ಜೋರಾಗಿ ಉಚ್ಚರಿಸಿದ ಕಾರಣದಿಂದ ಅವರಿಗೆ ಮತ್ತೂ 6 ತಿಂಗಳ ಸಜೆಯನ್ನು ವಿಸ್ತರಿಸಲಾಯಿತು.

# ಪಾಕ್ ಅಹ್ಮದಿಯೂ ಮರ್ದನ ವಿರುದ್ಧ ಅಮೇರಿಕನ್ ಕಾಂಗ್ರೆಸ್ ಗೊತ್ತುವಳಿ

ವಾಶಿಂಗ್ಟನ್, ಆಗಸ್ಟ್: 8 (ಯು. ಎನ್.ಐ.) ಪಾಕಿಸ್ತಾನದಲ್ಲಿ ಮೂವತ್ತೈದು ಲಕ್ಷದಷ್ಟಿರುವ ಅಹ್ಮದೀ ಮುಸಲ್ಮಾನರನ್ನು ಹಿಂಸಿಸುವುದನ್ನು ತಡೆಯಬೇಕೆಂದು ಅಮೇರಿಕನ್ ಕಾಂಗ್ರೆಸ್ (ಅಮೇರಿಕನ್ ಪಾರ್ಲಿಮೆಂಟ್) ಪಾಕಿಸ್ತಾನಕ್ಕೆ ಮನವಿ ಮಾಡಿದೆ. ಕಾಂಗ್ರೆಸ್‌ನ ಸದಸ್ಯರಾದ ಓಹಿಯೋ ಪ್ರಾಂತ್ಯದ ಟೋನಿ ಪಿ. ಹಾಲ್ ಮಂಡಿಸಿದ ಠರಾವನ್ನು ಕಾಂಗ್ರೆಸ್ ಸರ್ವಾನುಮತಿಯಿಂದ ಅಂಗೀಕರಿಸಿತು. ಅಮೇರಿಕನ್ ಸೆನೆಟ್ (ಮೇಲ್ಮನೆ) ಈ ಠರಾವನ್ನು ನಿನ್ನೆಯೇ ಅಂಗೀಕರಿಸಿದೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಅಮೇರಿಕದ ಸಂಪೂರ್ಣ ಶಾಸನಾಂಗವು ಪಾಕಿಸ್ತಾನ ಸರ್ಕಾರಕ್ಕೆ ಈ ಠರಾವುಗಳ ಮೂಲಕ ಅಹ್ಮದಿಯರ ವಿರುದ್ಧ ಸರಕಾರದ ಪತಿಯಿಂದ ನಡೆಸಲಾಗುವ ದೌರ್ಜನ್ಯಗಳನ್ನು ನಿಲ್ಲಿಸಬೇಕೆಂದು ಒತ್ತಾಯ ಪೂರ್ವಕ ಸೂಚನೆ ನೀಡಿದೆಯೆಂದು ತಿಳಿಯಬೇಕಾಗಿದೆ. ಮಿಸ್ಟರ್‌ಹಾಲ್ ತನ್ನ ಠರಾವಿನಲ್ಲಿ ಪಾಕಿಸ್ತಾನ ಸರಕಾರ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಅಹ್ಮದಿಯರ ವಿರುದ್ಧ ದೌರ್ಜನ್ಯವೆಸಗುತ್ತಾ ಬರುತ್ತಿದೆಯೆಂದು ಆರೋಪಿಸಿರುವರು. 1984ರ ಅಧ್ಯಾದೇಶ ಕ್ರಮಾಂಕ 30 ಪ್ರಕಾರ ಪಾಕಿಸ್ತಾನದ ಅಹ್ಮದೀ ಮುಸಲ್ಮಾನ ತನ್ನ ನಂಬಿಕೆಯ ಪ್ರಚಾರ ಮಾಡಲು ಇಚ್ಛಿಸಿದರೆ 3 ವರ್ಷದ ಸೆರೆಮನೆ ವಾಸವಲ್ಲದೆ ಆಸ್ತಿಪಾಸ್ತಿಗಳ ಜಪ್ತಿಗೆ ಸಹ ಒಳಪಡಲು ಸಾಧ್ಯವಿದೆಯೆಂದು ಅವರು ಹೇಳಿದರು. ಐಕ್ಯ ರಾಷ್ಟ್ರ ಸಂಘದ ಅಲ್ಪಸಂಖ್ಯಾತರ ಹಕ್ಕುಗಳ ಸಂರಕ್ಷಣೆಯ ಉಪ ಸಮಿತಿಯು ಆರ್ಡಿನೆನ್ಸ್ ನಂಬ್ರ 30 ಅಲ್ಪಸಂಖ್ಯಾತರಿಗೆ ಅವರ ಧರ್ಮವನ್ನು ನಂಬಲು ಮತ್ತು ಪ್ರಚಾರಗೊಳಿಸಲು ಇರುವ ಹಕ್ಕನ್ನು ಮೊಟಕುಗೊಳಿಸಿದೆಯೆಂದು ಆಪಾದಿಸಿ, ಈ ಅಧ್ಯಾದೇಶವನ್ನು ರದ್ದುಪಡಿಸಬೇಕೆಂದು ಪಾಕ್ ಸರಕಾರದೊಡನೆ ಆಗ್ರಹಪಡಿಸಿದೆ ಎಂಬ ಸಂಗತಿಯನ್ನು ಅಮೇರಿಕನ್ ಕಾಂಗ್ರೆಸ್ ಒತ್ತಿ ಹೇಳಿದೆ. ಅಹ್ಮದಿಯೂ ವಿಶ್ವಾಸಗಳ ಪ್ರಚಾರವನ್ನು ತಡೆದು ಅಹ್ಮದಿಯರನ್ನು ಸದೆಬಡೆಯುವುದೇ ಪಾಕ್ ಸರಕಾರದ ಸ್ಪಷ್ಟ ಧೋರಣೆಯೆಂದು ಮಿಸ್ಟರ್‌ಹಾಲ್ ಅಮೇರಿಕನ್ ಕಾಂಗ್ರೆಸ್‌ಗೆ ಮನದಟ್ಟು ಮಾಡಿಕೊಟ್ಟರು.

ಅಹ್ಮದಿಯರ ಹಕ್ಕುಗಳನ್ನು ಧ್ವಂಸಗೊಳಿಸಲು ಪಾಕಿಸ್ತಾನ ಸರಕಾರ ನಡೆಸುತ್ತಿರುವ ಕಾರ್ಯಗಳನ್ನು ಅಮೇರಿಕನ್ ಕಾಂಗ್ರೆಸ್ ಗಮನಿಸುತ್ತಾ ಇದೆಯೆಂದು ಅದು ತನ್ನ ಠರಾವಿನಲ್ಲಿ ಹೇಳಿದೆ.

("ಹಿಂದ್ ಸಮಾಚಾರ್" 9-8-1986)

## 21ನೇ ಬ್ರಿಟನ್ ಅಹ್ಮದಿಯೂ ವಾರ್ಷಿಕ ಸಮ್ಮೇಳನ

ಕಳೆದ ಜುಲಾಯಿ 25ರಿಂದ 27ರ ವರೆಗೆ ಲಂಡನಿಗೆ ಸಮೀಪದ ಟಿಲ್‌ಫೋರ್ಡ್ ಪಟ್ಟಣದ ಇಸ್ಲಾಮಾಬಾದ್‌ನಲ್ಲಿ 21ನೇ ಬ್ರಿಟನ್ ಅಹ್ಮದಿಯೂ ವಾರ್ಷಿಕ ಸಮ್ಮೇಳನವು ಜರಗಿತು. 50 ರಾಷ್ಟ್ರಗಳಿಂದ ಸುಮಾರು 10,000 ಪ್ರತಿನಿಧಿಗಳು ಈ ಸಮ್ಮೇನದಲ್ಲಿ ಭಾಗ ವಹಿಸಿದರು.

ಕಳೆದ ಎರಡು ವರ್ಷಗಳಲ್ಲಿ ಜಗತ್ತಿನಾದ್ಯಂತ 200 ಹೊಸ ಮಸೀದಿಗಳನ್ನು ನಿರ್ಮಿಸಲಾಗಿದೆಂದೂ 28 ರಾಷ್ಟ್ರಗಳಲ್ಲಿ 254 ಹೊಸ ಅಹ್ಮದಿಯೂ ಕೇಂದ್ರಗಳನ್ನು ಸ್ಥಾಪಿಸಲಾಗಿದೆಂದೂ ಅಹ್ಮದಿಯೂ ಖಲೀಫ ಹಝ್ರತ್ ತಾಹಿರ್ ಅಹ್ಮದ್ ಸಾಹೇಬ್ ಉದ್ಘಾಟನಾ ಭಾಷಣದಲ್ಲಿ ಹೇಳಿದರು.

ಪುರುಷನಿಂದ ಪ್ರಾರಂಭಿಸಲಾದ ಮಹಿಳಾ ವಿಮೋಚನ ಸಂಘಟನೆ ಲೋಕದಲ್ಲಿ ಒಂದೇ ಒಂದು ಮಾತ್ರವೇ ಇದೆ; ಸ್ತ್ರೀಯರ ಹಕ್ಕುಗಳಿಗಾಗಿ ಹೋರಾಡಿದ ಆ ಮಹಾವ್ಯಕ್ತಿ ಹಝ್ರತ್ ಮುಹಮ್ಮದ್ ಪೈಗಂಬರರೇ ಆಗಿದ್ದಾರೆ ಎಂದು ಮಹಿಳೆಯರನ್ನು ಸಂಬೋಧಿಸುತ್ತಾ ಅವರು ನುಡಿದರು.

## ಅಮೇರಿಕದಲ್ಲಿ 38ನೇ ವಾರ್ಷಿಕ ಸಮ್ಮೇಳನ

ಅಮೇರಿಕದಲ್ಲಿ 38ನೇ ಅಹ್ಮದಿಯಾ ವಾರ್ಷಿಕ ಸಮ್ಮೇಳನವು ಕಳೆದ ಜೂನ್ 27, 28 ಮತ್ತು 29ರಂದು ವಾಷಿಂಗ್ಟನ್ ಡಿ. ಸಿ.ಯ ಜಾರ್ಜ್‌ಟೌನ್ ಯುನಿವರ್ಸಿಟಿಯಲ್ಲಿ ಜರಗಿತು.

ಪ್ರಥಮ ದಿನದಂದು ಮಜ್‌ಲಿಸ್ ಖುದ್ದಾಮುಲ್ ಅಹ್ಮದಿಯಾ, ಅನ್ಸಾರುಲ್ಲಾ ಮತ್ತು ಲಜ್ನಾಇಮಾಇಲ್ಲಾ ಸಭೆಗಳು ಪ್ರತ್ಯೇಕ ಪ್ರತ್ಯೇಕವಾಗಿ ಸಮಾವೇಶಗೊಂಡವು.

ದ್ವಿತೀಯ ದಿನದ ಉದ್ಘಾಟನಾ ಭಾಷಣವನ್ನು ಅಮೇರಿಕದ ಅಹ್ಮದಿಯಾ ಮಿಶನರಿ ಮೌಲಾನ ಶೈಕ್ ಮುಬಾರಕ್ ಅಹ್ಮದ್ ಸಾಹೇಬ್ ಮಾಡಿದರು. ಡಾ। ಇಹ್‌ಸಾನುಲ್ಲಾಹ್ ಝಫರ್ "ಇಸ್ಲಾಂ ಮತ್ತು ಮಾನವ ಹಕ್ಕುಗಳು" ಎಂಬ ಬಗ್ಗೆ ಮಾತಾಡಿದರು. ಜ। ಮುಹಮ್ಮದ್ ಹಾರೂನ್ (ವಾಷಿಂಗ್ಟನ್ ಡಿ.ಸಿ.) "ಇಸ್ಲಾಮಿ ಜಿಹಾದ್" ಕುರಿತು ಭಾಷಣವಿತ್ತರು. ಜ। ಫಝುಲ್ ಅಬ್ದುಲ್ಲಾ ಅಹ್ಮದ್ (ಬೋಸ್ಟನ್) "ಪಾಪ ವಿಮುಕ್ತಿ" ಸಂಬಂಧಿಸಿ ಮಾತಾಡಿದರು.

ತೃತೀಯ ದಿನದ ಅಧಿವೇಶನ ಗಸ್ಟನ್‌ಹಾಲ್‌ನಲ್ಲಿ ಸಮಾವೇಶಗೊಂಡಿತು. ಅಲ್‌ಹಾಜ್ ಯಾಕೂಬ್ ಸಾಹೇಬ್ (ಚಿಕಾಗೋ) ಪಾಶ್ಚಾತ್ಯ ಮತ್ತು ಅಮೇರಿಕನ್ ಸಂಸ್ಕೃತಿಯ ಅನೈತಿಕತೆಯ ಕುರಿತು ಮಾತಾಡುತ್ತಾ ಇಸ್ಲಾಂ ಸೂಚಿಸುವ ಪರಿಹಾರ ಮಾರ್ಗದ ಕುರಿತು ಪ್ರತಿಪಾದಿಸಿದರು. ಡಾ। ಮಸ್‌ಊದ್ ಅಹ್ಮದ್ ಸಾಹೇಬ್ ಕಾಝಿ "ಪ್ರಾರ್ಥನೆಯ ಮಹತ್ವ"ದ ಕುರಿತು ಭಾಷಣ ಮಾಡಿದರು. ಅಬ್ದುಲ್‌ರಬ್ ಅನ್ವರ್ ಖಾನ್ (ಲಾಸ್ ಏಂಜಲ್ಸ್) "ಮುಸ್ಲಿಂ ಸಾಮಾಜಿಕ ಜೀವನ" ಎಂಬ ವಿಷಯದ ಬಗ್ಗೆ ಮಾತನಾಡಿ, ಇಸ್ಲಾಂ ತೋರಿಸುವ ಜೀವನ ಮಾರ್ಗವನ್ನು ಅನುಸರಿಸದ ಪಾಶ್ಚಾತ್ಯರು ಮತ್ತು ಅಮೇರಿಕನರು ಯಾವ ರೀತಿ ನೈತಿಕ ಹಾಗೂ ಆಧ್ಯಾತ್ಮಿಕ ಅಧೋಗತಿಯನ್ನು ಹೊಂದಿದ್ದಾರೆಂದು ವಿವರಿಸಿದರು. ಡಾ। ಸಯ್ಯದ್ ಮುಹಮ್ಮದ್ ಯೂಸುಫ್ (ಕೆನಡಾ) "ವಿಜ್ಞಾನಕ್ಕೆ ಮುಸ್ಲಿಮರ ಕೊಡುಗೆ" ಎಂಬ ವಿಷಯದ ಬಗ್ಗೆ ಮಾತನಾಡುತ್ತಾ ಮುಸ್ಲಿಮರ ಸೇವೆ ಗೋಚರವಾಗದ ವಿಜ್ಞಾನದ ಯಾವುದೇ ರಂಗ ಬಾಕಿಯಿಲ್ಲವೆಂದು ಹೇಳಿದರು.

## ಅಮೇರಿಕದಲ್ಲಿ ಹೊಸ ಮಸೀದಿಗಳೂ ಪ್ರಚಾರ ಕೇಂದ್ರಗಳೂ

ನ್ಯೂಯೋರ್ಕ್, ಲಾಸ್‌ಏಂಜಲ್ಸ್, ಚಿಕಾಗೋ, ಡೆಟ್ರಾಯ್ಟ್, ಎಂಬೀ ಕಡೆಗಳಲ್ಲಿ ಅಹ್ಮದಿಯಾ ವತಿಯಿಂದ ಮಸೀದಿಗಳನ್ನೂ ಪ್ರಚಾರಕೇಂದ್ರಗಳನ್ನೂ ನಿರ್ಮಿಸುವರೆ ನಿವೇಶಗಳನ್ನೂ ಕಟ್ಟಡಗಳನ್ನೂ ಖರೀದಿಸಲಾಗಿದೆ. ಈ ವಿಷಯವನ್ನು ಅಮೇರಿಕದ ಅಹ್ಮದಿಯಾ ಅಮೀರ್ ಅವರು ಇತ್ತೀಚೆಗೆ ನಡೆದ ಅಹ್ಮದಿಯಾ ವಾರ್ಷಿಕ ಸಮ್ಮೇಳನದಲ್ಲಿ ಬಹಿರಂಗಪಡಿಸಿದರು. ವಾಷಿಂಗ್ಟನ್ ಹೆಡ್‌ಕ್ವಾಟರ್ಸ್‌ನಲ್ಲಿ ಕೂಡ 9 ಎಕ್ರೆ ಜಮೀನನ್ನು ಖರೀದಿಸಲಾಗಿದೆ ಎಂದು ಸಹ ಅವರು ಹೇಳಿದರು.

### ನಿಧನ ವಾರ್ತೆ

## ಜ॥ ಜಿ. ಕೆ. ಮುಹ್ಮೂದ್ ಸಾಹೇಬ್

ಮೂಲತಃ ಮಂಜೇಶ್ವರದವರಾದ ಜ। ಜಿ. ಕೆ. ಮಹ್ಮೂದ್ ಸಾಹೇಬರು ಕಳೆದ ಜೂನ್ 8ರಂದು ಸಕಲೇಶಪುರ ತಾಲೂಕಿನ ವಣಗೂರಿನಲ್ಲಿರುವ ತನ್ನ ಸ್ವಗೃಹದಲ್ಲಿ ಸುಮಾರು 85ನೇ ವಯಸ್ಸಿನಲ್ಲಿ ನಿಧನರಾದರು. (ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್). ವಣಗೂರಿಗೆ ಬಂದು ನೆಲೆಸುವ ಮೊದಲು ಶುಕ್ರವಾರಸಂತೆಯಲ್ಲಿ ವಾಸಹೂಡಿದ್ದ ಕಾಲದಲ್ಲಿ (ಸುಮಾರು 30 ವರ್ಷಗಳ ಮೊದಲು) ಜ। ಮುಹ್ಮೂದ್ ಸಾಹೇಬರು ಅಹ್ಮದಿಯತ್ ಸ್ವೀಕರಿಸಿದ್ದರು. ಶುಕ್ರವಾರಸಂತೆಯಲ್ಲಿ ಮೊತ್ತಮೊದಲಿಗೆ ಅಹ್ಮದಿಯಾ ಜಮಾಅತಿಗೆ ಸೇರಿದವರು ಅವರೇ ಆಗಿರುವರು. ಅಹ್ಮದಿಯತ್ ಸ್ವೀಕರಿಸಿದ ಕಾರಣದಿಂದ ಅವರು ಅನೇಕ ಕಷ್ಟನಷ್ಟಗಳಿಗೆ ಈಡಾಗಿದ್ದರು. ದಿವಂಗತರು ಪತ್ನಿ, 6 ಗಂಡು ಮಕ್ಕಳು ಮತ್ತು 2 ಹೆಣ್ಮಕ್ಕಳನ್ನು ಅಗಲಿದ್ದಾರೆ.

ಅಲ್ಲಾಹನು ಮೃತರಿಗೆ ಮಗ್‌ಫಿರತನ್ನು ದಯಪಾಲಿಸಲಿ. ಆಮೀನ್.


## Ahmadiyya English Literature

1. Introduction to the Study of the Holy Quran
   By Hazrath Mirza Bashiruddin Mahmood Ahmad
2. The Philosophy of the Teachings of Islam
   By Hazrat Mirza Gulam Ahmad
3. Characteristics of the Quranic Teachings
   By Hazrat Mirza Bashiruddin Mahmood Ahmad
4. The Holy Prophet Muhammad
   By Hazrat Mirza Bashiruddin Mahmood Ahmad
5. Ahmadiyya Movement
   By Hazrat Mirza Bashiruddin Mahmood Ahmad
6. What is Ahmadiyyat?
   By Hazrat Mirza Bashiruddin Mahmood Ahmad
7. The Economic Structure of Islamic Society
   By Hazrat Mirza Bashiruddin Mahmood Ahmad
8. The New World Order of Islam
   By Hazrat Mirza Bashiruddin Mahmood Ahmad
9. Truth About Khatme Nabuwat
   By Hazrat Mirza Bashir Ahmad M.A.
10. Islam and Slavery By Hazrat Mirza Bashir Ahmad, M.A.
11. Forty Gems of Beauty By Hazrat Bashir Ahmed, M.A.
12. Our Teachings By Hazrat Mirza Ghulam Ahmad
13. An Interpretation of Islam By Laura Viccia Vaglieri
14. Muhammad the Most Successful Prophet
    By Moulana Sharif Ahmad Amini
15. The Goal of Man and the Way to Reach it
    By Muhammad Karimullah Naujawan & Dr. Hafiz Saleh Muhammad Allahdin; Ph. D
16. Jesus in India By Hazrat Mirza Ghulam Ahmad
17. A Review of Christianity By Hazat Mirza Ghulam Ahmad
18. Four Questions by a Christian and their Answers
    By Hazrat Mirza Ghulam Ahmad
19. How to get rid of the Bondage of Sin
    By Hazrat Mirza Ghulam Ahmad
20. Where did Jesus Die? By J. D. Shams
21. Did Jesus Redeem Mankind?
22. The Tomb of Jesus By Sufi Mutiur Rahman Bengalee, M. A.
23. The Christian Doctrine of Atonement
    By Dr. M. M. Sadiq. D.D. LL.D S.S.P (London)
24. Why did early Christians accept Islam? By J. D. Shams
25. Latest Findings about Jesus Christ

Write to : **Secretary for Mission Works**

Sadr Anjuman Ahmadiyya, Qadian-143 516 (Punjab)

Regd. with the Registrar of Newspapers for India Regd. No. R. N. 27354/75
**YUGARASHMI Kannada Quarterly, Oct. 1986 / Ikha 1365**




English Translation of the
HOLY QURAN
with Arabic Text &
Extensive Index

**Price : Rs. 20-00**
**Postage Extra**

Write to:
**NAZIR DAWAT-O-TABLIGH**
Sadr Anjuman Ahmadiyya
Qadian - 143 516 (Punjab)

ಎಲ್ಲಾ ಬಗೆ ಹಂಚುಗಳಿಗೆ ವಿಚಾರಿಸಿರಿ:

# STANDARD TILERY

**KADUR**
**CHICKMAGALUR DISTRICT**

**RAJA MARK** Roofing Tiles, Ridges, Wall Tiles, Span Tiles, Floorings, Decorative Tiles, Ceilings, Etc. Etc.

**ALL CLAY PRODUCTS AVAILABLE**

Edited and Published by Muhammad Yusuf on behalf of Jamaath Ahmadiyya at 10-23-1008, Ansari Road, Bunder, Mangalore-575 001. Phone: 32039
Printed at Jubilee Printing Press, Ansari Road, Bunder, Mangalore-575 001.